ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ತಗಡೂರು

ಪ್ರಧಾನ ಸಂಪಾದಕರು
**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು
**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು
**ಡಾ. ಹೆಚ್.. ಎಸ್. ಉಷಾರಾಣಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**TAGADURU:** An Introduction Book on Places in Karnataka that Played a Major Role in the Freedom Struggle, Written by Dr. H.S. USHARANI, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಹೆಚ್. ಎಸ್. ಉಷಾರಾಣಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕದಲ್ಲಿರುವ ಹೋರಾಟದ ೭೫ ಸ್ಥಳಗಳ ಕುರಿತು ಕಿರುಪುಸ್ತಕ ಪ್ರಕಟಿಸಲು 'ತಗಡೂರು' ವಿಷಯ ಕುರಿತು ಬರೆಯಲು ಕೇಳಿದಾಗ, ಸಮ್ಮತಿಸಿ ವಿಷಯ ಸಂಗ್ರಹಿಸಲಾರಂಭಿಸಿದೆ. ಈಗಾಗಲೇ ಒಮ್ಮೆ ೨೦೦೭ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ನಂಜನಗೂಡಿನಲ್ಲಿ ಏರ್ಪಡಿಸಿದ್ದ ತನ್ನ ವಾರ್ಷಿಕ ಸಮ್ಮೇಳನದಲ್ಲಿ 'ತಗಡೂರ ಪ್ರಭುಗಳು' ಪ್ರಬಂಧ ಮಂಡಿಸಿದ್ದೆ. ಇದರ ಸಲುವಾಗಿ ತಗಡೂರಿಗೆ ಹೋಗಿ ಅಲ್ಲಿಯ ನೀರಿಲ್ಲದ ಕೆರೆ, ದೇವಾಲಯಗಳನ್ನು ವೀಕ್ಷಿಸಿ ಊರಿನ ಪಕ್ಷಿನೋಟ ಪಡೆದು ಹಿಂತಿರುಗಿದ್ದೆ. ಇದೀಗ ಸ್ವಾತಂತ್ರ್ಯ ಹೋರಾಟದ ಸ್ಥಳದ ಹಿನ್ನೆಲೆಯಲ್ಲಿ ಊರಿನಲ್ಲಿ ಚಳುವಳಿಗೆ ಪ್ರೇರಕವಾದ ಸ್ಥಳೀಯ ಸನ್ನಿವೇಶಗಳನ್ನು ಚಿಂತಿಸಲಾರಂಭಿಸಿದೆ. ಇದರ ಸಲುವಾಗಿ ಈ ಊರಿಗೆ ಮೂರು ಬಾರಿ ಭೇಟಿ ನೀಡಿ ಬರಹಕ್ಕೆ ಸಿದ್ಧಪಡಿಸಿದೆ. ಕಿರುಹೊತ್ತಿಗೆಗೆ ಪುಟದ ಮಿತಿಯಿಂದಾಗಿ ಬರವಣಿಗೆಗೆ ಅಗತ್ಯವುಳ್ಳ ವಿಚಾರಗಳನ್ನು ಮಾತ್ರ ತಿಳಿಸಲು ಯತ್ನಿಸಿದ್ದೇನೆ.

ಅಂದು ಮೈಸೂರು ಸಂಸ್ಥಾನದಲ್ಲಿದ್ದ ಈ ಗ್ರಾಮ ಹಿಂದೆ ಮಹಾನಾಡು, ಹಿರಿಯನಾಡಾಗಿ ಸ್ಥಳೀಯ ಪ್ರಭುಗಳ ನೇತೃತ್ವದಲ್ಲಿ ಮೆರೆದಿತ್ತು. ಅವರು ಧರ್ಮ ಸಂಸ್ಕೃತಿಯ ರಕ್ಷಕರಾಗಿದ್ದು, ಸಂದರ್ಭಾನುಸಾರ ಪ್ರಾಣತ್ಯಾಗ ಮಾಡಲು ಸಿದ್ಧರಾಗಿದ್ದರು. ಇದಕ್ಕೆ ಇಲ್ಲಿಯ ವೀರಗಲ್ಲುಗಳೇ ಸಾಕ್ಷಿ. ಈ ನಿಟ್ಟಿನಲ್ಲಿ ತಗಡೂರಿನ ಐತಿಹಾಸಿಕ ಹಿನ್ನೋಟ ನೀಡಲಾಗಿದೆ. ಇಂಥ ವೀರರನಾಡು ತಗಡೂರು. ಇಲ್ಲಿ ಲಭ್ಯವಿರುವ ಗಂಗರು, ಹೊಯ್ಸಳರು, ವಿಜಯನಗರದ ಅರಸರ ಶಾಸನಗಳೇ ಸ್ಥಳೀಯ ವಿದ್ಯಮಾನಗಳನ್ನು ತಿಳಿಸುತ್ತದೆ.

ಈ ಊರಿನ ವಿಶೇಷ ಆಕರ್ಷಣೆಯೇ ಸತ್ಯಾಗ್ರಹ ಆಶ್ರಮದ ಆವರಣದಲ್ಲಿರುವ ಚರಕ, ಮಗ್ಗ, ಮಳಿಗೆಯ ನೋಟ. ಇತಿಹಾಸ ಬಲ್ಲವರಿಗೆ ರೋಮಾಂಚನವನ್ನುಂಟುಮಾಡುತ್ತವೆ. ಈ ದೃಶ್ಯಗಳು ಅಂದಿನ ಹೋರಾಟದ ದಿನಗಳಿಗೆ ನಮ್ಮನ್ನು ಕೊಂಡೊಯ್ಯುತ್ತವೆ. ಇಂದು ಕೆಲವು ಮಾರ್ಪಾಟುಗಳೊಂದಿಗೆ

ಖಾದಿ ಕಾರ್ಯಾಲಯ, ಗಾಂಧಿ ಆಶ್ರಮ ತಗಡೂರಿನಲ್ಲಿದ್ದು ಕರ್ನಾಟಕ ಸರ್ವೋದಯ ಸಂಘ, ಬೆಂಗಳೂರು ಇವರ ಆಶ್ರಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮೋದ್ಯೋಗದಿಂದಾಗಿ ೬೦ಕ್ಕೂ ಹೆಚ್ಚು ಮಂದಿ ಮಹಿಳೆಯರು ಈ ಆಶ್ರಮದ ಆಶ್ರಯದಲ್ಲಿ ತಮ್ಮ ಜೀವನದ ಬೆಳಕು ಕಂಡಿದ್ದಾರೆ. ಖಾದಿ ಆಶ್ರಮವೇ ಇಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಸ್ಮರಿಸುವಂತೆ ಮಾಡುತ್ತದೆ. ನೂಲುವುದು, ನೇಯುವುದು, ಚಾಪೆ ಹೆಣೆಯುವುದು, ಬಟ್ಟೆ ತಯಾರಿಕೆಯ ವಿವಿಧ ಹಂತಗಳು ನಡೆಯುತ್ತಿದ್ದುದನ್ನು ಚಿಂತಿಸಲು ಆಸ್ಪದ ನೀಡುತ್ತದೆ. ಈ ದಿಸೆಯಲ್ಲಿ ನಡೆದ ಸಂಘಟನೆ, ಚಳುವಳಿಗಳ ಸ್ವರೂಪ, ದುಡಿದ ಮಹನೀಯರ ಕಾರ್ಯವೈಖರಿಯನ್ನು ಬಹು ಕುತೂಹಲದಿಂದ ಅಧ್ಯಯನ ಮಾಡಲು ಪ್ರೇರಣೆ ನೀಡುತ್ತದೆ. ಏಕೆಂದರೆ ತಗಡೂರಿನಲ್ಲಿ ಸ್ವರಾಜ್ಯ ಮಂದಿರ ಸ್ಥಾಪನೆ, ರಚನಾತ್ಮಕ ಕಾರ್ಯಚಟುವಟಿಕೆಗಳು ಭರದಿಂದ ಸಾಗಿದ್ದವು.

ತಗಡೂರಿನ ಬಗ್ಗೆ ಮಾಹಿತಿ ಕಲೆ ಹಾಕಲು ಸ್ಥಳೀಯರನ್ನು ಸಂಪರ್ಕಿಸಿದಾಗ ಆಡಿಯೋ ನೀಡಿ ಸಹಕರಿಸಿದ ಮೋಹನ (ಕೇಶವಮೂರ್ತಿಗಳ ಪುತ್ರ), ನಾಗರತ್ನಮ್ಮ ಮತ್ತು ಯಶೋದಮ್ಮ ಅವರಿಗೆ,

ಬಸವರಾಜು (ತಗಡೂರು ಖಾದಿ ಆಶ್ರಮ), ಸ್ಥಳೀಯ ಇತಿಹಾಸ ಮತ್ತು ನಂಬಿಕೆ ಕುರಿತು ಮಾಹಿತಿ ನೀಡಲು ಸಹಕರಿಸಿದ ರವೀಂದ್ರಕುಮಾರ್. ಬಿ. ಎಸ್ ಮತ್ತು ಚಂದ್ರಪ್ಪಗೌಡ ಜಿ. ಆರ್, (ಜನತಾ ಪ್ರೌಢಶಾಲೆ, ತಗಡೂರು), ಸೂರ್ಯನಾರಾಯಣರಾವ್, ಟಿ. ಆರ್. ನಾಗೇಂದ್ರ ಮತ್ತು ಶಾಸನತಜ್ಞ ಹೆಚ್. ಎಂ. ನಾಗರಾಜರಾವ್ ಅವರಿಗೆ, ಇಡೀ ಊರಿನ ಬಗ್ಗೆ ಕವನ ರೂಪದಲ್ಲಿ ಮಾಹಿತಿ ನೀಡಿದ ಮಧುಕರರಾವ್ ಅವರಿಗೆ, ಕ್ಷೇತ್ರ ಕಾರ್ಯ ಕೈಗೊಂಡಾಗ ಸಹಕರಿಸಿದ ಸಹೋದರಿ ರಾಜೇಶ್ವರಿ ಮತ್ತು ಕರಡು ಪ್ರತಿ ತಿದ್ದಿದ ಅನ್ನಪೂರ್ಣ ಅವರಿಗೆ, ಅಂದವಾಗಿ, ತಪ್ಪಿಲ್ಲದೆ, ಡಿ.ಟಿ.ಪಿ ಮಾಡಿದ ಕವಿತಾ ದಿವಾಕರ್ ಅವರಿಗೆ, ಈ ಕಿರುಹೊತ್ತಿಗೆಯ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದ ಡಾ. ಎಸ್. ಜಿ. ರಾಮದಾಸ ರೆಡ್ಡಿ ಅವರಿಗೆ,

ನನ್ನ ಆತ್ಮೀಯ ಕೃತಜ್ಞತೆಗಳು.

ಮೈಸೂರು **ಹೆಚ್. ಎಸ್. ಉಷಾರಾಣಿ**

೨೨/೧೨/೨೦೨೧

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ತಗಡೂರು | ೧೫ |
| ಗ್ರಂಥಋಣ | ೫೮ |
| ಛಾಯಾಚಿತ್ರಗಳು | ೬೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೯ |

# ತಗಡೂರು

ನಂಜನಗೂಡು ತಾಲ್ಲೂಕು (ಮೈಸೂರು ಜಿಲ್ಲೆ) ಕೇಂದ್ರದಿಂದ ಸುಮಾರು ೧೫ ಕಿ.ಮೀ. ದೂರದಲ್ಲಿರುವ ತಗಡೂರು 'ಗಾಂಧಿ ಮೆಟ್ಟಿದ' ನಾಡೆಂದು ಪ್ರಸಿದ್ಧಿ ಪಡೆದಿದೆ. ಹಿಂದೆ ದೇವರ ಸನ್ನಿಧಿಯಲ್ಲಿ ಯಂತ್ರ ಕಟ್ಟುತ್ತಿದ್ದ ಊರಿದು. ಯಂತ್ರ ಕಟ್ಟುತ್ತಿದ್ದುದರಿಂದ ಯಂತ್ರಪುರಿ ಎಂದಾಯಿತು. ಯಂತ್ರ ಅಂದರೆ ತಗಡು ಅಥವಾ ತಾಮ್ರದ ಹಾಳೆ ಎಂದರ್ಥ. ಯಂತ್ರ–ತಂತ್ರದ ಬಳಕೆಗೆಂದು ತಗಡನ್ನು ಪೂರೈಸುತ್ತಿದ್ದ ಊರಿಗೆ ತಗಡೂರು ಎಂದು ಹೆಸರು ಬಂದಿರಬಹುದೆಂದು ಅಂದಾಜು ಮಾಡಬಹುದು. ಏಕೆಂದರೆ ಇಲ್ಲಿ ಮೂರು ದೊಡ್ಡ ದೇವಾಲಯಗಳಿವೆ. ಅವು ಯಾವುವೆಂದರೆ ಲಕ್ಷ್ಮೀನಾರಾಯಣ ದೇವಾಲಯ, ಮೂಲಸ್ಥಾನೇಶ್ವರ ಮತ್ತು ಅಂಕನಾಥೇಶ್ವರ.

ಸ್ಥಳೀಯರ ನಂಬಿಕೆ ಪ್ರಕಾರ ಜನರ ಆಡುಮಾತಿನಲ್ಲಿ ನಂಜನಗೂಡು ಗರಳಾಪುರಿ, ತಗಡೂರು ಯಂತ್ರಪುರಿ, ಮೈಸೂರು ಮಹಿಷಪುರಿ ಎಂದು ಹೆಸರುವಾಸಿಯಾಗಿತ್ತು.

ಗ್ರಾಮೀಣ ಜನತೆ ನಾಟಿ ಔಷಧಿ ತಯಾರಿಕೆಯಲ್ಲಿ ಸಿದ್ಧಹಸ್ತರು. ಗಿಡಮೂಲಿಕೆಗಳು, ವನೌಷಧಿ ಸಸ್ಯಗಳ ಬಗ್ಗೆ ತಿಳಿದವರು. ರೋಗರುಜಿನಗಳು ಬಂದಾಗ ದೇವರ ಸನ್ನಿಧಿಯಲ್ಲಿ ಯಂತ್ರ ತಾಯಿತ ಕಟ್ಟುತ್ತಿದ್ದರು. ಇದಕ್ಕೆ ಬಳಸುತ್ತಿದ್ದ ಯಂತ್ರವನ್ನು ತಗಡಿನಿಂದ ಮಾಡುತ್ತಿದ್ದರು. ಹಾಗೆಯೇ ತಗಡತ್ತಿ ಸಸ್ಯದ ಔಷಧೀಯ ಗುಣ ಬಲ್ಲವರಾಗಿದ್ದು ಅದನ್ನು ಜಜ್ಜಿ ಔಷಧವಾಗಿ ಬಳಸುತ್ತಿದ್ದರು. ಅಲ್ಲದೆ ತಾಮ್ರದ ತಗಡಿನಲ್ಲಿ ಶಾಸನ ಬರೆಯುತ್ತಿದ್ದರು. ಹೀಗೆ ತಗಡು, ತಗಡತ್ತಿ ಪದಗಳಿಂದ ಈ ಊರಿಗೆ ತಗಡೂರು ಎಂದು ಹೆಸರು ಬಂದಿದೆ.

ಹಿರಿಯರು ತಿಳಿಸುವಂತೆ ಈ ಊರನ್ನು ತಗಡನಾಯಕ ಎಂಬ ಮಾಂಡಲಿಕ ಹಿಂದೆ ಆಳುತ್ತಿದ್ದ. ಈತ ಹತ್ತು ಕೇರಿಗೆ ಮುಖ್ಯಸ್ಥನಾಗಿದ್ದ. ಅವು

ಯಾವುವೆಂದರೆ ತೆಂಕಲಕೇರಿ, ಬಡಗಲಕೇರಿ, ಮೂಡಲಕೇರಿ, ಪಡುವಲುಕೇರಿ, ಮೇಗಲಕೇರಿ, ಕೀಳನಕೇರಿ, ತಮ್ಮಡಿಕೇರಿ, ಆರವಕೇರಿ (ಬ್ರಾಹ್ಮಣರದ್ದು) ಮುಂತಾದ ಬಡಾವಣೆಗಳಿಗಷ್ಟೇ ಸೀಮಿತವಾಗಿತ್ತು. ಊರು ಚಿಕ್ಕದಾಗಿತ್ತು. ಮುಖ್ಯಸ್ಥನ ಹೆಸರೇ ಊರಿಗೆ ಖಾಯಂ ಆಯಿತೆಂಬುದು ಮತ್ತೊಂದು ವಿವರಣೆ.

ಈ ಊರಿನ ದೇವಾಲಯಗಳ ಸುತ್ತ ಬಿದ್ದಿರುವ ವೀರಗಲ್ಲುಗಳು, ಶಾಸನಕಲ್ಲು ತಗಡೂರಿನ ಇತಿಹಾಸ ಹೇಳುತ್ತವೆ. ಸದ್ಯಕ್ಕೆ ಪ್ರಕಟವಾಗಿರುವ ಶಾಸನಗಳಲ್ಲಿ ತಗಡೂರನ್ನು ಹಿರಿಯ ಮಹಾನಾಡು, ಹಿರಿಯನಾಡು, ತಗಡೂರುಸೀಮೆ, ತಗಡೂರ ಸ್ಥಳ, ತಗಡೂರ ಹೋಬಳಿ ಎಂದು ಉಲ್ಲೇಖಿಸಲಾಗಿದೆ. ಈ ಹಿರಿಯನಾಡು ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರ ಗಮನ ಸೆಳೆದಿತ್ತು.

ಇಲ್ಲಿ ಪ್ರಾಚೀನ ಕಾಲದಿಂದಲೂ ಕೃಷಿ ಪ್ರಧಾನ ಕಸುಬು. ಕೃಷಿಕರು ರಾಜನಿಗೆ, ಸ್ಥಳೀಯ ಆಳ್ವಿಕೆಗಾರನಿಗೆ ಸೈನಿಕ ಸೇವೆ ಸಲ್ಲಿಸಬೇಕಾಗಿತ್ತು. ಇವರ ತ್ಯಾಗ ಬಲಿದಾನ ಗುರುತಿಸಿ ಸ್ಥಳೀಯರು ಗೌರವಿಸುತ್ತಿದ್ದರು. ಶತ್ರುಗಳ ವಿರುದ್ಧ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನು ಬಳಸಿ ಊರಿನ ರಕ್ಷಣೆಗೆ ತಮ್ಮ ನಾಯಕನ ನೇತೃತ್ವದಲ್ಲಿ ಹೋರಾಡುತ್ತಿದ್ದರು. ಆ ನಾಯಕ ಅಥವಾ ಮುಖ್ಯಸ್ಥನೇ ಗೌಡನೆನಿಸಿದ್ದ. ಉದಾಹರಣೆಗೆ ತಗಡೂರು ಗ್ರಾಮದ ಕ್ರಿ.ಶ. ೯೬೯ರ ತಾಮ್ರ ಶಾಸನದ ಪ್ರಕಾರ ಗಂಗ ದೊರೆ ಹರಿವರ್ಮ ತಳವನಪುರದಲ್ಲಿ (ತಲಕಾಡು) ರಾಜ್ಯಭಾರ ಮಾಡುತ್ತಿದ್ದಾಗ ರಾಣಿವಾಸದ ಭಂಡಾರವನ್ನು ದೋಚಲಾಗಿತ್ತು. ಆ ಸಂದರ್ಭದಲ್ಲಿ ಕೊಚ್ಚಟ ಕೊತ್ತಗೌಡನ ಮಗ ಕೋರ್ಯಾತಗೌಡ ಎಂಬಾತ ಶತ್ರುಗಳ ವಿರುದ್ಧ ಹೆಂಜಾರೆ ಕದನದಲ್ಲಿ ಹೋರಾಡಿ ತನ್ನ ಪರಾಕ್ರಮ ಪ್ರದರ್ಶಿಸಿದ್ದನು. ಇದಕ್ಕೆ ಪ್ರತಿಯಾಗಿ ಆತನಿಗೆ ಬಡಗೆರೆನಾಡ ಅಪ್ಪೊಗಲ್ಲಾ ಎಂಬ ಗ್ರಾಮವನ್ನು ಸರ್ವಬಾಧಾಪರಿಹಾರವಾಗಿ ಬಿಟ್ಟು ಕೊಡಲಾಗಿತ್ತೆಂದು ಶಾಸನದಿಂದ ಗೊತ್ತಾಗುತ್ತದೆ. ಅಲ್ಲದೆ ಕೋರ್ಯಾತಗೌಡ ದುಷ್ಟ ಕುದುರೆಗಳ ಸವಾರಿಯಲ್ಲಿ ಪರಿಣತನಾಗಿದ್ದ; ಆಶ್ರಯ ಬೇಡಿ ಬಂದವರನ್ನು ರಕ್ಷಿಸುವ ವೀರನು. ಈತನಿಗೆ ಗ್ರಾಮದತ್ತಿ ಬಿಟ್ಟಿದ್ದಕ್ಕೆ ಸಾಕ್ಷಿಗಳಾಗಿದ್ದವರಲ್ಲಿ ಕೊತ್ತಮಂಗಲದ ನಂದಿಯರು, ಗಣಿಗನೂರ ಅನದಕರು, ತಲಕಾಡ ಹನ್ನುವರು ಮತ್ತು ಮದ್ದೂರ ಗಣೆಯರು ಎಂದು ತಿಳಿಸುತ್ತದೆ.



ತಗಡೂರಿನ ಅಂಕನಾಥೇಶ್ವರ ಸಿದ್ದೇಶ್ವರ ದೇವಾಲಯದ ದಕ್ಷಿಣ ದಿಕ್ಕಿನ ಬಾಗಿಲಿನ ಬಳಿ ನೆಟ್ಟಿರುವ ಕ್ರಿ.ಶ. ೧೧೮೮ರ ಶಾಸನದಲ್ಲಿ ತಗಡೂರ ಕೊಮ್ಮೆಯರ ಮಾದಗೌಡನ ಮಗ ಕುಬಗೌಡನೂ ಮೊಗೂರವರು (ಮೂಗೂರು) ಯಾವುದೋ ಘರ್ಷಣೆಯಲ್ಲಿ ತೊಡಗಿದ್ದು ಕುಬಗೌಡ ಮರಣ ಹೊಂದಿದಂತೆ ತೋರುತ್ತದೆ. ಹಾಗಾಗಿ ಸಮಸ್ತ ಕೊಮ್ಮೆಯರು ಜೊತೆಗೂಡಿ ಹಿರಿಯ ಹೊಲದಲ್ಲಿ ನೆತ್ತರು ಕೊಡುಗೆಯಾಗಿ ೫೦೦ ಮಣ್ಣು ಬಿಟ್ಟರೆಂದು ಗೊತ್ತಾಗುತ್ತದೆ. ಇವರ ನಡುವೆ ಘರ್ಷಣೆಗೆ ಕಾರಣ ತಿಳಿಯುವುದಿಲ್ಲ. ಎರಡು ಊರುಗಳ ನಡುವೆ ಹೋರಾಡಿ ಮಡಿದವನ ಕುಟುಂಬಕ್ಕೆ ಗೌರವಾರ್ಥವಾಗಿ ಭೂಮಿ ಬಿಟ್ಟರೆಂದು ಸ್ಪಷ್ಟವಾಗುತ್ತದೆ.

ಕೊಮ್ಮೆ ಕುಲದ ಗೌಡರ ಶಾಖೆಗಳು ಇತರ ಕಡೆಗಳಲ್ಲೂ ಇದ್ದವು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೊಯ್ಸಳ ಸೋಮೇಶ್ವರನ ಕ್ರಿ.ಶ. ೧೨೩೦ರ ಭೀಮನಹಳ್ಳಿ ಶಾಸನವು ಕೊಮ್ಮೆಯರಿಗೆ ಮೇರುವೆನಿಸಿದ್ದ ಹಾಗೂ ಧರ್ಮಪ್ರತಿಪಾಲಕರೆನಿಸಿದ್ದ ಮೂವರು ಗೌಡರನ್ನು ಹೆಸರಿಸುತ್ತದೆ. ಅವರು ಮದ್ದಗೌಡ, ಹೆಮ್ಮಗೌಡ ಮತ್ತು ಮಾದಿಗೌಡರು. ಇವರ ಮಕ್ಕಳು ತಮ್ಮ ಕುಲದೇವರಾದ ಕೊಮ್ಮೇಶ್ವರ ದೇವರನ್ನು ಪ್ರತಿಷ್ಠೆ ಮಾಡಿ ಶಕವರುಷ ೧೧೫೧ನೆಯ ವಿರೋಧಿ ಸಂವತ್ಸರದ ಮಾಘ ಶುದ್ಧ ೧೫ ರಂದು ಪೂಜೆ ಪುನಸ್ಕಾರ ನೈವೇದ್ಯ ನಂದಾದೀವಿಗೆಗೆಂದು ಭೂಮಿ ದತ್ತಿ ಬಿಟ್ಟರು. ಈ ಧರ್ಮವನ್ನು ತಪ್ಪದೆ ಮಾದಜೀಯನ ಮಕ್ಕಳಾದ ಬೀಚಜೀಯ ಮತ್ತು ಸಂಕಜೀಯರು ಪ್ರತಿಪಾಲಿಸಬೇಕೆಂದು ಹೇಳಲಾಗಿದೆ. ತಗಡೂರಿನ ಕೊಮ್ಮೆಯರಿಗೆ ಮಂಡ್ಯ ಕೊಮ್ಮೆಯರೊಡನೆ ಇದ್ದ ಸಂಬಂಧ ಅಷ್ಟಾಗಿ ತಿಳಿಯುವುದಿಲ್ಲ. ಪರಸ್ಪರ ಕೊಡುಕೊಳ್ಳುವಿಕೆ ಇದ್ದಿರಬಹುದು. ಅದೇ ರೀತಿ ಚಾಮರಾಜನಗರದ ಕುದೇರು ಶಾಸನವು ಕ್ರಿ.ಶ. ೧೨೪೮–೪೯ರ ಹೊಯ್ಸಳ ವೀರಸೋಮೇಶ್ವರನದ್ದಾಗಿದ್ದು ಕುದೇರು ಕೊಮ್ಮೆಯರು ವಮೀಪಳ್ಳಿ ಮತ್ತು ಕುದೇರುಗಳಲ್ಲಿ ರಾಮದೇವರ ಕೇಶವ ಎಂಬಾತನಿಗೆ ಭೂಮಿ ದತ್ತಿ ಬಿಟ್ಟರೆಂದು ಹೇಳುತ್ತದೆ. ಈ ಶಾಸನವು ಶಾಲೆಯ ಆವರಣದ ಬಾವಿಯ ಹತ್ತಿರ ಇರುವ ಕಲ್ಲಿನಲ್ಲಿದೆ. ಬರಹ ತಮಿಳು ಗ್ರಂಥ ಲಿಪಿಯಲ್ಲಿದೆ.

ಇಲ್ಲಿಯ ಕೊಮ್ಮೆಯರು ಸುಮಾರು ಮುನ್ನೂರು ವರ್ಷಗಳ ಕಾಲ

ತಗಡೂರ ಪ್ರಭುಗಳಾಗಿ ಮೆರೆದಿದ್ದರು. ಸ್ಥಳೀಯ ಕುರುಬ ಜನಾಂಗ ಕೊಮ್ಮ, ಕೊತ್ಮ ಪದವನ್ನು ಗಾದೆಯ ಪದವನ್ನಾಗಿ ಬಳಸುತ್ತಿದೆ. ಕೊಮ್ಮನಂತೆ ಅಂದರೆ ಶೂರ, ಧೈರ್ಯವಂತ, ಧೀರ, ವೀರ ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಡುತ್ತಿದೆ. ಇವರು ಹೋರಾಟಗಾರರನ್ನು ಉತ್ತೇಜಿಸುತ್ತಿದ್ದರು. ಹದಿನಾಲ್ಕು ನಾಡ ಪ್ರಭುಗಳಲ್ಲಿ ತಗಡೂರ ಪ್ರಭುಗಳು ಪ್ರಸಿದ್ಧರು. ಇವರ ಸಮಕಾಲೀನರಾಗಿದ್ದವರೇ ಮೂಗೂರು, ತೊರೆನಾಡು, ನುಗುನಾಡು, ಕಾರೆನಾಡು, ನವಿಲೆನಾಡು ಮತ್ತು ಹದಿನಾಡು ಪ್ರಭುಗಳು.

ಚಾಮರಾಜನಗರ ತಾಲ್ಲೂಕಿನ ಕೆರೆಹಳ್ಳಿ ಗ್ರಾಮದ ಹನುಮಂತನ ಗುಡಿಗೆ ಉತ್ತರ ದಿಕ್ಕಿನಲ್ಲಿರುವ ಕಲ್ಲಿನಲ್ಲಿ ಕ್ರಿ. ಶ. ೧೨೭೫ರ ಹೊಯ್ಸಳ ಮೂರನೇ ನರಸಿಂಹನ ಶಾಸನವಿದ್ದು, ಆತನ ಆಳ್ವಿಕೆಯಲ್ಲಿ ಕೆರೆಹಳ್ಳಿ ಗ್ರಾಮವನ್ನು ಹದಿನಾಲ್ಕುನಾಡಗೌಡುಗಳು ತಗಡೂರಿನ ಮೂಲಸ್ಥಾನೇಶ್ವರ ದೇವರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ.

ನಂಜನಗೂಡು ತಾಲ್ಲೂಕಿನ ಉಪ್ಪಿನಹಳ್ಳಿ ಹಳೇಗ್ರಾಮ ನಿವೇಶನದ ಮಾರಿಗುಡಿ ಬಳಿ ಅಂಕದ ಬಾಗಿಲಿನಲ್ಲಿ ನೆಟ್ಟ ಒಂದನೆಯ ಕಲ್ಲು ಕ್ರಿ. ಶ. ೧೨೭೮ರ ಹೊಯ್ಸಳ ಮೂರನೇ ನರಸಿಂಹನ  ಕಾಲದ ಶಾಸನವಾಗಿದ್ದು ಈತನ ಆಳ್ವಿಕೆಯಲ್ಲಿ ಅಂದರೆ ಸಕವರಿಷ ೧೨೦೦ ಸಂದ ಬಹುಧಾನ್ಯ ಸಂವತ್ಸರದ ಚೈತ್ರ ಶುದ್ಧ ೧ ಆದಿವಾರದಂದು ಶ್ರೀ ಮನುಮಹಾಪ್ರಚಂಡ ದಂಡನಾಯಕರು ಶ್ರೀಮಂಚಣ್ಣದಣಾಯಕರು ಶ್ರೀಮತು ಹಿರಿಯನಾಡ ಮಹಾಪ್ರಭು ಚಾವುಂಡದೇವ ಕೆರೆಯ ಬಾಚಿಗೌಡನ ಮಗ ಅಪ್ಪಣ ಪ್ರಭುಗವುಂಡನ ಮಗ ಹೊನ್ನಗೌಡ ಕೆರೆಯುಗವುಡ ಕಾರೆನಾಡ ಮಾದಿಗವುಂಡನೊಳಗಾದ ಸಕಲರು, ನರಸಿಂಹಪಟ್ಟಣದ ಮರಿಸೆಟ್ಟಿಯ ಮಗ ಪಟ್ಟಣಸಾಮಿ ಹಾಗೂ ಇತರ ಸೆಟ್ಟಿಗಳೆಲ್ಲರೂ ಸೇರಿ ಮಣಲಿಯ ವರ್ತಕರು ಆ ಪಟ್ಟಣದಲ್ಲಿ ಸಂತೆ ಮಾಡಿಸಿ ವಾರದ ಸಂತೆ ಮಂಗಳವಾರವೆಂದು ನಿರ್ಧರಿಸಿದ್ದನ್ನು ಸೂಚಿಸುತ್ತದೆ. ಈ ಮಣಲಿ ಸಂತೆ ಮರಳ್ಳಿ ಎಂದು ಗುರುತಿಸಬಹುದು.

ಚಾಮರಾಜನಗರ ತಾಲ್ಲೂಕಿನ ಹೊಮ್ಮ ಗ್ರಾಮದ ಜನಾರ್ದನಸ್ವಾಮಿ ದೇವಾಲಯದ ಮುಂದೆ ಉತ್ತರಕ್ಕೆ ನೆಟ್ಟಿರುವ ಶಾಸನವು ಕ್ರಿ.ಶ. ೧೨೯೪ರಲ್ಲಿ ಆಲೂರು ಗ್ರಾಮ ದತ್ತಿಬಿಟ್ಟದ್ದು ಹಾಗೂ ಅಲ್ಲಿಯ ಶಾನುಭೋಗರ ಮಕ್ಕಳಿಗೆ ಬಿಟ್ಟ ವೃತ್ತಿಗಳ ಬಗ್ಗೆ ದಾಖಲಿಸುತ್ತದೆ. ಅಲ್ಲಿದ್ದ ಅಗ್ರಹಾರದ ಬಗ್ಗೆಯೂ ಸುಳಿವು ನೀಡುತ್ತದೆ. ಶಾಸನ ಸ್ವಲ್ಪಮಟ್ಟಿಗೆ ಹಾಳಾಗಿದ್ದರೂ ಉಪಯುಕ್ತ ಮಾಹಿತಿ ಇದೆ. ಅದರಂತೆ ಕುಮರನಾಡಿನ ತೊರೆನಾಡು, ತಗಡೂರು ಮೂಗೂರಿನ ಗೌಡುಗಳು, ಕಮ್ಮಟಿಗರು ಸೇರಿದಂತೆ ಮುಖ್ಯವಾಗಿ ಗ್ರಾಮದಲ್ಲಿ ಸೇನಬೋವನಿದ್ದ ಹಾಗೆ, ನಾಡಿನಲ್ಲಿ ನಾಡಸೇನಬೋವನಿರುತ್ತಿದ್ದ. ಈತನು ನಾಡಿನ ಕಂದಾಯದ ದಾಖಲೆಗಳನ್ನು ಇಡಬೇಕಾಗಿದ್ದಿತು. ಹದಿನಾಲ್ಕು ನಾಡ ಸಮಸ್ತ ಪ್ರಭುಗೌಡಗಳು, ಹದಿನಾಡಿನ ಹೊಮ್ಮ ಆಲೂರು ಗ್ರಾಮವನ್ನು ಪಿಳೆಯನಾಯನಾರ್‌ಗೆ ನಾಡಾಗಿ ಬಿಟ್ಟುಕೊಟ್ಟರು. ತೊರೆನಾಡಿನ ನಾಡಸೇನಬೋವ (ಶ್ಯಾನುಭೋಗ) ಮುಯ್ಯಣ್ಣನ ಮಕ್ಕಳಾದ ಅಲ್ಲಪ್ಪ, ಚವುಡಪ್ಪ, ಸಿಂಗಣ್ಣ, ಕಾಮಣ್ಣ ಮತ್ತು ಸೋಮಣ್ಣರಿಗೆ ಭೂಮಿಯನ್ನು ವೃತ್ತಿಯನ್ನಾಗಿ ಕೊಡಲಾಗಿತ್ತು. ಅಲ್ಲದೆ ಹೊಮ್ಮ ಮತ್ತು ಆಲೂರು ಗ್ರಾಮದ ಗೌಡುಗಳಿಗೆ ವಿಂಶೋತ್ತರ (ವಂಶಪಾರಂಪರ್ಯ) ಕೊಡುಗೆ ಸಲ್ಲುವುದು ಎಂದಿದೆ. ಭೂಕಂದಾಯ ಮಾಫಿಯುಳ್ಳ ದಾನದತ್ತಿಗೆ ಕೊಡುಗೆ ಎನ್ನುತ್ತಿದ್ದರು. ಈ ಶಾಸನದಲ್ಲಿ ರಾಮಚತುರ್ವೇದಿ ಮಂಗಲ ಎಂಬ ಅಗ್ರಹಾರದ ಉಲ್ಲೇಖವಿದೆ. ಅದೇ ಚಾಮರಾಜನಗರದ ಹಳೇ ಆಲೂರು ಚನ್ನಿಗರಾಯ ದೇವಸ್ಥಾನಕ್ಕೆ ಬಲಗಡೆ ಇರುವ ಕಲ್ಲು ಹೊಯ್ಸಳ ಮೂರನೇ ವೀರಬಲ್ಲಾಳನ ಕ್ರಿ.ಶ. ೧೨೯೪ರ ಶಾಸನವಾಗಿದ್ದು, ಹೇಳುತ್ತಿರುವುದೇನೆಂದರೆ ಆ ಹೊಮ್ಮದ ಅಮ್ಮಳೆಯ ಶ್ರೀಚೆನ್ನಕೇಶವದೇವರ ಅಮೃತಪಡಿಗೆ ತ್ರಿಭಾಗಿಯಾಗಿಟ್ಟ ಪಣ ಮರಿಯಾದೆಯಲ್ಲಿ ಸಂದಾಯವಾಗುತ್ತಿದ್ದ ಗದ್ಯಾಣ ೧೩೩ ಪಣ ೩ ನ್ನು ಕಳೆದು ಆ ಹೊಮ್ಮ ಆಲೂರನ್ನು ನಾಡಾಗಿ ಧಾರೆಯೆರೆದು ತೊರೆನಾಡ ಸೇನಬೋವರಿಗೆ ಕೊಟ್ಟದೆಂದು ತೊರೆನಾಡ ತಗಡೂರು ಮೂಗೂರಿನ ಸಮಸ್ತಪ್ರಭುಗೌಡುಗಳು ನೀಡಿದ ಕೊಡುಗೆ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದಂತಿದೆ.

ತಗಡೂರಿನ ಹೊರವಲಯದಲ್ಲಿರುವ ಬೃಹತ್ ಕೊಮ್ಮಕೆರೆಯ ಏರಿಯ ಮೇಲೆ ಹೂತುಹೋಗಿದ್ದ ಕಲ್ಲಿನಲ್ಲಿ ೧೩–೧೪ನೇ ಶತಮಾನದ ಗ್ರಂಥ ಮತ್ತು ತಮಿಳು ಅಕ್ಷರದಲ್ಲಿ ೨೧ ಪಂಕ್ತಿಯುಳ್ಳ ಶಾಸನ ಪಾಠ ಇದೆ. ಇದರಲ್ಲಿ ಪಟ್ಟಣಸ್ವಾಮಿ ಕಾಮಿಸೆಟ್ಟಿ, ಮಂಡಲಸ್ವಾಮಿ, ಸಾಮಿಸೆಟ್ಟಿ, ಮಲ್ಲಸೆಟ್ಟಿ, ಪುರುಷಸೆಟ್ಟಿ, ಕೇಶಿಮಭಟ್ಟ, ದೇಶಿಯಪ್ಪ, ಸಮಯಮಂತ್ರಿ ದೇಶಿ ಮಾಣಿಕ್ಯಸೆಟ್ಟಿ, ಅಲ್ಲಾಮಿಸೆಟ್ಟಿ, ಸೇನಾಪತಿ . . . . ಮರಿಸೆಟ್ಟಿ ಆತನ ಮಗ ಅಲ್ಲಾಯಿ ಪಟ್ಟಣಸ್ವಾಮಿ ಮೊದಲಾದವರ ಹೆಸರುಗಳಿವೆ. ಸಾಮಾನ್ಯವಾಗಿ ವರ್ತಕರು ತಮ್ಮ ಸರಕುಗಳನ್ನು ಹೊತ್ತು

ಊರಿಂದ ಊರಿಗೆ ಸಾಗುತ್ತಿದ್ದ ಕಾಲವದು. ತಮ್ಮ ರಕ್ಷಣೆಗೆಂದು ಜೊತೆಗೂಡುತ್ತಿದ್ದವರನ್ನು ಸೇನಾಪತಿಗಳೆಂದು ಗುರುತಿಸಬಹುದು. ವರ್ತಕರಿಗೆ ಅವರ ಸರಕುಗಳನ್ನು ವಾರಾಟ ಮಾಡಲು ಇಂದಿನಂತೆ ನಿರ್ದಿಷ್ಟ ಮಾರುಕಟ್ಟೆಗಳಿರಲಿಲ್ಲ. ವಾರಕ್ಕೊಮ್ಮೆ ನಡೆಯುತ್ತಿದ್ದ ಸಂತೆಯಲ್ಲಿ ತಮ್ಮ ಸಾಮಾನುಗಳನ್ನು ಮಾರಿ ಮತ್ತೊಂದು ಸಂತೆಗೆ ತೆರಳಲು ಸಿದ್ಧರಾಗಬೇಕಿತ್ತು. ನೀರಿರುವ ತಾಣಗಳನ್ನೇ ತಮ್ಮ ತಾತ್ಕಾಲಿಕ ನೆಲೆಗಳನ್ನಾಗಿ ಮಾಡಿಕೊಂಡಿರುತ್ತಿದ್ದರು. ಹಾಗಾಗಿ ಈ ಊರಿನ ಹೊರವಲಯದಲ್ಲಿ ನೆಲೆಸಿದ್ದ ಈ ಸೆಟ್ಟಿ ವರ್ತಕ ಪರಿವಾರದವರು ಪಟ್ಟಣದ ಮುಖ್ಯಸ್ಥರೂ ಆಗಿದ್ದರೆಂಬುದು ಸಹಜ ಸಂಗತಿಯೇ ಸರಿ. 'ಸೆಟ್ಟಿ ಬಿಟ್ಟಲ್ಲೇ ಪಟ್ಟಣ' ಎಂಬ ಹೇಳಿಕೆ ಬಂದಿರೋದು ಈ ಹಿನ್ನೆಲೆಯಲ್ಲಿಯೇ ಎಂದರೆ ತಪ್ಪಾಗಲಾರದು. ಮಧ್ಯಯುಗದ ಕರ್ನಾಟಕದಲ್ಲಿ 'ಮಹಾನಾಡು' ಅತ್ಯಂತ ದೊಡ್ಡ ಸ್ಥಳೀಯ ಸಭೆಯಾಗಿತ್ತು. ಅದು ಮೂರು ಬಗೆಯ ಸದಸ್ಯರನ್ನೊಳಗೊಂಡಿತ್ತು. ನಾಡು ಅಥವಾ ಜಿಲ್ಲೆ, ನಗರ ಶ್ರೇಣಿಗಳು (ವರ್ತಕರು), ಸಭೆ ನಡೆಯುತ್ತಿದ್ದ ಸ್ಥಳದ ಪ್ರತಿನಿಧಿಗಳು ಮತ್ತು ಆ ಪ್ರದೇಶದ ಸರ್ಕಾರಿ ಅಧಿಕಾರಿಗಳನ್ನೊಳಗೊಂಡಿತ್ತು. ತಗಡೂರು ಮಹಾನಾಡಾಗಿದ್ದುದರಿಂದ ಮೇಲಿನ ಸಭೆಯಲ್ಲಿ ವರ್ತಕರು ಭಾಗವಹಿಸಲು ಬಂದಿದ್ದಿರಬೇಕು.

ತಗಡೂರಿನ ಮೂಲಸ್ಥಾನೇಶ್ವರ ದೇವಾಲಯದ ಹೊರಗೆ ಕಂಡುಬರುವ ವೀರಗಲ್ಲುಗಳಲ್ಲಿ ಬರಹವುಳ್ಳ ೧೩–೧೪ನೇ ಶತಮಾನದ ವೀರಗಲ್ಲೂ ಇದೆ. ಇದು ಗೋಸಂರಕ್ಷಣೆಯಲ್ಲಿ ಹೋರಾಡಿ ಮಡಿದ ವೀರನಿಗೆ ಸಂಬಂಧಪಟ್ಟದ್ದಾಗಿದೆ. ಈ ಊರಿನಲ್ಲೂ ಸಂಪತ್ತಿನ ಮೂಲವೆನಿಸಿದ್ದ ಗೋವುಗಳ ಅಪಹರಣ ವಾಗುತ್ತಿತ್ತೆಂಬುದರ ಮೇಲೆ ಬೆಳಕು ಚೆಲ್ಲುತ್ತದೆ. (ಉಲ್ಲೇಖಿತ ಶಾಸನ ಅಪ್ರಕಟಿತ)

ಇನ್ನು ೧೪ನೇ ಶತಮಾನದ ಶಾಸನವೊಂದು ಮೂಲಸ್ಥಾನೇಶ್ವರ ದೇವಸ್ಥಾನದ ಎದುರು ಮೋರಿಯ ಹಾಸುಗಲ್ಲಿನಲ್ಲಿದೆ. ಇದು ಜೈನರ ಸನ್ಯಾಸ ಮರಣದ ಬಗ್ಗೆ ತಿಳಿಸುತ್ತದೆ. ಈ ಶಾಸನ ಪ್ರಕಾರ, ಅಂದು ಜೈನರ ಕೊಂಡಕುಂದಾನ್ವಯ ಮೂಲಸಂಘದ ನಾಗನಂದಿ ಅನಂತ ಭಟ್ಟಾರಕರ ಶಿಷ್ಯ ನಂದಿಭಟ್ಟಾರಕರ ಶಿಷ್ಯೆಯಾಗಿದ್ದ ತಗಡೂರಿನ... ಯಿಬ್ಬೆ ಕಂತಿಯು ಸನ್ಯಾಸತ್ವ ವ್ರತ ಕೈಗೊಂಡು ಇಹಲೋಕ ತ್ಯಜಿಸಿದಳೆಂದು ಹೇಳುತ್ತದೆ. ಸನ್ಯಾಸ, ಸಲ್ಲೇಖನ, ಸಮಾಧಿ ವ್ರತಗಳೆಂದರೆ ಅನ್ನಾಹಾರ ತ್ಯಜಿಸಿ ಕೇವಲ ದೇವರ ಧ್ಯಾನದಲ್ಲಿದ್ದು ದೇಹ ತ್ಯಾಗ ಮಾಡುವುದು. ಆಸಕ್ತರು ಮೇಲಿನ ವ್ರತ ಮಾಡಬಹುದಿತ್ತು. ಇಂದಿಗೂ ಜೈನ ಪರಂಪರೆಯು ಜೀವಂತವಾಗಿದೆ ಎನ್ನಲು ತಗಡೂರಿನ ಪದ್ಮಾವತಿ ಮಂದಿರವೇ ಸಾಕ್ಷಿ. ಕಂತಿಯರು ಪುರುಷರಿಗೂ ಸ್ತ್ರೀಯರಿಗೂ ಜಿನದೀಕ್ಷೆ ನೀಡುವ ಗುರುಗಳಾಗಿದ್ದರು. ಇವರು ಬಿಳಿಬಟ್ಟೆ ಧರಿಸುತ್ತಿದ್ದರು.



ಹೊಯ್ಸಳರ ಕಾಲದಲ್ಲೇ ತಗಡೂರು ಕೊವ್ಮೆ ಒಕ್ಕಲಿಗ ಕುಟುಂಬದೊಂದಿಗೆ ಮತ್ತೊಂದು ಪ್ರಭು ಕುಟುಂಬ ಉದಯಿಸಿತ್ತು. ಹೆಗ್ಗಡದೇವನಕೋಟೆ ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮದ ಲಕ್ಷ್ಮೀಕಾಂತ ದೇವಸ್ಥಾನದ ರಂಗಮಂಟಪದ ಕಂಬದ ಬುಡದಲ್ಲಿರುವ ಕ್ರಿ. ಶ. ೧೩೨೨ರ ಶಾಸನ ಪ್ರಕಾರ, ತಗಡೂರ ಕೊವರ ಕೇತಗೌಡನು ಆರಿದವಾಳಿಕೆಯ ಕೇತನಹಳ್ಳಿಯ ಮಾಡಿ ಮಲ್ಲಿನಾಥದೇವರ ದೇವಾಲಯ ಸಹಿತ ಹೊಸಕೆರೆಯ ಕಟ್ಟಿಸಿದ. ಆತನ ಮಗ ಹೊಯ್ಸಳಗೌಡ ಲಕ್ಷ್ಮೀನಾರಾಯಣ ದೇವರಸಹಿತ ಮಂಟಪ ಮಾಡಿಸಿ ಪ್ರತಿಷ್ಠೆಯಿಲ್ಲದೆ ಇದ್ದಿತು. ಹಾಗಾಗಿ ನೂರೈವತ್ತೊಂಭತ್ತನೆಯ ದುಂದುಬಿ ಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿ ಶನಿವಾರದಂದು ಚೋಳದೇವನ ಮಗ ಅಂಕಪ್ಪ, ಮಾಚಿದೇವನ ಮಗ ಚೊಕ್ಕಣ್ಣ, ಜೀಯಗೌಡನ ಮಗ ಅಂಕಪ, ಹೊಯ್ಸಳಗೌಡನ ಮಗ ದೇವಣ್ಣನೊಳಗಾದ ಸಮಸ್ತ ಪ್ರಭುಗಳೆಲ್ಲರೂ ಸೇರಿ ಪ್ರತಿಷ್ಠೆಯನ್ನು ಮಾಡಿ ಭೂದತ್ತಿಯನ್ನು ಸೂರ್ಯದೇವನಿಗೆ ಧಾರೆಯೆರೆದು ಕೊಟ್ಟು ಶ್ರೀ ಕಾರ್ಯ ನಡೆಸಿದರು. ಹೀಗೆ ದೇವಾಲಯ, ಮಂಟಪ, ಕೆರೆ ನಿರ್ಮಾಣದಲ್ಲಿ ಕೊವರ ಕುಟುಂಬ ತನ್ನನ್ನು ತೊಡಗಿಸಿ ಕೊಳ್ಳುವುದರ ಮೂಲಕ ಜನತೆಯ ವಿಶ್ವಾಸಕ್ಕೆ ಪಾತ್ರವಾಗಿತ್ತು. ಇದರಿಂದ ತಗಡೂರಿನ ಕೊಮ್ಮಕೆರೆ ಕೊಮ್ಮೆಯರೇ ಕಟ್ಟಿಸಿದ ಕೆರೆಯೆಂದೂ, ಈ ಕಾರ್ಯದಿಂದ ಕೊವರು ಸ್ಫೂರ್ತಿ ಪಡೆದವರೆಂದು ಅರಿಯಬಹುದು.

ಏಳುನೂರು ವರ್ಷಗಳ ಹಿಂದೆಯೇ ತಗಡೂರಿನ ಜನ ತಮ್ಮ ಕಾರ್ಯಕ್ಷೇತ್ರವನ್ನು ಗ್ರಾಮದಿಂದ ಹೊರಗೂ ವಿಸ್ತರಿಸಿಕೊಂಡಿದ್ದರು. ಇದಕ್ಕೆ ಉತ್ತಮ ಉದಾಹರಣೆ ಕೊವರ ಕೇತಗೌಡ. ಈತ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಊರನ್ನು ನಿರ್ಮಿಸಿ, ಕೆರೆ ಕಟ್ಟಿಸಿ, ದೇವಾಲಯ ನಿರ್ಮಿಸಿದ್ದ. ಇವೆಲ್ಲವೂ ಇಂದಿಗೂ ಆತನ ಹೆಸರನ್ನು ಶಾಶ್ವತಗೊಳಿಸಿವೆ. ಹೊಯ್ಸಳ ಶೈಲಿಯ

ಕಂಬಗಳು, ನವರಂಗ, ಸುಖನಾಸಿ, ಗರ್ಭಗೃಹ ರಚಿಸಿ ಮಲ್ಲಿನಾಥದೇವಾಲಯ ನಿರ್ಮಿಸಿದ್ದ. ಈತನ ಮಗ ಹೊಯ್ಸಳಗೌಡ ಲಕ್ಷ್ಮೀನಾರಾಯಣ ದೇವರಸಹಿತ ಮಂಟಪ ಮಾಡಿಸಿದ ಬಗ್ಗೆ ಜನರಲ್ಲಿ ತಿಳುವಳಿಕೆ ಇದೆ. ವಿಷ್ಣು ಮತ್ತು ಈಶ್ವರ ಒಂದೆಡೆ ನೆಲೆಸಿದ್ದು ಸೂರ್ಯನ ಕಿರಣ ದೇವಾಲಯದೊಳಗೆ ಬೀಳುವಂತೆ ರಚಿಸಿರುವ ಈ ದೇವಾಲಯ ಶಿಥಿಲಾವಸ್ಥೆ ತಲುಪಿ ಜೀರ್ಣೋದ್ಧಾರಗೊಂಡು, ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ 'ಪರಂಪರೆ ಉಳಿಸಿ' ಕಾರ್ಯಕ್ರಮ ಆಯೋಜಿಸಿ ದೇವಾಲಯದ ಆವರಣವನ್ನು ಸುಸ್ಥಿತಿಯಲ್ಲಿಡಲು ಯುವಕರಿಗೆ ಮಾರ್ಗದರ್ಶನ ಮಾಡಿದ ಡಾ. ಎಸ್. ಜಿ. ರಾಮದಾಸರೆಡ್ಡಿ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು(ಸರ್ಕಾರಿಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು) ಅವರನ್ನು ಸ್ಥಳೀಯರು ಸ್ಮರಿಸುತ್ತಾರೆ.

ಕ್ರಿ.ಶ. ೧೩೨೨ರ ತಗ್ಗಲೂರು ಶಾಸನದಲ್ಲಿ ಮೂರನೇ ಹೊಯ್ಸಳ ವೀರಬಲ್ಲಾಳ ಉನಾಮಲೈ (ಅಣ್ಣಾಮಲೈ) ನಿಂದ ಆಳುತ್ತಿದ್ದಾಗ ಕೊಮ್ಮೆಯರ ಸಮಸ್ತ ಪ್ರಭುಗವುಡುಗಳು ಬ್ರಾಹ್ಮಣರಿಗೆ ಧಾರಾಪೂರ್ವಕವಾಗಿ ಬರೆಸಿಕೊಟ್ಟಿದ್ದಾಗಿದೆ ಎಂದು ಹೇಳಿದೆ. ಹೊಯ್ಸಳರು ಕ್ಷೀಣಿಸುತ್ತಿದ್ದ ಕಾಲವದು. ಆದಾಗ್ಯೂ ಬ್ರಾಹ್ಮಣರಿಗೆ ದಾನಧರ್ಮ ಇತ್ಯಾದಿ ಮಾಡುವುದರ ಮೂಲಕ ರಾಜ್ಯದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಉತ್ತೇಜಿಸಲಾಗುತ್ತಿತ್ತು. ಹೊಯ್ಸಳರಿಗೆ ನಿಷ್ಠೆಯಿಂದಿದ್ದ ಸ್ಥಳೀಯ ಪ್ರಭುಗಳು ಈ ಕಾರ್ಯದಲ್ಲಿ ನಿರತಾಗಿದ್ದರೆಂದು ಉಲ್ಲೇಖಿತ ಶಾಸನ ಪುಷ್ಟೀಕರಿಸುತ್ತದೆ.

ಹೊಯ್ಸಳ ವೀರಬಲ್ಲಾಳನ ಕ್ರಿ.ಶ. ೧೩೩೭ರ ನರಸಮಂಗಲದ ಶಾಸನವು ಬಿಲಿ ಚಿಕ್ಕಯ್ಯ ದಣ್ಣಾಯಕರು ಅಲ್ಲಿಯ ಶ್ರೀರಾಮನಾಥದೇವರ ಶ್ರೀಕಾರ್ಯಕ್ಕೆಂದು ಆ ಗ್ರಾಮದ ಸಿದ್ದಾಯ, ಹೊದಕೆ, ಹೊಂಬಳಿ, ಆಡುವಣ, ಮಗ್ಗ, ಕಾಣಿಕೆ ಮುಂತಾದ ಎಲ್ಲಾ ತೆರಿಗೆಗಳನ್ನು ಬಿಟ್ಟು ಸರ್ವಮಾನ್ಯವಾಗಿ ತಗಡೂರು, ಸರಗೂರು ಮುಖ್ಯವಾಗಿ ಆ ನಾಡವರ ಕೈಯಲ್ಲಿ ಧಾರೆಯೆರೆಸಿ ಸಹಿರಣ್ಯೋದಕದಾನ ಧಾರಾಪೂರ್ವಕವಾಗಿ ಆ ನರಸಿಂಹಮಂಗಲವನ್ನು ಕೊಟ್ಟು ಸಕವರುಷ ೧೨೫೦ನೆಯ ಧಾತು ಸಂವತ್ಸರದ ಮಾಘ ಬ ೧೪ ಬ್ರಿಹವಾರದ ಶಿವರಾತ್ರಿಯ ದಿನದ ಕಾರ್ಯಕ್ಕೆ ಕೊಟ್ಟರು ಎಂದು ಹೇಳುತ್ತದೆ.

ಮಲೆಯೂರಿನ ಜೈನ ವಿದ್ವಾಂಸ ದೇವಚಂದ್ರನು ತನ್ನ 'ರಾಜಾವಳೀ ಕಥಾಸಾರ' ಗ್ರಂಥದಲ್ಲಿ ಜನಸಂಖ್ಯೆ ಹೆಚ್ಚಿದಂತೆಲ್ಲಾ ಒಂದೊಂದು ಊರಿಗೆ ಒಬ್ಬನು ರಾಯನಾಗಿ, ಊರೂರಿನಲ್ಲಿ ಕೋಟೆ ಕೊತ್ತಲ ಕಂದಾಚಾರಗಳಿಂದ ಪ್ರಜೆಗಳು ಆಯುಧಪಾಣಿಗಳಾದರು. ದೊಡ್ಡ ಗ್ರಾಮಸ್ಥರು ಸಣ್ಣ ಗ್ರಾಮಸ್ಥರನ್ನು ಸೇರಿಸಿಕೊಂಡು ತಮ್ಮ ಆಡಳಿತ ನಡೆಸುತ್ತಾ ಗ್ರಾಮ ಗ್ರಾಮಕ್ಕೆ ಕೆಲವು ವರ್ಷಗಳ ಮಟ್ಟಿಗಾದರೂ ದೊರೆಗಳಾಗಿದ್ದರೆಂದು ಹೇಳಿದ್ದಾನೆ. ಇದು ಸ್ಥಳೀಯ ಪ್ರಭುಗಳ ಬಗ್ಗೆ ಕಿಂಚಿತ್ತಾದರೂ ಸುಳಿವು ನೀಡುತ್ತದೆ. ಇವರು ದೇವಾಲಯ ನಿರ್ವಹಣೆಗೆ ಆದ್ಯ ಗಮನ ಕೊಡುತ್ತಿದ್ದರು. ಏಕೆಂದರೆ ದೇವಾಲಯಗಳು ಆಧುನಿಕ ಬ್ಯಾಂಕುಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಇಂಥ ದೇವಾಲಯಗಳ ಅಭಿವೃದ್ಧಿ ಕಾರ್ಯದಲ್ಲಿ ತೊಡಗುವ ಮೂಲಕ ಸ್ಥಳೀಯ ಪ್ರಭುವರ್ಗಗಳು ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳುತ್ತಿದ್ದವು.



ತಗಡೂರಿನ ಮೂಲಸ್ಥಾನ ದೇವಾಲಯದ ಮುಂದಿರುವ ಕಲ್ಲಿನಲ್ಲಿ ಕ್ರಿ.ಶ. ೧೩೬೮ರಲ್ಲಿ ವಿಜಯನಗರದ ಮಹಾಮಂಡಳೇಶ್ವರನಾದ ಶ್ರೀವೀರಬುಕ್ಕಣ್ಣವೊಡೆಯರ ಕುಮಾರ ಚಿಕ್ಕಕಂಪಣವೊಡೆಯರು ಆಳುತ್ತಿದ್ದಾಗ ಸ್ವಸ್ತಿ ಶ್ರೀ ಶಕವರುಷ ೧೨೯೦ನೆಯ ಕೀಲಕಸಂವತ್ಸರದ ಜ್ಯೇಷ್ಠ ಸು ೧೦ ರಲ್ಲು ಹಿರಿಯನಾಡ ತಗಡೂರ ಅಧಿಕಾರಿಯಾಗಿದ್ದ ರಾಮರಸಂರ ಮುಂದಿಟ್ಟು ಮುಖ್ಯವಾಗಿ ಆ ನಾಡಸಮಸ್ತ ಮಹಾಪ್ರಭುಗಳಾದ ಕೊವರು ಕೊಮ್ಮೆಯರು ಮುಖ್ಯವಾಗಿ ಆ ನಾಡ ಸಮಸ್ತ ಪ್ರಭುಗೌಡ ಪ್ರಜೆಗಳು ಆ ಮೂಲಸ್ಥಾನ ದೇವರ ನಂದಾದೀಪಕ್ಕೆ ಪರಿಚಾರಕ ಮತ್ತು ಪೂವಾಡಿಗನ ಜೀವಿತಕ್ಕೂ ಆ ತಮ್ಮಡಿಗಳು ಅರ್ಚಕರು ತೆರುವ ದೇವದಾನದೊಳಗೆ (ದೇವರಿಗೆ ಬಿಟ್ಟ ಭೂದಾನ ಕಾಣಿಕೆ ಇತ್ಯಾದಿ) ಗದ್ಯಾಣ ೨೦ನ್ನು ದೇವರಿಗೆ ಧಾರೆಯೆರೆದು ಕೊಟ್ಟರು. ಈ ಗದ್ಯಾಣ ೨೦ ಹೊನ್ನಿಗೆ ಪ್ರತಿಯಾಗಿ ಗದ್ಯಾಣ ೨೦ನ್ನು ತಗಡೂರು ನಾಡಿನವರು ಜೊತೆಗೂಡಿ ವರ್ಷಂಪ್ರತಿ ತಪ್ಪದೆ ತೆರುತ್ತ ಬರುವೆವಂದು ವೊಡಂಬಟ್ಟು ಅದನ್ನು ರಾಮರಸ ಅವರ ಮುಂದಿಟ್ಟು ಬರೆಸಿದ ಶಿಲಾ ಶಾಸನವಿದು. ಇದರಿಂದ ಆದಾಯದಲ್ಲಿ ದೇವರ ಶ್ರೀಕಾರ್ಯಕ್ಕೆ ಬಿಟ್ಟು, ಕೊರತೆಯಾದದ್ದನ್ನು ಸರಿದೂಗಿಸಿಕೊಡಬೇಕೆಂಬ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತೆಂದು ದೃಢವಾಗುತ್ತದೆ.

ಹೊಯ್ಸಳರ ಪತನಾನಂತರ ಆನೆಗೊಂದಿಯ ಏಳಿಗೆ, ಬುಕ್ಕರಾಯನ ಆಡಳಿತ ನಂತರ ಅಧಿಕಾರಕ್ಕೆ ಬಂದ ದೇವರಾಯನು ತನ್ನ ಕುಮಾರನನ್ನು ದಕ್ಷಿಣದೇಶಕ್ಕೆ ಕಳುಹಿಸಿದನೆಂದೂ ಅವರಲ್ಲಿ ದೇವಣ್ಣರಾಯ ಉಮ್ಮತ್ತೂರು

ಸಂಸ್ಥಾನದಲ್ಲೂ, ಮೊಮ್ಮಗ ಭುಜಂಗರಾಯ ಹರಿಹರರಾಯನು ಕುಡುಗುನಾಡ ತೆರಕಣಾಂಬಿಯಲ್ಲೂ, ಆತನ ಮಗ ವೀರರಾಯ ಹಿರಿಯನಾಡ ತಗಡೂರಿನಲ್ಲಿ ಪ್ರಭುವಾಗಿದ್ದನೆಂದೂ ದೇವಚಂದ್ರ ತಿಳಿಸಿದ್ದಾನೆ. ಅಲ್ಲದೆ ಪಿರಿಯಾಪಟ್ಟಣದ ನಂಜರಾಯ, ಬೆಟ್ಟದಪುರದ ಪಟ್ಟರಾಯ, ಉಮ್ಮತ್ತೂರಿನ ದೇವಣ್ಣರಾಯ, ತಗಡೂರ ಪ್ರಭುರಾಯ, ಸೋಮಸಮುದ್ರದ ಸೋಮಶೇಖರರಾಯ, ಕಲ್ಲಹಳ್ಳಿಯ ಚೆಂಗಳರಾಯ ರಾಘವ ಮಾಧವರನ್ನೊಳಗೊಂಡ ಅನೇಕರಿಂದ ದೇವರಾಯರ ಆಳ್ವಿಕೆಯು ಪ್ರಬಲವಾಗಿತ್ತು. ಮೈಸೂರಿಗೆ ಸೇರಿದ ಮೂವತ್ತು ಮೂರು ಹಳ್ಳಿಗಳನ್ನು ಕಾರಗಹಳ್ಳಿಯ ರಾಜರು ಆಳುತ್ತಿದ್ದರೆಂದೂ ದೇವಚಂದ್ರ ಬರೆದಿಟ್ಟಿದ್ದಾನೆ. ಆದರೆ ಪ್ರಭುರಾಯನನ್ನು ತಗಡೂರ ಪ್ರಭುವೆಂದು ಶಾಸನದಲ್ಲಿ ಹೆಸರಿಸಿಲ್ಲ, ಇಲ್ಲಿ ತಗಡೂರು ಆಡಳಿತ ಕೇಂದ್ರವಾಗಿ ಗಮನ ಸೆಳೆದ ಸಂಗತಿ ಮುಖ್ಯವಾಗಿದೆ. ಹಾಗೆಯೇ ಸಮಕಾಲೀನ ಆಳ್ವಿಕೆಗಾರರು, ಆದಾಯದ ಮೂಲ, ಆಳ್ವಿಕೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದ್ದ ಪ್ರವೃತ್ತಿ ಇತ್ಯಾದಿ ಅಂಶಗಳು ಗಮನಾರ್ಹ.

ವಿಜಯನಗರ ಕಾಲದಲ್ಲಿ ಆಡಳಿತದ ಅನುಕೂಲಕ್ಕಾಗಿ ರಾಜ್ಯಗಳೆಂಬ ಅನೇಕ ಪ್ರಾಂತಗಳು ಅಸ್ತಿತ್ವದಲ್ಲಿತ್ತು. ಅದರಲ್ಲಿ ಹೊಯಿಸಣ ರಾಜ್ಯ ಅಥವಾ ಪ್ರಾಂತವೂ ಒಂದು. ಅವುಗಳನ್ನು ಮತ್ತೆ ಮಂಡಲ ಮತ್ತು ನಾಡು ಎಂದು ಕರೆಯುತ್ತಿದ್ದರು. ಅನೇಕ ಶಾಸನಗಳಲ್ಲಿ 'ರಾಜ್ಯ'ದ ಬದಲು ಸೀಮೆ, ಸ್ಥಳ, ವಳಿತ, ವೇಂಠೆ ಎಂಬ ಪದಗಳನ್ನು ಬಳಸಲಾಗಿದೆ. ಅವುಗಳನ್ನು ರಾಜ್ಯದೊಳಗಿನ ಸಣ್ಣ ವಿಭಾಗಗಳನ್ನು ಸೂಚಿಸಲು ಉಪಯೋಗಿಸಲಾಗಿದೆ.

ವಿಜಯನಗರದ ಕಾಲದ ಶಾಸನಗಳಲ್ಲಿ ಸೀಮೆ, ಸ್ಥಳ, ವೇಂಠೆ, ಮಂಡಲ ಇತ್ಯಾದಿ ಪದಗಳು ಆಡಳಿತ ಘಟಕ ಸೂಚಕವಾಗಿ ಕಂಡುಬಂದಿದೆ. ಇದನ್ನು ತಗಡೂರಿನ ಆಡಳಿತ ಘಟಕ ಹಿನ್ನೆಲೆಯಲ್ಲಿಯೂ ಗಮನಿಸಬಹುದು. ಉದಾಹರಣೆಗೆ ಕ್ರಿ.ಶ. ೧೪೬೭ರ ಮುಳ್ಳೂರು ಶಾಸನವು (ನಂಜನಗೂಡು ತಾಲ್ಲೂಕು) ಹೊಯ್ಸಣರಾಜ್ಯಕ್ಕೆ ಸೇರಿದ್ದ ತಗಡೂರು ಸೀಮೆಯ ಹೊಳೆಯ ಮುಳ್ಳೂರು ಗ್ರಾಮವನ್ನು ಉಮ್ಮತ್ತೂರಿನ ಸೋಮಯ್ಯದೇವಗಳು ಶ್ರೀನಂಜುಂಡೇಶ್ವರ ದೇವರ ಅಮೃತಪಡಿಗೆ, ಅಭಿಷೇಕ, ಅಂಗಭೋಗರಂಗ ಭೋಗಕ್ಕೆ ಸಮರ್ಪಿಸಿ ಕೊಟ್ಟರೆಂದು ಹೇಳುತ್ತದೆ. ಈ ಗ್ರಾಮದಿಂದ ಬರಬಹುದಾದ



ಆದಾಯ ಹೀಗಿತ್ತು; ಗದ್ದೆ, ಬೆದ್ದಲು (ಹೊಲ), ತೋಟ, ತುಡಿಕೆ, ಕರ, ಮನಿಸುಂಕ, ಸುವರ್ಣಾದಾಯ, ಮಗ್ಗದೆರೆ, ಒಳವಾರು, ಹೊರವಾರು, ಮೊಟ್ಟೆ ಸುಂಕ, ಬಿಸಿಲುಗಾಣ, ತಳವಾರ ಕುಳ ಇತ್ಯಾದಿಗಳ ತೆರಿಗೆಯನ್ನು ದೇವರಿಗಿತ್ತು ದೇವರ ಸೇವೆ ಮಾಡಿಕೊಂಡು ಇರಬೇಕೆಂದು ತಿಳಿಸಲಾಗಿದೆ. ಕೃಷಿಕರೊಂದಿಗೆ ನೇಕಾರರು, ವರ್ತಕರು, ಗಾಣಿಗರು ನಂಜುಂಡೇಶ್ವರನ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳಲು ಬದ್ಧವಾಗಿರುವಂತೆ ಸ್ಥಳೀಯ ಪ್ರಭುಗಳು ಕ್ರಮಕೈಗೊಂಡಿದ್ದನ್ನು ಸೂಕ್ಷ್ಮವಾಗಿ ಅರಿಯಬಹುದು.

ಕ್ರಿ. ಶ. ೧೪೮೨ರಲ್ಲಿ ಮಹಾಮಂಡಳೇಶ್ವರ ವೀರಸೋಮರಾಯನ ಕರಣಿಕ ದೇವರಸ ಎಂಬಾತ ಹರವೆಯಲ್ಲಿ (ಚಾಮರಾಜನಗರ ತಾಲ್ಲೂಕು) ಚೈತ್ಯಾಲಯ ಕಟ್ಟಿಸಿ ಆದಿಪರಮೇಶ್ವರನನ್ನು ಪ್ರತಿಷ್ಠಾಪಿಸಿದ್ದ ಎಂದು, ಅದೇ ಬಸದಿಯ ಪ್ರಾಕಾರದಲ್ಲಿ ಶಾಸನ ಮಂಟಪದ ಮೇಲ್ಭಾಗದ ತೊಲೆಯ ಮೇಲಿರುವ ಬರಹ ಹೇಳುತ್ತದೆ. ಹರವೆ ಗ್ರಾಮಕ್ಕೆ ನೈರುತ್ಯದ ಹೊಲದಲ್ಲಿ ಬದುವಿನ ಮೇಲೆ ನೆಟ್ಟ ಕಲ್ಲಿನಲ್ಲಿರುವ ಜಿನ ಶಾಸನವು, "ಸ್ವಸ್ತಿ ಶ್ರೀ ಶಕವರ್ಷ ೧೪೦೪ ಸಂದ ವರ್ತಮಾನ ಶುಭಕೃತ್ಸಂವತ್ಸರದ ಚೈತ್ರ ಶುದ್ಧ ೫ ರಲೂ ಹರವೆಯ ದೇವಪ್ಪಗಳ ಮಗ ಚಂದಪ್ಪನು ತಮ್ಮ ಕುಲಸ್ವಾಮಿ ಹರವೆಯ ಬಸ್ತಿಯ ಆದಿಪರಮೇಶ್ವರನ ಅಮೃತಪಡಿ ಚಾತುರ್ವನದ ದಾನಾರ್ಥವಾಗಿ ತಗಡೂರ ಪ್ರಭುಗಳು ಎನಗೆ ದಾನಾರ್ಥವಾಗಿ ಕೊಟ್ಟ ಕ್ಷೇತ್ರದ ಸ್ಥಾನ ನಿರ್ದೇಶನದ ವಿವರ" ಎಂದು ತಿಳಿಸುತ್ತದೆ. ತಗಡೂರ ಪ್ರಭುವನ್ನು ಹೆಸರಿಸಿಲ್ಲ. ಆದರೆ ಕಾಲದ ಉಲ್ಲೇಖವಿಲ್ಲದ ಅದೇ ಹರವೆ ಗ್ರಾಮಕ್ಕೆ ಈಶಾನ್ಯದಲ್ಲಿ ಶಂಕರೇಶ್ವರ ದೇವಾಲಯದ ಮುಂದಿನ ಗಾಣದ ಮೇಲಿರುವ ಬರಹ ಹೀಗಿದೆ: "ಶ್ರೀ ಮತು ಹಿರಿಯನಾಡ ಮಹಾಪ್ರಭು ತಗಡೂರ ಅಂಕಗವುಡನ ಮಗ ಮಾಡಿಸಿದ ಗಾಣ" ಎಂದು. ಮೇಲಿನ ಎರಡು ಶಾಸನಗಳು ತಗಡೂರ ಪ್ರಭು ಅಂಕಗೌಡನೆಂದು ಅಂದಾಜು ಮಾಡಲು ನೆರವಾಗುತ್ತದೆ.

ತಗಡೂರಿನ ಮೂಲಸ್ಥಾನ ದೇವಾಲಯದ ಮುಂದೆ ಇರುವ ಕಲ್ಲಿನ ಹಿಂಭಾಗದಲ್ಲಿರುವ ಶ್ರೀ ಮನ್ ಮಹಾಮಂಡಳೇಶ್ವರ ಶ್ರೀವೀರಯಿಂಮಡಿರಾಯೊಡೆಯರ ಕುಮಾರ ನಂಜರಾಜವೊಡೆಯರ ಕ್ರಿ. ಶ. ೧೫೯೦ರ ಶಾಸನವು ತಗಡೂರಿನ ಆದಾಯಕ್ಕೆ ಸಂಬಂಧಪಟ್ಟದ್ದಾಗಿದೆ. ಅದರ ವಿವರ ಇಂತಿದೆ:

"ಎಮದನಾದಿಯಾದ ಹದಿನಾಲ್ಕು ನಾಡಿಂಗೆ ಅಧಿಕವಾದ ಹಿರಿಯನಾಡ ತಗಡೂರ ಶ್ರೀ ಮೂಲಸ್ಥಾನದೇವರ ಲಕ್ಷ್ಮೀಕಾಂತ ದೇವರ ಶ್ರೀಕಾರ್ಯಕ್ಕೆ ಸಲುವ ಉಭಯ ಮಾರ್ಗಸ್ಥಾನದ ಮಗ್ಗ, ಮನೆವಣ, ಗಾಣ ಕಾವಲಿ ಮದುವೆ ವೊದುವಲು (ಉರುವಲು) ಮೊಟ್ಟೆಸುಂಕ, ಒಳವಾರು, ಹೊರವಾರು, ಬಪಉಭಯರ್ಪ ಮಾರ್ಗ, ಹತ್ತಿಯ ಸುಂಕ, ಅಕರಾಗುಣ ಮೊದಲಾಗಿ ಸುಂಕದ ಹೊನ್ನಿನೊಳಗೆ ಪ್ರತಿ ಹೊನ್ನೊಂದಕ್ಕೆ ಒಂದು ಹಣವಿನ ಲೆಕ್ಕದಲು ಅನಾದಿ ಮೊದಲಾಗಿ ದೇವರ ಸುಂಕದ ಹೊನ್ನನೂ ವಿಚಾರಿಸದೆ ಕುಳದಗ್ಗಿದ ಸಂಬಂಧ" ಎಂದಿದೆ. ಹೀಗೆ "ಕುಳಕುಗ್ಗಿದ ಸಂಬಂಧ ತಗಡೂರನಾಡ ಮಾಗಣಿಯನ್ನು ಮಾಡುತ್ತಿದ್ದ ನಾಗರಸರು ದೇವಾದಾಯ ಬ್ರಹ್ಮಾದಾಯವನು ವಿಚಾರಿಸುವಲ್ಲಿ ಕೊವೆಯರು ಕೊಮ್ಮೆಯರು ಸೆವಿಸರು ಮೊದಲಾದ ಪ್ರಭುಗಳ ಮುಂದಿಟ್ಟು ಪೂರ್ವದ ಮರಿಯಾದೆಯಲ್ಲಿ ಹೊನ್ನಿಗೊಂದು ಹಣವಿನ ಲೆಕ್ಕದಲ್ಲಿ ಸಲ್ಲುವ ಹೊನ್ನಿನೊಳಗೆ ಸೋಮಯ್ಯದೇವರ ಭೋಗನಾಥದೇವರ ಅಮೃತಪಡಿಗೆ ಮಧ್ಯಕದಲ್ಲೂ ಹನ್ನೆರಡು ಹೊನ್ನುಳಿದು ಉಳಿದ ಹೊನ್ನನು ಮೂಲಸ್ಥಾನದೇವರು ಲಕ್ಷ್ಮೀಕಾಂತದೇವರ ಶ್ರೀಕಾರ್ಯಕ್ಕೆ ಸಮವಾಗಿ ಕೊಟ್ಟು, ನಡೆಸಿ ಬಂದಕ್ಕಾಗಿ" ಎಂದು ಸ್ಪಷ್ಟಪಡಿಸಲಾಗಿದೆ. ಉಲ್ಲೇಖಿತ ನಿದರ್ಶನ ವಿಜಯನಗರದಲ್ಲಿ ಕೃಷ್ಣದೇವರಾಯ ಅಧಿಕಾರಕ್ಕೆ ಬರುವ ಮುನ್ನ ತಗಡೂರಿನ ಆಡಳಿತದ ವೈಖರಿಯನ್ನು ಸೂಚಿಸುತ್ತದೆ. ಇಲ್ಲಿ ಕ್ರಮೇಣ ನಾಡಪ್ರಭುಗಳ ನಿರ್ಲಕ್ಷ್ಯ, ಪರಸ್ಪರ ಪ್ರತಿಷ್ಠೆ ಇತ್ಯಾದಿಯಿಂದಾಗಿ ಆಳರಸರ ಗಮನಕ್ಕೆ ಬಾರದೆ ಆದಾಯ ಕುಂಠಿತವಾಗುತ್ತಿದ್ದುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಜೊತೆಗೆ ತಗಡೂರಿನಲ್ಲಿ ಕೊಮ್ಮೆಯರೊಂದಿಗೆ ಕೋವರು ಸೆವಿಸರು ಪ್ರಭುಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು ಮನ್ನಣೆ ಗಳಿಸಿದ್ದನ್ನು ಕಾಣುತ್ತೇವೆ. ಅದೇರೀತಿ ನಂಜನಗೂಡು ತಾಲ್ಲೂಕಿನ ಚುಂಚನಹಳ್ಳಿ ಗ್ರಾಮಕ್ಕೆ ಪಶ್ಚಿಮ ಬಯಲಿನಲ್ಲಿ ಬಿದ್ದಿರುವ ಕಲ್ಲಿನಲ್ಲಿ ಕ್ರಿ.ಶ. ೧೪೯೬ರಲ್ಲಿ ಶ್ರೀಮದನಾದಿಯಾದ ಮಹಾನಾಡು ತಗಡೂರ ಶ್ರೀ ಮಲ್ಲಿನಾಥದೇವರ ಭಂಡಾರಕ್ಕೆ ನಂಜನಗೂಡಿನ ಬಸವಣ್ಣವೊಡೆಯರ ಮಕ್ಕಳಾದ ನಂಜಯ್ಯ, ಸೋಮಯ್ಯ, ವೀರಯ್ಯ, ಬಳೂರಯ್ಯ ಎಂಬ ನಾಲ್ವರೂ ಕೊಟ್ಟ ಗ್ರಾಮದ ಕ್ರಯ ಶಾಸನವಿದೆ. ಈ ಶಾಸನವು ಅಂದು ತಗಡೂರಲ್ಲಿ ಇದ್ದ ಆರಾಧ್ಯರಾದ ಶಿವಲಿಂಗವೊಡೆಯರ ಮಕ್ಕಳು ಶಿವಲಿಂಗವೊಡೆಯರಿಗೆ ದೇವರಾಯ ಮಹಾರಾಯರಿಂದ ಧಾರಾಪೂರ್ವಕವಾಗಿ ಬಂದ ಕಡಕೊಳ ಗ್ರಾಮವನ್ನು ಅವರ ಕೈಯಿಂದ ಕ್ರಯಕ್ಕೆ ತೆಗೆದುಕೊಂಡು, ಅನುಭವಿಸುತ್ತಾ ಬರುತ್ತಿದ್ದು, ಈಗ ನಮ್ಮ ಅಗತ್ಯಾನುಸಾರ ದೇವರ ಭಂಡಾರಕ್ಕೆ ಕ್ರಯಕ್ಕೆ ಕೊಟ್ಟೆವು ಎಂದು ತಿಳಿಸಿ ಆ ಗ್ರಾಮದ ಸೀಮಾ ವಿವರವನ್ನೊಳಗೊಂಡಿದೆ.



ಚಾಮರಾಜನಗರದ ತಮ್ಮಡಿಹಳ್ಳಿಯ ಊರ ಮಧ್ಯದಲ್ಲಿರುವ ಶಿಲೆಯಲ್ಲಿ ೧೫ನೇ ಶತಮಾನದ ಬರಹವಿದೆ. ಈ ಶಾಸನದ ಪ್ರಕಾರ, ಉಮ್ಮತ್ತೂರ ಸೀಮೆಯ ೫ ಗ್ರಾಮಗಳನ್ನು ತಗಡೂರ ಪ್ರಭು ವರ್ಗಕ್ಕೆ ಉಂಬಳಿಯಾಗಿ ಕೊಟ್ಟದ್ದೆಂದು ತಿಳಿಯುತ್ತದೆ. ಗ್ರಾಮಗಳನ್ನು ಹೆಸರಿಸಿಲ್ಲ. ಹೆಚ್ಚಿನ ವಿವರಗಳಿಲ್ಲ. ಕಾಲಚಕ್ರಕ್ಕೆ ಸಿಕ್ಕಿ ಕಲ್ಲು ಹಾಳಾಗಿದೆ.

ತಗಡೂರಿನ ಮೂಲಸ್ಥಾನೇಶ್ವರ ದೇವಸ್ಥಾನದ ಅರಳಿಕಟ್ಟೆಗೆ ಹಾಸಿರುವ ಕಲ್ಲಿನಲ್ಲಿ ೧೫ನೇ ಶತಮಾನದ ಏಳು ಪಂಕ್ತಿಯ ತ್ರುಟಿತ ಶಾಸನವಿದ್ದು, ಕಣ್ಣಪ್ಪ ನಾಯಕ ಎಂಬಾತ ಶ್ರೀ ಮೂಲಸ್ಥಾನೇಶ್ವರ ದೇವರ ಅಭಿಷೇಕಕ್ಕೆಂದು ತೆಂಗಿನತೋಟ ದಾನ ಮಾಡಿದ್ದನ್ನು ದಾಖಲಿಸುತ್ತದೆ.

ತಗಡೂರಿಗೆ ಸಂದಾಯವಾಗಬೇಕಾಗಿದ್ದ ತೆರಿಗೆಗಳನ್ನು ನಂಜುಂಡೇಶ್ವರ ದೇವರಿಗೆ ಬಿಟ್ಟ ವಿವರ ಮತ್ತೊಂದು ಶಾಸನದಲ್ಲಿದೆ. ಅದೇ ನಂಜನಗೂಡು ತಾಲ್ಲೂಕಿನ ಕ್ರಿ.ಶ. ೧೫೩೦ರ ಬಸವಟ್ಟಿಗೆ ಗ್ರಾಮದ ರಾಮೇಶ್ವರ ಗುಡಿಯ ಪಕ್ಕದಲ್ಲಿರುವ ಶಾಸನ. ಈ ಶಾಸನದ ಪ್ರಕಾರ ಶ್ರೀಮನ್ಮಹಾಮಂಡಲೇಶ್ವರನಾಗಿದ್ದ ಉಮ್ಮತ್ತೂರಿನ ಶ್ರೀ ವೀರಮಲ್ಲರಾಜರು ಬಾನಾಡವೇಂಠೆಗೆ ಸಲ್ಲುವ ತಗಡೂರು ಸ್ಥಳದ ಕಲ್ಲುಕೂಡ ಗ್ರಾಮವನ್ನು ಶ್ರೀನಂಜುಂಡೇಶ್ವರ ದೇವರ ಅಮೃತಪಡಿ ನೈವೇದ್ಯಕ್ಕೆ ಸಹಿರಣ್ಯೋದ್ಯಕವಾಗಿ ಧಾರಾಪೂರ್ವಕವಾಗಿ ಕೊಟ್ಟ ಗ್ರಾಮ ಎಂದಿದೆ. ಚತುಸೀಮೆಯ ವಿವರ ಇದೆ. ಅಲ್ಲದೆ ತೆರಿಗೆಗಳಾದ ಸ್ಥಾವರಸುಂಕ, ಹತ್ತಿಸುಂಕ, ಬಣಜ, ಮಗ್ಗಸುಂಕ, ಒಳವಾರು ಹೊರವಾರು ಮನೆವಣ ಆಡದೆರೆ (ಆಡು) ಪಲದೆರೆ ಮೊದಲಾದುವನ್ನು ನಂಜುಂಡೇಶ್ವರನ ಸನ್ನಿಧಿಗೆ ಬಿಡಲಾಗಿತ್ತು. ಹಿರಿಯನಾಡಾದ ತಗಡೂರಿನ ವ್ಯಾಪ್ತಿಯಲ್ಲಿದ್ದ ವಿವಿಧ ವರ್ಗಗಳು, ಕಸುಬು, ತೆರಿಗೆಯಿಂದ ಬರುವ ಆದಾಯ ಅಂದು ಸಾಮಾಜಿಕವಾಗಿ, ಆರ್ಥಿಕವಾಗಿ ಗಮನ ಸೆಳೆದಿತ್ತು.

ಹೆಗ್ಗಡದೇವನಕೋಟೆ ತಾಲ್ಲೂಕಿನ ಕ್ರಿ. ಶ. ೧೫೩೧ರ ಕೇತಹಳ್ಳಿ ಶಾಸನವು ಅಚ್ಯುತದೇವರಾಯನ ಮಹಾಪಾತ್ರಯ್ಯನವರ ಕಾರ್ಯಕ್ಕೆ ಕರ್ತರಾಗಿದ್ದ (ಪ್ರತಿನಿಧಿ)

ಮಲ್ಲಪ್ಪನಾಯಕರು ತಗಡೂರ ಚಿಕ್ಕಮಲ್ಲಯ್ಯವೊಡೆಯರ ಶ್ರೀ ಹರುವಗೆಯ ಶೋತ್ರೀಯ ಶಿಲಾಶಾಸನದಂತೆ, ಹರುವೆ ಗ್ರಾಮದ ಸರ್ವಮಾನ್ಯವಾಗಿದ್ದ ಅಣೆಅಚ್ಚುಕಟ್ಟು, ಕುಂಬಾರದೆರೆ, ಸಿರಿಯೂರ ವರ್ತನೆ ಮುಂತಾದ ಆದಾಯವನ್ನು ಅನುಭವಿಸಿಕೊಂಡು ಬರುವಂತೆ ಹೇಳಿದೆ.

ಗುಂಡ್ಲುಪೇಟೆ ತಾಲ್ಲೂಕಿನ ಹಿರೀಕಾಟಿ ಗ್ರಾಮಕ್ಕೆ ಉತ್ತರದಲ್ಲಿ ಸರ್ಕಾರದ ಬೀಡುಭೂಮಿಯಲ್ಲಿ ನಿಂತಿರುವ ಕ್ರಿ. ಶ. ೧೫೩೩ರ ಶಾಸನ ಅಚ್ಯುತದೇವರಾಯನ ಕಾಲದಲ್ಲಿ ಚಿಕ್ಕಮಲ್ಲಯ್ಯ ಎಂಬಾತ ತಗಡೂರ ನಾಡಪ್ರಭುವಾಗಿದ್ದು ಆತ ಹಿರಿಯಕಾಟಿಯ ಮಲ್ಲಯ್ಯದೇವರಿಗೆ ಗ್ರಾಮದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಮತ್ತೆ ತಗಡೂರಿನ ಗಣಪತಿ ದೇವಸ್ಥಾನದ ಬಳಿ ಬಿದ್ದಿರುವ ಶಿಲಾಶಾಸನವು ಕ್ರಿ. ಶ. ೧೫೪೩ರಲ್ಲಿ ತಗಡೂರು ಗ್ರಾಮದ ಕೆರೆಯ ನಂಜಯದೇವರಿಗೆ ತಗಡೂರು ಸ್ಥಳದ ಕಿಮಿಹಳ್ಳಿಯ ಗ್ರಾಮವನ್ನು ಬಿಟ್ಟುಕೊಟ್ಟು ಅಷ್ಟಭೋಗತೇಜಸ್ವಾಮ್ಯವಾಗಿ (ಎಂಟು ಹಕ್ಕುಗಳು) ಆಚಂದ್ರಾರ್ಕಸ್ಥಾಯಿಯಾಗಿ ಸರ್ವಮಾನ್ಯ ಶೋತ್ರುವ್ರಿತ್ತಿಯಾಗಿ ಅನುಭವಿಸಬೇಕೆಂದು ಹೇಳಿದೆ.

ಕಳಲೆ ಮನೆತನದವರು ಸುತ್ತಮುತ್ತಲಿನ ಕುಟುಂಬಗಳೊಡನೆ ವೈವಾಹಿಕ ಸಂಬಂಧ ಬೆಳೆಸಿದ್ದರೆಂದು ಪ್ರತೀತಿ ಇದೆ. ಕಳಲೆ ಅರಸ ತಿಮ್ಮರಾಜನಿಗೆ ನಾಲ್ವರು ಪತ್ನಿಯರಿದ್ದು, ಚೆನ್ನಮ್ಮಾಜಿ ತಗಡೂರಿನವಳು. ಈಕೆ ದ್ವಿತೀಯ ರಾಣಿ.

ಕ್ರಿ. ಶ. ೧೫೪೬ರ ಗುಂಡ್ಲುಪೇಟೆ ಶಾಸನವು ಅಚ್ಯುತದೇವರಾಯ ದಳವಾಯಿ ಕೃಷ್ಣಪ್ಪನಾಯಕನಿಗೆ ಆತನ ನಾಯಕತನಕ್ಕೆ ಪಾಲಿಸಿದ ಉಮ್ಮತ್ತೂರ ಸೀಮೆಯ ತಗಡೂರ ಸ್ಥಳದ ಹೊರೆಯಾಲ ಗ್ರಾಮವನ್ನು ತಗಡೂರ ನಾಡಪ್ರಭು ಚಿಕ್ಕಮಲ್ಲಯ್ಯನಿಗೆ ಉಂಬಳಿ ಗ್ರಾಮವಾಗಿ ಕೊಟ್ಟನೆಂದು ಉಲ್ಲೇಖಿಸುತ್ತದೆ. ಉಂಬಳಿ ಅಂದರೆ ಸೇವೆಗೆ ಪ್ರತಿಯಾಗಿ ಸಂಬಳ ಪಡೆಯುವಂತೆ ಅಂದು ಭೂಮಿ ನೀಡಲಾಗುತ್ತಿತ್ತು. ಅದರಲ್ಲಿ ಬಂದ ಉತ್ಪನ್ನಕ್ಕೆ ತೆರಿಗೆ, ಅದರಲ್ಲೂ ಭೂಕಂದಾಯ ಕಡ್ಡಾಯವಾಗಿ ತೆರಬೇಕಾಗಿತ್ತು.

ಕ್ರಿ. ಶ. ೧೫೬೪ರ ಕಿರುಗಸೂರು ಶಾಸನವು ರಕ್ತಾಕ್ಷಿ ಸಂವತ್ಸರದ ಭಾದ್ರಪದ ಶು ೧೧ ಸು ತಗಡೂರ ಲಕ್ಷ್ಮಿನಾರನ್‌ರವರು ಕಿರುಗಸೂರನ್ನು ಲಕ್ಷುಮಣದಾಸರ ಮಗ ದೊಡ್ಡ ಸಿಂಗರಿಯಮನಿಗೆ ಸರ್ವಮಾನ್ಯವಾಗಿ ಕೊಟ್ಟರು ಎನ್ನುತ್ತದೆ.



“ಮೈಸೂರಿನ ವಿರುದ್ಧ ತಲಕಾಡು, ಅಮಚವಾಡಿ, ಯಳವಂದೂರು, ತಗಡೂರು ದೊರೆಗಳು ಕೂಟ ರಚಿಸಿಕೊಂಡು ತಿರುಮಲರಾಜನ ಪರವಾಗಿ ಕೆಸರೆ ಕಾಳಗದಲ್ಲಿ ಹೋರಾಡಿ ಸೋಲಲು ಅಂದು ಮೊರಸು, ಬೇಡ, ಮಲೆನಾಡವರು ಒಗ್ಗೂಡಿ ಹೋರಾಡಿದ್ದರು. ಅವರೊಡನೆ ಎಲ್ಲರೂ ಹೇಡಿಗಳಾಗಿ ಸೋತೆವು. ಮುಂದೆ ದಿಟ್ಟತನದಿಂದ ತಿರುಮಲೆರಾಜನ ಪರವಾಗಿ ಹೋರಾಡುವೆವು ಎಂದು ಹೇಗಾದರೂ ತೆಲುಗು ರಾಜನಿಗೆ ಧೈರ್ಯ ತುಂಬಿ ಅವನ ರಕ್ಷಣೆಯಲ್ಲಿ ಉಳಿದು ಕಾಲ ಕಳೆಯುವೆವು. ಅವನ ಅಳಿವಿನಲ್ಲಿ ಅಳಿಯುವೆವು” ಎಂದು ಮೈಸೂರಿನವರ ವಿರುದ್ಧ ಒಟ್ಟುಗೂಡಲು ನಿರ್ಧರಿಸಿದ್ದನ್ನು ತಿರುಮಲಾಚಾರ್ಯ ತನ್ನ ‘ಚಿಕ್ಕದೇವರಾಯ ವಂಶಾವಳಿ’ಯಲ್ಲಿ ತಿಳಿಸಿದ್ದಾನೆ. ಹೀಗೆ ಪರ–ವಿರೋಧ ಬಣಗಳೊಡನೆ ಹೋರಾಡುವ ಪ್ರವೃತ್ತಿಯವರು ಸ್ಥಳೀಯ ಪ್ರಭುಗಳು.

ಗ್ರಾಮಗಳಿಂದ ಸಂಗ್ರಹಿಸುತ್ತಿದ್ದ ನಾನಾ ತೆರಿಗೆಗಳ ಬಗ್ಗೆ ಈ ಕೆಳಗಿನ ಶಾಸನ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಗುಂಡಾಪಂಡಿತ ಲಕ್ಷ್ಮಣಾಚಾರ್ಯರ ಬಳಿ ಇದ್ದ ಮೈಸೂರಿನ ಈ ಶಾಸನ ೪೭೬ ಪಂಕ್ತಿಗಳಿಂದ ಕೂಡಿದ್ದು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ಮೈಸೂರಿನ ಚಿಕ್ಕದೇವರಾಜ ಒಡೆಯರು ಕ್ರಿ.ಶ. ೧೬೭೪ರಲ್ಲಿ ಬರೆಸಿದ ಈ ಶಾಸನ ೧೦ ತಾಮ್ರಪಟಗಳಲ್ಲಿದ್ದು ತಮ್ಮ ತಂದೆಗೆ ಪುಣ್ಯವಾಗಬೇಕೆಂದು ಪರವಾಸುದೇವಗುಡಿ ಕಟ್ಟಿಸಿದ್ದು, ಅದು ಕೌಂಡಿನಿ ನದಿ ತಟದಲ್ಲಿ ನಿರ್ಮಿಸಲಾಗಿದೆಯೆಂದೂ, ಸ್ಥಾಪಿಸಿದ ಅಗ್ರಹಾರಕ್ಕೆ ‘ದ್ವಿತೀಯ ಶತಕಾಭಿದಂ’ ಎಂದು ಹೆಸರಿಸಿ ಶ್ರೀವೈಷ್ಣವರಿಗೆ ೮೧ ವ್ರಿತ್ತಿ ಬಿಟ್ಟು ಕೊಟ್ಟಿದ್ದನ್ನು ತಿಳಿಸುತ್ತದೆ. ಅಲ್ಲದೆ ವಿವಿಧ ಗ್ರಾಮದ ಎಲ್ಲೆಯನ್ನು ಗುರುತಿಸುವಾಗ ಏಳನೆಯ ಹಲಗೆಯ ಹಿಂಭಾಗದಲ್ಲಿ ‘ಉಡಿಗಾಲಕ್ಕೆ ಪಡುವಲು ತಗಡೂರ ಸೀಮೆಗೆ ಸಲುವ ತಮ್ಮಡಿಹಳ್ಳಿಗೆ ತೆಂಕಲು’ ಎಂದು ಸೀಮೆಯ ವಿವರ ಮುಂದುವರಿಯುವುದನ್ನು ಗಮನಿಸುತ್ತೇವೆ. ಅಂದಿನ ತೆರಿಗೆಗಳು ಹೀಗಿತ್ತು: ಗದ್ದೆಬೆದ್ದಲು, ತೋಟ, ತುಡಿಕೆ, ಅಣೆಅಚ್ಚುಕಟ್ಟು ಕಾಡಾರಂಭ, ನಿರಾರಂಭ, ಮಗ್ಗ, ಮನೆವಣ, ಸುಂಕ, ಸುವರ್ಣಾದಾಯ, ಕಾಣಿಕೆ, ಬೇಡಿಗೆ ಹುಲ್ಲುಹಣ, ಹೊಗೆಹಣ, ಹೊಗೆಕಾಣಿಕೆ, ಕುರಿದೆರಿಗೆ, ಜಾತಿಗೂಟ, ದೇವರಾಯವಟ್ಟ, ಹೆಚ್ಚು,

ಬೇಡಿಗೆ, ಗ್ರಾಮಾದಾಯ, ಚರಾದಾಯದ ಜೊತೆಗೆ ಊಳಿಗಮಾನ್ಯದ ಅರೆವಾಸಿಯನ್ನು ಕೂಡಾ ಆ ದೇವನಗರದ ದ್ವಿತೀಯ ಶತಕದ ಬ್ರಾಹ್ಮಣರಿಗೆ ಮಾನ್ಯ ಮಾಡಲಾಗಿತ್ತು. ತ್ರಿಮತಸ್ಥರಿಗಾಗಿ ಮತ್ತೊಂದು ಅಗ್ರಹಾರ ರಚಿಸಲಾಗಿತ್ತು.

ಸುದೀರ್ಘ ಶಾಸನಗಳಲ್ಲಿ ಒಂದೆನಿಸಿದ ತಿ.ನರಸೀಪುರದ ತಾಮ್ರಶಾಸನ ೧೬೯೦ ಪಂಕ್ತಿಗಳಿಂದ ಕೂಡಿದ್ದು ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ದಳಪತಿ ದೇವರಾಜ ಹಲವು ಬ್ರಾಹ್ಮಣರಿಗೆ ೧೪ ಗ್ರಾಮಗಳನ್ನು ದತ್ತಿ ಬಿಟ್ಟು ೧೨೦ ವೃತ್ತಿಗಳನ್ನಾಗಿ ಮಾಡಿ ವಿತರಿಸಿದ್ದ. ಗ್ರಾಮದ ಎಲ್ಲೆಯನ್ನು ನಿಗದಿಪಡಿಸುವಾಗ ಹದಿಮೂರನೆ ಹಲಗೆಯ ಹಿಂಭಾಗದಲ್ಲಿ ತಗಡೂರ ಹೋಬಳಿ ಹಚ್ಚೇಗಳ್ಳೀಯಲ್ಲೆಗೆ ಮೂಡಲು ಎಂದಿದೆ. ತಗಡೂರು ಸ್ಥಳದ ಕಾಮಹಳ್ಳಿ ಎಲ್ಲೆಗೆ ಎಂದೂ, ಅಂದು ತಗಡೂರು ಹೋಬಳಿ ಮತ್ತು ಸ್ಥಳದ ಸ್ಥಾನ ಗಳಿಸಿದ್ದನ್ನು ತಿಳಿಸುತ್ತದೆ.

ತಗಡೂರಿನ ಲಕ್ಷ್ಮೀಕಾಂತ ದೇವಸ್ಥಾನದ ನವರಂಗಮಂಟಪದಲ್ಲಿರುವ ಮೊದಲ ನಾಲ್ಕು ಕಂಬಗಳನ್ನು ೬ ಗದ್ಯಾಣ ಖರ್ಚು ಮಾಡಿ ನಿರ್ಮಿಸಲಾಗಿದೆ ಎಂದು ಪ್ರತಿ ಕಂಬ ರಚಿಸಿದಾತ ಮತ್ತು ತಗುಲಿದ ವೆಚ್ಚದ ಬಗ್ಗೆ ಮಾಹಿತಿ ದೊರೆಯುತ್ತದೆ. ಮೊದಲ ಕಂಬವನ್ನು ದೊಡ್ಡ ಕವಲಂದೆಯ ಮಾರಗಾವುಂಡನ ಮತ್ತು ಶೆಟ್ಟಿಗಾವುಂಡನೂ, ಎರಡನೇ ಕಂಬ ಪೆರ್ನವಾಡಿಯ ಮಾರಗಾವುಂಡನ ಮಗ ಸಂಭುಗಾವುಡ್ಡನ್‌ನೂ, ಮೂರನೆಯ ಕಂಬ ಪಾಲೈಲೂರ್‌ನ ಗಂಡನ್ ಎಂಬಾತ ಹಾಗೂ ನಾಲ್ಕನೆಯ ಕಂಬವನ್ನು ಕಾರಾಯಪ್ಪಳ್ಳಿಯ ಶಿಜ್ಜನಮನ್ನನ್ ಅವರು ಮಾಡಿಸಿದ್ದೆಂದು, ಆಯಾ ಕಂಬದಲ್ಲಿನ ಬರಹ ದಾಖಲಿಸಿದೆ. ಈ ಶಾಸನಗಳು ತಮಿಳು ಗ್ರಂಥಾಕ್ಷರದಲ್ಲಿದೆ. ದೇವಾಲಯವನ್ನು ಶ್ರೀಲಕ್ಷ್ಮಿನಾರಾಯಣ ಪೆರುಮಾಳ್ ಎಂದು ಹೆಸರಿಸಿವೆ.

ಹರದನಹಳ್ಳಿಯ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದ ದಕ್ಷಿಣಕ್ಕಿರುವ ನಾಲ್ಕನೆಯ ಕಂಬದ ಉತ್ತರ ದಿಕ್ಕಿನಲ್ಲಿರುವ ಐದು ಸಾಲಿನ ಶಾಸನವು (೧೮ನೇ ಶತಮಾನ) 'ತಗಡೂರ ಮಲ್ಲರಾಜೊಡೆಯರ ಮಕ್ಕಳಾದ ನಂಜರಾಜಯ್ಯ ದೇವಾಪ್ರುತ್ತಿ ಪೂಜೆ ಒಪ್ಪತ್ತಿನ ನೈವೇದ್ಯಕ್ಕೆ ಶರಣು ಮಾಡಿದ್ದು ಗದ್ದೆ ೨೦' ಎಂದು ಹೇಳುತ್ತದೆ.



ಇಂದು ತಗಡೂರಿನ ಪುರಾತನ ದೇವಾಲಯಗಳು ಸ್ಥಳೀಯರ ಸಹಕಾರ ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರಹೆಗ್ಗಡೆ ಅವರ ಶ್ರದ್ಧೋತ್ಸಾಹದಿಂದ ಧರ್ಮೋತ್ಥಾನ ಟ್ರಸ್ಟ್‌ನ ಅಡಿಯಲ್ಲಿ ಜೀರ್ಣೋದ್ಧಾರಗೊಂಡಿವೆ. ಗಣಪತಿಗುಡಿ, ರಾಮಮಂದಿರ ಮತ್ತು ಮಾರುತಿ ಮಂದಿರಗಳಿವೆ. ಹನುಮ ಜಯಂತಿ ಪ್ರಯುಕ್ತ ಇಲ್ಲಿಯ ಮಾರುತಿ ಮಂದಿರವು ತನ್ನ ೫೦ನೇ ವರ್ಷದ ಸುವರ್ಣ ಮಹೋತ್ಸವನ್ನು ಸಂಭ್ರಮದಿಂದ ಆಚರಿಸಿತು.

ತಗಡೂರಿನ ಕೊಮ್ಮೆಕೆರೆ ಕೃಷಿ ಸಂಸ್ಕೃತಿಯನ್ನು ಎತ್ತಿಹಿಡಿದಿದೆ. ಸಕಲ ಜೀವರಾಶಿಗಳಿಗೂ ಲೇಸನ್ನು ಬಯಸುವ ಉದಾತ್ತಗುಣ ಜನರಲ್ಲಿತ್ತು. ಕಟ್ಟಿಸಿದವರು ಕೊಮ್ಮೆಯರೇ ಇರಬೇಕು. ಆದ್ದರಿಂದ ಕೊಮ್ಮೆಗೆರೆ ಎಂಬ ಹೆಸರು ಬಂದಿದ್ದೆಂದರೆ ತಪ್ಪಾಗಲಾರದು. ದೀರ್ಘಕಾಲ ಬತ್ತಿಹೋಗಿದ್ದ ಈ ಕೆರೆಯನ್ನು ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆಯ ಯೋಜನೆಯ ಅಡಿಯಲ್ಲಿ ನೀರು ತುಂಬಿಸಿ ಭರ್ತಿ ಮಾಡಲಾಗಿದೆ. ಈ ಕೆರೆಯ ವಿಸ್ತೀರ್ಣ ೬೪.೭೫ ಹೆಕ್ಟೇರ್, ಕೆರೆಯ ಎಡದಂಡೆ ೨ ಕಿ.ಮೀ ಉದ್ದ ಮತ್ತು ಬಲದಂಡೆ ೩ ಕಿ.ಮೀ. ಉದ್ದವುಳ್ಳದ್ದಾಗಿದೆ. ಪಕ್ಷಿಗಳ ಹಾರಾಟ, ದನಕರುಗಳು, ಕುರಿಮೇಕೆಗಳು ನೀರು ಕುಡಿಯುವ ದೃಶ್ಯ ಕಣ್ಮನಗಳಿಗೆ ಸಂತಸ ನೀಡುತ್ತದೆ.

ಹಿರಿಯನಾಡಾದ ತಗಡೂರು ಕ್ರಮೇಣ ಹೋಬಳಿ, ಗ್ರಾಮ ಎಂಬ ಅಸ್ತಿತ್ವದಲ್ಲಿದ್ದರೂ ತನ್ನ ಭವ್ಯ ಸಂಸ್ಕೃತಿ ಮತ್ತು ಪರಂಪರೆಯಿಂದ ಆಧುನಿಕ ಕಾಲದ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿತ್ತೆಂಬುದನ್ನು ಪರಿಶೀಲಿಸೋಣ.

ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ನಂತರ ೧೭೯೯ರಿಂದೀಚೆಗಿನ ವಿದ್ಯಮಾನಗಳು ಮೈಸೂರು ಸಂಸ್ಥಾನವು ಬ್ರಿಟಿಷ್ ರೆಸಿಡೆಂಟ್‌ನ ಮೂಲಕ ನಡೆಯುವಂತೆ ಮಾಡಿತ್ತು. ಮೇಲ್ನೋಟಕ್ಕೆ ರಾಜರು ನಮ್ಮವರೇ ಆಗಿದ್ದರೂ ಬ್ರಿಟಿಷ್ ರೆಸಿಡೆಂಟರ ದಾಸರಾಗಿದ್ದರು. ಪ್ರಜೆಗಳು ಎರಡು ಬಗೆಯ ದಾಸರ ಹಿಡಿತಕ್ಕೆ ಒಳಪಟ್ಟಿದ್ದರೆಂಬುದನ್ನು ತಿಳಿಯಪಡಿಸಲು ತಗಡೂರಿನ ಜನ ಎಷ್ಟೆಲ್ಲಾ ಕಷ್ಟನಷ್ಟಗಳನ್ನು ಎದುರಿಸಿದರು ಎಂಬುದನ್ನು ಊಹಿಸಿಕೊಳ್ಳೋಣ. ದೇಶೀಯ ಸಂಸ್ಥಾನದ ಅರಸರು ಭಾರತೀಯರೇ ಆಗಿದ್ದರೂ ಅವರ ನಿರಂಕುಶ ಆಳ್ವಿಕೆ ಪ್ರಜೆಗಳಿಗೆ ಅರ್ಥವಾಗುತ್ತಿತ್ತೇ? ಇಲ್ಲವೇ? ಎಂಬ ಅಂಶವನ್ನು ಸ್ವತಃ ಅನುಭವದಿಂದ

ಹಂಚಿಕೊಂಡಿರುವ ನೂರಾರು ಹೋರಾಟಗಾರರ ಸ್ಮೃತಿಗಳಿಂದ ಆಧರಿಸಿ ಬರೆದ ಗ್ರಂಥಗಳಲ್ಲಿ ಕಾಣಬಹುದು, ಗ್ರಹಿಸಬಹುದು.

ಮೈಸೂರು ಸಂಸ್ಥಾನ ಎಂಟು ಜಿಲ್ಲೆಗಳಿಂದ ಕೂಡಿತ್ತು. ಅವು ಯಾವುವೆಂದರೆ ಮೈಸೂರು, ತುಮಕೂರು, ಹಾಸನ, ಚಿತ್ರದುರ್ಗ, ಬೆಂಗಳೂರು, ಕಡೂರು, ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳು. ಈಗಾಗಲೇ ತಿಳಿಸಿದಂತೆ ತಗಡೂರು ಮೈಸೂರು ಜಿಲ್ಲೆಗೆ ಸೇರಿದ ನಂಜನಗೂಡು ತಾಲ್ಲೂಕಿನ ಗ್ರಾಮ. ಬೆರಳೆಣಿಕೆಯಷ್ಟು ವಿದ್ಯಾವಂತರಿದ್ದ ಕಾಲಘಟ್ಟದಲ್ಲಿ ದೇಶದ ಸ್ಥಿತಿಗತಿ ಹೆಚ್ಚಿನ ಮಟ್ಟಿಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲೆಲ್ಲೂ ನಿರ್ಬಂಧಗಳಿದ್ದವು ಆದಾಗ್ಯೂ ಈ ಊರಿನ ಜನ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಸ್ವಾತಂತ್ರ್ಯದ ಕರೆಗೆ ಓಗೊಡುತ್ತಿದ್ದರೆಂಬುದು ಗಮನಾರ್ಹ.

ರಾಷ್ಟ್ರೀಯ ಹೋರಾಟ ನಿರ್ದಿಷ್ಟ ದಿಕ್ಕಿನಲ್ಲಿ ಸಾಗತೊಡಗಿದುದು ಮೊದಲ ಮಹಾಯುದ್ಧ ಕಾಲದಲ್ಲಿ. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಬಂದವರು ಮೊದಲು ಬ್ರಿಟಿಷರಿಗೆ ಸಹಕಾರ ನೀಡಿದರು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ತರುವಾಯ ವಾಸ್ತವವಾಗಿ ಸ್ವಾತಂತ್ರ್ಯ ಹೋರಾಟದ ಕಣಕ್ಕಿಳಿದು ರಚನಾತ್ಮಕ ಕಾರ್ಯಗಳ ಮೂಲಕ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಉತ್ಸುಕರಾದರು. ಈ ಕಾರ್ಯ ಚಟುವಟಿಕೆಗಳಿಂದ ಪ್ರಭಾವಿತರಾದ ತಗಡೂರಿನ ರಾಮಚಂದ್ರರಾಯರು ಮೈಸೂರು ಸಂಸ್ಥಾನದ ಪ್ರಜೆಗಳಲ್ಲೂ ಸಂಚಲನ ಮೂಡಿಸಿ ಸಂಘಟಿಸುವತ್ತ ಕಾರ್ಯಪ್ರವೃತ್ತರಾದರು. ಮರಿಮಲ್ಲಪ್ಪಶಾಲೆ ವಿದ್ಯಾರ್ಥಿಯಾಗಿದ್ದಾಗ ಅಲ್ಲಿಯ ಪ್ರಾಂಶುಪಾಲರಾದ ಶ್ರೀಯುತ ವೆಂಕಟಕೃಷ್ಣಯ್ಯನವರು (ತಾತಯ್ಯ) ಯುವಮನಸ್ಸಿನಲ್ಲಿ ದೇಶಭಕ್ತಿ ಮತ್ತು ದೈವಭಕ್ತಿಯನ್ನು ಪ್ರತಿ ತರಗತಿಯಲ್ಲೂ ಮೂಡಿಸುತ್ತಿದ್ದರು. ಇದು ದೇಶವನ್ನು ದಾಸತ್ವದ ಹಿಡಿತದಿಂದ ಬಿಡುಗಡೆಗೊಳಿಸಲು ಪಣ ತೊಡುವಂತೆ ಮಾಡಿತ್ತು.

ಬ್ರಿಟಿಷ್ ರೆಸಿಡೆಂಟರ ಮೂಲಕ ಆಡಳಿತ ನಡೆಯುತ್ತಿದ್ದ ಕಾಲಘಟ್ಟದಲ್ಲಿ ಆಡಳಿತಕ್ಕೆ ಪ್ರಜೆಗಳ ಬೆಂಬಲ ಗಳಿಸುವ, ಸಲುವಾಗಿ ಧಾರ್ಮಿಕವಾಗಿ ಸ್ಥಳೀಯರನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸುವ ಕಾರ್ಯದಲ್ಲಿ ಕ್ರೈಸ್ತ ಪಾದ್ರಿಗಳು ನಿರತರಾಗಿದ್ದರು. ಅವರಿಗೆ ಆಡಳಿತದಲ್ಲಿದ್ದ ಅಧಿಕಾರಿಗಳು ಧನಸಹಾಯ ಒದಗಿಸುತ್ತಿದ್ದರು. ಈ ದಿಸೆಯಲ್ಲಿ ಪಾದ್ರಿಗಳು ಹಳ್ಳಿ ಹಳ್ಳಿಗೆ



ಹೋಗಿ ಬಡ, ಮುಗ್ಧ, ಅನಕ್ಷರಸ್ಥ ಜನರನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸುವ ಕಾಯಕದಲ್ಲಿ ರಾಷ್ಟ್ರದಾದ್ಯಂತ ತೊಡಗಿದ್ದರು. ಮೈಸೂರು ಸಂಸ್ಥಾನ ಇದಕ್ಕೆ ಹೊರತಾಗಿರಲಿಲ್ಲ. ಇದನ್ನು ಕಂಡ ತಗಡೂರಿನ ವಿದ್ಯಾವಂತ ಜನ ಕೈಕಟ್ಟಿ ಕುಳಿತಿರಲಿಲ್ಲ. ಈ **ಮತಾಂತರದಲ್ಲಿದ್ದ ರಾಜಕೀಯ ಉದ್ದೇಶವನ್ನು ಮನಗಂಡವರಲ್ಲಿ ಈ ಊರಿನ ಜನರೇ ಮೊದಲಿಗರು**. ದೇಶೀಯ ಧರ್ಮ, ಸಂಸ್ಕೃತಿಯ ಉಳಿವಿಗಾಗಿ ರಾಮಚಂದ್ರರಾಯರು ಮತಾಂತರ ಕಾರ್ಯವನ್ನು ತಡೆಗಟ್ಟಲು ಮೊಟ್ಟ ಮೊದಲಿಗೆ ದಿಟ್ಟತನ ತೋರಿದರು. ತಮ್ಮೊಡನೆ ಆಸಕ್ತಿಯಿಂದ ಈ ರಚನಾತ್ಮಕ ಚಟುವಟಿಕೆಯಲ್ಲಿ ಭಾಗವಹಿಸಲು ಮುಂದೆ ಬಂದವರ ಜೊತೆಗೂಡಿ ಕ್ರೈಸ್ತರು ಧರ್ಮಪ್ರಚಾರಕ್ಕಾಗಿ ಹೋಗುತ್ತಿದ್ದ ಹಳ್ಳಿಗಳಿಗೆ ಗುಂಪು ಗುಂಪಾಗಿ ತೆರಳಿ ಅವರ ಮತಾಂತರ ಕೆಲಸಕ್ಕೆ ಅಡ್ಡಿಯನ್ನುಂಟುಮಾಡಿದರು. ಈ ಊರಿನ ಜನರ ಪ್ರಯತ್ನದಿಂದಾಗಿ ಪಾದ್ರಿಗಳು ಹಳ್ಳಿಗಳಿಗೆ ಹೋಗುವುದು ಕಡಿಮೆಯಾಗಿ, ಹೋರಾಟಕ್ಕೆ ತಕ್ಕಮಟ್ಟಿಗಿನ ಯಶಸ್ಸು ದೊರೆಯಿತು. ಜನರನ್ನು ಮತ್ತೆ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವ ಕಾರ್ಯಕ್ರಮವನ್ನು ಜನ ಹಮ್ಮಿಕೊಳ್ಳುತ್ತಿದ್ದರು. ಇದು 'ಶುದ್ಧೀ' ಚಳುವಳಿಯಾಗಿ ಹೊರಹೊಮ್ಮಿತು. ಸರ್ಕಾರ ಸ್ಥಳೀಯರ ಪ್ರತಿ ಪ್ರಚಾರಕ್ಕೆ ಅಡ್ಡಿಯನ್ನುಂಟು ಮಾಡಲು ಪ್ರತಿಬಂಧಕಾಜ್ಞೆಗಳನ್ನು ಎಷ್ಟೋ ಬಾರಿ ಜಾರಿ ಮಾಡಿತ್ತು. ಈ ಆಜ್ಞೆಗಳನ್ನು ಲೆಕ್ಕಿಸದೆ ಜನರನ್ನು ಮತ್ತೆ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವ ಕಾರ್ಯಕ್ರಮ ಇಟ್ಟುಕೊಳ್ಳುತ್ತಿದ್ದರು. ಈ ಕಾರ್ಯದಲ್ಲಿ ಅವರಿಗೆ ಬೆಂಬಲಿಗರಾಗಿ ನಿಂತು ಅತ್ಯಂತ ಉತ್ಸಾಹದಿಂದ ದಲಿತ ಹಿಂದೂಗಳ ಶುದ್ಧಿ ಮತ್ತು ಮುದ್ರಾಧಾರಣೆ ನಡೆಸಿಕೊಟ್ಟವರು ಮೈಸೂರು ನಗರದ ನಿವಾಸಿಗಳಾದ ಗೋವಿಂದಾಚಾರ್ಯ ಸ್ವಾಮಿಗಳು. ಈ ಶುದ್ಧೀಕರಣಕ್ಕೆ ಬೇಕಾಗುವ ಹೋಮಹವನಗಳನ್ನು ಅಂದು ವಕೀಲರಾಗಿದ್ದ ಕೆ. ಶೇಷಾದ್ರಿ ಎಂಬುವರು ನಡೆಸಿಕೊಡುತ್ತಿದ್ದರು.

**ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳ ಪಾತ್ರ** ಮಹತ್ವಪೂರ್ಣವಾಗಿತ್ತು. ಗ್ರಾಮಗಳ ಚಾವಡಿ, ಅರಳಿಕಟ್ಟೆಯಲ್ಲಿ ಸೇರಿ ಊರಿಗೆ ಬಂದ ಪತ್ರಿಕೆಯನ್ನು ಓದುತ್ತಿದ್ದರು. ಮನೆ ಮನೆಗೆ ಪತ್ರಿಕೆ ಬರುತ್ತಿರಲಿಲ್ಲ. ಪತ್ರಿಕಾ ಪ್ರಕಟಣೆಗೂ ಅನುಮತಿ ಬೇಕಿತ್ತು. ಬ್ರಿಟಿಷ್ ವಿರೋಧಿ ಸುದ್ದಿ ಪ್ರಕಟಿಸುವಂತಿರಲಿಲ್ಲ. ಪತ್ರಿಕಾ ಕಾನೂನನ್ನು ಉಲ್ಲಂಘಿಸುವ ಕಾರ್ಯ ಕೈಗೆತ್ತಿಕೊಂಡವರಲ್ಲಿ ತಗಡೂರಿನವರ ಶ್ರಮ ಮತ್ತು ಸಾಹಸ ಪ್ರಶಂಸಾರ್ಹ. **'ಕಣೆಯರ'** ಪತ್ರಿಕೆಯನ್ನು ಹೊರಡಿಸಲು ಪರವಾನಗಿ ಕೊಡದೆ ನಿರಾಕರಿಸಿದ್ದೇ ಈ ಚಳುವಳಿಗೆ ಮುಖ್ಯ ಕಾರಣ.

ರಾಮಚಂದ್ರರಾಯರು ಅನುಸರಿಸಿದ ಸತ್ಯಾಗ್ರಹದ ವೈಖರಿ ಹೇಗಿತ್ತು? ಅಂದು ಎಷ್ಟೋ ಮುದ್ರಾಣಾಲಯಗಳು ಮುಟ್ಟುಗೋಲಾದವು. ತಗಡೂರರ ಮಾತಿನಲ್ಲೇ ಹೇಳುವುದಾದರೆ **"ಪ್ರೆಸ್ ಆ್ಯಕ್ಟ್" ಉಲ್ಲಂಘನೆ**ಯನ್ನು ಮಾಡುವ ಸಲುವಾಗಿ ಮುದ್ರಣಾಲಯದವರನ್ನು ಕೇಳಿದೆ, ಯಾರೂ ಒಪ್ಪಲಿಲ್ಲ, ತುಂಬಾ ಹೆದರಿಸಿದರು, ಸವಕಲು ಮೊಳೆಗಳನ್ನು ಹತ್ತಾರು ಮುದ್ರಣಾಲಯಗಳಿಂದ ಕೇಳಿ ಶೇಖರಿಸಿ ಮುಖಪುಟವನ್ನು ಜೋಡಿಸುತ್ತಿದ್ದೆ. ಅದನ್ನು ಕಲ್ಲುಚಪ್ಪಡಿಯ ಮೇಲಿರಿಸಿ ತೆಂಗಿನ ಕರಟದಲ್ಲಿ ಶೇಖರಿಸುತ್ತಿದ್ದ ಶಾಯಿಯಲ್ಲಿ ಮುರಿದದ್ದೋ ಏನೋ ಯಾವುದೋ ರೋಲಿನಿಂದ ಇರಿಸಿದ್ದ ಕಾಗದದ ಮೇಲೆ ಪ್ರತಿ ತೆಗೆಯುತ್ತಿದ್ದೆ. ಇಷ್ಟೇ ನನ್ನ ಮುದ್ರಣಾಲಯದ ವಸ್ತುಗಳು". ಇಂಥದ್ದನ್ನೂ ಒಂದಲ್ಲ ನಾಲ್ಕಾರು ಬಾರಿ ಪೋಲೀಸರು ಮುಟ್ಟುಗೋಲು ಹಾಕಿದ್ದರು. ತಮ್ಮ ಉಡುಪಿನ ಮೇಲೆ ಸುದ್ದಿ ಬರೆದು ಅದನ್ನು ಧರಿಸಿ ಸೈಕಲ್ ಏರಿ ಮೈಸೂರು ನಗರದಲ್ಲೆಲ್ಲಾ ಸಂಚರಿಸಿದರು. ಇದೇ ರೀತಿ ಬೆಂಗಳೂರು ನಗರ ಬೀದಿಗಳಲ್ಲೂ ಅಡ್ಡಾಡಿದರು. ಇದರಿಂದ ಪೋಲೀಸರು ಮೊಕದ್ದಮೆ ಹೂಡಿದರು. ಅವರ ವಸ್ತ್ರಾಪಹರಣ ಮಾಡಿದರು. ಸರ್ಕಾರದ ವಿಚಿತ್ರ ನಡವಳಿಕೆಯಿಂದ ಜನ ಎಚ್ಚೆತ್ತರು. ಜಾಗೃತಿ ಮೂಡಿತು. ಇಂಥ ಎಷ್ಟೋ ಪ್ರಕರಣಗಳನ್ನು ನಡೆಸಿದ್ದ ಅವರು ಸಂಸ್ಥಾನದಾಚೆಗೂ ತೀವ್ರ ಪ್ರಭಾವ ಬೀರಿದರು. ಗಾಂಧೀಜಿಯವರ ಗಮನಕ್ಕೂ ಬಂದಿತ್ತು. ಪೋಲೀಸರು ಒಂದೆರಡು ಬಾರಿ ಅಮಾನುಷವಾಗಿ ವರ್ತಿಸಿದ್ದರಿಂದ ರಾಮಚಂದ್ರರಾಯರ ಜನಪ್ರಿಯತೆ ಹೆಚ್ಚಿತು. ಅವರಿಗೆ ಮೈಸೂರು ಬೆಂಗಳೂರಿನಲ್ಲೂ ಜನ ಒತ್ತಾಸೆಯಾಗಿ ಬೆಂಬಲಕ್ಕೆ ನಿಂತರು. ಅವರಲ್ಲಿ ಇಬ್ಬರು ನೀಡಿದ ನೆರವು ಅತಿಶಯವಾದುದೆಂದು ಸಮಕಾಲೀನರು ಹೇಳಿದ್ದಾರೆ. ಒಬ್ಬರು ಖಾಸಗಿ ಉಪಾಧ್ಯಾಯರಾದ ಲಕ್ಷ್ಮೀನರಸಿಂಹಯ್ಯ, ಮತ್ತೊಬ್ಬರು ದರ್ಜಿ ಮನೆತನದ ಸಂಬಾಜಿ. ವಿವಿಧ ರೀತಿಯ ಚಳುವಳಿಯಿಂದಾಗಿ ತಗಡೂರಿನ ಹೆಸರು ರಾಜಧಾನಿ ಬೆಂಗಳೂರಿನಲ್ಲಿ ರಾರಾಜಿಸುತ್ತಿತ್ತು. ತಗಡೂರಿನ ಪ್ರತಿನಿಧಿಯಾಗಿದ್ದ ರಾಮಚಂದ್ರರಾಯರು ಹಮ್ಮಿಕೊಳ್ಳುತ್ತಿದ್ದ ಚಳುವಳಿಗಳು ಜನತೆಯನ್ನು ಹುರಿದುಂಬಿಸುತ್ತಿದ್ದವು.

ಗಾಂಧೀಜಿಯವರಿಗಿಂತ ಮೊದಲೇ **ಹರಿಜನೋದ್ಧಾರ ಕಾರ್ಯಕ್ರಮ**ವನ್ನು ಮೈಸೂರಿನ 'ಥಿಯೋಸಾಫಿಕಲ್ ಸೊಸೈಟಿ'ಯವರು ಮಾಡುತ್ತಿದ್ದರು. ದೊಡ್ಡಕೇರಿಗೆ ಪ್ರತಿ ಭಾನುವಾರ ತೆರಳಿ ಕೇರಿಯ ಜನರಲ್ಲೂ ಸ್ನಾನಮಾಡಿ ಶುಭ್ರವಾದ ಬಟ್ಟೆಯನ್ನು ಧರಿಸಿ ಬಂದು ಪೂಜೆಯಲ್ಲಿ ಭಾಗವಹಿಸಬೇಕೆಂದು



ರಂಗಧಾಮಯ್ಯ ಎಂಬ ಅದೇ ಸಮುದಾಯದ ಮುಖಂಡರು ಮಾಡುತ್ತಿದ್ದರು. ಭಾರತ ಸಮಾಜಪೂಜೆ ಎಂಬ ಒಂದು ವಿಧವಾದ ಪೂಜೆಯನ್ನು ಆ ಕೇರಿಯವರೊಡನೆ ನಡೆಸುತ್ತಿದ್ದರು. ಇದಕ್ಕೆ ಗೋಪಾಲಸ್ವಾಮಯ್ಯರ್ ಎಂಬ ಖ್ಯಾತ ಹರಿಜನ ಸೇವಕರು ಸಂಪೂರ್ಣ ಬೆಂಬಲ ಕೊಡುತ್ತಿದ್ದರು. ಹರಿಜನರನ್ನು ಶಾಲೆಗಳಿಗೆ ಸೇರಿಸುವ ಮುಂಜಾಗ್ರತಾ ಪ್ರಚಾರ ಕಾರ್ಯವನ್ನು ಮಾಡುತ್ತಿದ್ದರು.

ರಾಜಮನೆತನದಲ್ಲಿ ವಿಶೇಷವಾಗಿ ಯುವರಾಜ ಕಂಠೀರವ ನರಸರಾಜ ಒಡೆಯರ್ ಹರಿಜನರ ಉದ್ಧಾರ ಕಾರ್ಯದಲ್ಲಿ ಹೆಚ್ಚಿನ ಉತ್ಸಾಹ ತೋರಿಸುತ್ತಿದ್ದರು. ಈ ಕ್ಷೇತ್ರದಲ್ಲಿ ದುಡಿಯುವವರಿಗೆ ಸ್ಫೂರ್ತಿ ನೀಡುತ್ತಿತ್ತು.

೧೯೧೯ರ **ರೌಲತ್ ಕಾಯ್ದೆ** ವಿರುದ್ಧವೂ ಜನ ಸಿಡಿದೇಳುವಂತಿತ್ತು. ಪಂಜಾಬಿನ ಅಮೃತಸರದ **ಜಲಿಯನ್‌ವಾಲಾಬಾಗ್ ಹತ್ಯಾಕಾಂಡ** ನಡೆದಾಗ ಆ ದುರಂತದ ಚಿತ್ರಗಳನ್ನು ಸಂಗ್ರಹಿಸಿ ಮಾರಾಟ ಮಾಡುವ ಚಳುವಳಿ ನಡೆಸಿದರು. ಇದರಿಂದ ರಾಷ್ಟ್ರದಲ್ಲಿ ನಡೆಯುತ್ತಿದ್ದ ನರಮೇಧದ ಚಿತ್ರಣ ಸಾಮಾನ್ಯರಿಗೂ ತಿಳಿಯುವಂತಾಯಿತು. ೧೯೧೯ರ ಏಪ್ರಿಲ್‌ನ ವೇಳೆಗೆ ತಗಡೂರು ಗ್ರಾಮದಲ್ಲಿ **ಸ್ವರಾಜ್ಯ ಮಂದಿರ** ಆರಂಭಿಸಿದರು. ೧೯೨೦ರಲ್ಲಿ ಬಾಲಗಂಗಾಧರ ತಿಲಕರ ಮರಣ ಹಾಗೂ ಶ್ರದ್ಧಾಂಜಲಿ ಅರ್ಪಿಸಲು ನ್ಯಾಯಾಲಯ ಅಂಗಡಿ ಮುಚ್ಚಿಸಿ ಬೃಹತ್ ಮೆರವಣಿಗೆ ನಡೆಸಲಾಗಿತ್ತು.

ತಗಡೂರರಿಗೆ ಹೋರಾಡಲು ಅಗತ್ಯವಾದ ಧನಸಹಾಯ ನೀಡುತ್ತಿದ್ದವರು ಯಾರು? ಎಂಬ ಪ್ರಶ್ನೆ ಮೂಡುವುದು ಸಹಜ. ಆರಂಭದ ದಿನಗಳಲ್ಲಿ ಟಿ. ಎಸ್. ಸುಬ್ಬಣ್ಣ, ಟಿ. ರಾಮರಾವ್, ಸಿದ್ದೋಜಿರಾವ್, ಟಿ. ಪಿ. ಬೋರಯ್ಯ (ತಿ.ನರಸೀಪುರ) ಧನಸಹಾಯ ಮಾಡುತ್ತಿದ್ದರು. ಮೈಸೂರಿನಲ್ಲಿ ಧರ್ಮಪ್ರಕಾಶ್ ಡಿ. ಬನುಮಯ್ಯ, ಪಿ. ಎನ್. ಸಂಗಪ್ಪ ಮತ್ತು ಹೋಟೆಲಿನವರಾದ ಬದರಿಪ್ರಸಾದ್ ಅವರಿಂದ ನೆರವು ದೊರೆಯುತ್ತಿತ್ತು. ಸಂತೆಪೇಟೆ ವರ್ತಕರು ತಿಂಗಳಿಗೆ ೧೦೦೦ ರೂ.ಗಳನ್ನು ಸತ್ಯಾಗ್ರಹಕ್ಕೆಂದೇ ನೀಡುತ್ತಿದ್ದರು. ರಾಜಾಶಾಹಿ ಅಡಿಯಲ್ಲಿ ವರ್ತಕರು ಒಂದಲ್ಲ ಒಂದು ರೀತಿಯಲ್ಲಿ ಚಳುವಳಿಗೆ ಬೆಂಬಲ ನೀಡುತ್ತಿದ್ದರು.

೧೮೮೫ರಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಕಾಂಗ್ರೆಸ್ ಪ್ರತಿ ವರ್ಷ ದೇಶದ ವಿವಿಧ ಪ್ರಾಂತಗಳಲ್ಲಿ ಸಮಾವೇಶಗೊಂಡು ಜನತೆಯನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿತ್ತು. ೧೯೨೪ರಲ್ಲಿ ನಡೆದ **ಬೆಳಗಾವಿ ಅಧಿವೇಶನ**ದಲ್ಲಿ

ತಗಡೂರಿನ ಪಾತ್ರವಿತ್ತೇ? ಎಂಬ ಪ್ರಶ್ನೆಗೆ ಉತ್ತರವಿದೆ. ಅಂದು ಬೆಳಗಾವಿ ಬಾಂಬೆ ಪ್ರಾಂತಕ್ಕೆ ಸೇರಿತ್ತು. ಮೈಸೂರು ಸಂಸ್ಥಾನದಿಂದ ರಾಮಚಂದ್ರರಾಯರು ಬೆಳಗಾವಿ ಅಧಿವೇಶನದಲ್ಲಿ ಭಾಗವಹಿಸಲು ಹೋಗಿದ್ದರು. ಅಲ್ಲಿ ಗಾಂಧೀಜಿ ಮತ್ತು ಮದನಮೋಹನಮಾಲವೀಯರನ್ನು ಕಂಡು ತಮ್ಮ ರಚನಾತ್ಮಕ ಚಟುವಟಿಕೆಗಳ ಬಗ್ಗೆ ತಿಳಿಸಿದರು. ಸಭೆಯನ್ನು ಉದ್ದೇಶಿಸಿ ತಮ್ಮ ಕಾರ್ಯಯೋಜನೆಗಳ ಬಗ್ಗೆ ಭಾಷಣ ಮಾಡಲು ತಗಡೂರರಿಗೆ ಅವಕಾಶ ನೀಡಲಾಯಿತು. ಇವರ ಭಾಷಣದಿಂದ ಹಲವರು ಪ್ರಭಾವಿತರಾದರು. ಮದನಮೋಹನಮಾಲವೀಯರು ಹೇಳಿದ್ದೇನೆಂದರೆ 'ಇಂಥ ಒಳ್ಳೆ ಕೆಲಸಗಳು ಇನ್ನೂ ಯಾವ ದೇಶೀಯ ಸಂಸ್ಥಾನದಲ್ಲೂ ನಡೆಯುತ್ತಿಲ್ಲ. ತಗಡೂರರು ಕರ್ನಾಟಕದ ಒಬ್ಬ ಹೆಮ್ಮೆಯ ಪುರುಷ' ಎಂದರು. ರಾಷ್ಟ್ರೀಯ ನಾಯಕರ ಪ್ರಶಂಸೆಗೆ ಪಾತ್ರವಾದ ಕೆಲಸ ಯಾವುದು? ಅದೇ **ಕಣಿಯರ ದೇವಾಲಯ ಪ್ರವೇಶ, ಖಾದಿ ಗ್ರಾಮೋದ್ಯೋಗ** ಮುಂತಾದವು.

ತಗಡೂರಿನ ಜನ ಯಾವುದೇ ಕೆಲಸ ಮಾಡಲಿ ಅತ್ಯಂತ ಶಿಸ್ತು ಸಂಯಮದಿಂದ ಮಾಡುತ್ತಾ ಬಂದಿದ್ದಾರೆ. ಹೋರಾಟದ ಕಾಲದಲ್ಲಿ ಕೈಗೊಂಡ ರಚನಾತ್ಮಕ ಕಾರ್ಯಗಳಲ್ಲಿ ಸಮಾಜ ಸುಧಾರಣೆಯೂ ಒಂದು. ಅದರಲ್ಲಿ ಸಮಾಜದಲ್ಲಿದ್ದ **'ಕಣಿಯರು'** ಎಂಬ ಜಾತಿಯ ಜನರನ್ನು ಮುದ್ರಾಧಾರಣೆ ಮಾಡಿಸಿ ಉತ್ತಮ ಹಿಂದೂಗಳಾಗಿ ಪರಿವರ್ತಿಸಿದ ಕಾರ್ಯ ಒಂದು ಮುಖ್ಯ ಘಟನೆ. ತಗಡೂರರಿಗೆ ಬೆಂಬಲವಾಗಿ ನಿಂತವರೇ ಗೋವಿಂದಾಚಾರ್ಯರು. ಅವರು ವೈಷ್ಣವ ಸ್ವಾಮಿಗಳಾಗಿದ್ದರು. ಮೈಸೂರು ಸರ್ಕಾರ ಇದನ್ನು ವಿರೋಧಿಸಿ ಕಾರ್ಯಗತವಾಗದಂತೆ ತಡೆಯಲು ಅನೇಕ ನಿಷೇಧಾಜ್ಞೆಗಳನ್ನು ಹೊರಡಿಸಿತು. ಇಷ್ಟಾದರೂ ಮೊಟ್ಟ ಮೊದಲು ಕೈಗೊಂಡ ಮುದ್ರಾಧಾರಣ ಕಾರ್ಯಕ್ರಮವು ನಂಜನಗೂಡು ತಾಲ್ಲೂಕಿನ ತಗಡೂರ **ಕಿರಗುಂದ ಗ್ರಾಮದ ಸಂತೆ** ದಿನ ಬೃಹತ್ ಸಮಾರಂಭದೊಂದಿಗೆ ಪ್ರಾರಂಭವಾಯಿತು. ಸುತ್ತಮುತ್ತಲಿನ ಸುಮಾರು ೧೩–೧೪ ಗ್ರಾಮಗಳಿಂದ ಕಣಿಯರು ಬಂದು ಮುದ್ರಾಧಾರಣೆಗೆ ಸೇರಿದ್ದರು. ಸರ್ಕಾರದ ಅಧಿಕಾರಿಗಳಾದ ಡೆಪ್ಯುಟಿ ಕಮೀಷನರ್, ಪೋಲೀಸ್ ಸೂಪರಿಂಟೆಂಡೆಂಟ್ ಮತ್ತಿತರರ ಭದ್ರ ಕಾವಲಿತ್ತು. ಕ್ರೈಸ್ತ ಪಾದ್ರಿ ಫಾದರ್ ಸಾಡೆಯವರು ಹಾಜರಿದ್ದರು. ಇಂಥ ಬಿಗಿ ವಾತಾವರಣದಲ್ಲೂ ಬಂದಿದ್ದ ಎಲ್ಲಾ ಕಣಿಯರಿಗೂ ಮುದ್ರಾಧಾರಣೆ ಮಾಡಿಸಿ ಸರ್ಕಾರಿ ಅಧಿಕಾರಿಗಳಿಗೆ ದಿಗ್ಭ್ರಾಂತಿಯನ್ನುಂಟು ಮಾಡಿದ್ದರು.



ತಗಡೂರಿನ ಕಿರಗುಂದ ಗ್ರಾಮದಲ್ಲಿ ಮತ್ತೊಂದು ಘಟನೆ ಸಂಭವಿಸಿತ್ತು. ಅದೇನೆಂದರೆ, ಈ ಗ್ರಾಮದ ಸುಮಾರು ೩೩ ಹಳ್ಳಿಗಳ ಹರಿಜನರ ಮೆರವಣಿಗೆಯನ್ನು ಕೊಂಬು, ಕಹಳೆ, ಜಾಗಟೆ, ತಮಟೆ ಸಹಿತ ಮೆರವಣಿಗೆಯಲ್ಲಿ ಕರೆತಂದು, ಆಗ ಐ.ಜಿ.ಪಿ. ಆಗಿದ್ದ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿ ಸಾಲಗಾರ ಹರಿಜನ ಮತ್ತು ಸಾಲಿಗ ಸಾಹುಕಾರರ ನಡುವೆ ಒಂದು ಮಹತ್ವದ ಒಪ್ಪಂದವೇರ್ಪಟ್ಟಿತು. ಇನ್ನು ಮುಂದೆ ಸಾಲಗಾರರನ್ನು ಸಾಹುಕಾರರು ಮನುಷ್ಯರ ದೃಷ್ಟಿಯಿಂದ ನೋಡಬೇಕೆಂದು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ತೀರ್ಮಾನ ಕೈಗೊಂಡದ್ದು, ಇಡೀ ಮೈಸೂರು ಪ್ರಾಂತದಲ್ಲಿ ಕ್ರಾಂತಿಯೆಂದೇ ಭಾವಿಸಲಾಗಿತ್ತು.

೧೯೨೫ರ ಸೆಪ್ಟೆಂಬರ್ ೫ ರಂದು ತಿರುಮಕೂಡಲು ನರಸೀಪುರದ ಗಾಂಧಿ ಮೈದಾನದಲ್ಲಿ ಅಖಿಲ ಕರ್ನಾಟಕ ಕಣಿಯರ ಮಹಾಸಮ್ಮೇಳನ ನಡೆದು ಎಂ. ವೆಂಕಟಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು. ಕಣಿಯರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ತಿ. ತಾ. ಶರ್ಮ, ಅಗರಂ ರಂಗಯ್ಯ, ಜಿ.ಆರ್.ಎಸ್.ರಾವ್, ಬಿ. ಎಸ್. ಸಂಜೀವಯ್ಯ, ಎಂ. ಗೋವಿಂದಾಚಾರ್ಯಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪಿ. ರಾಮಯ್ಯ, ತಗಡೂರು ರಾಮಚಂದ್ರರಾಯರು ಸೇರಿದ್ದರು. ಈ ಸಮ್ಮೇಳನವು ೨೬ ಜನ ಕಣಿಯರ ಒಂದು ಸಭೆಗೆ ಅವಕಾಶ ಕಲ್ಪಿಸಿ, ಪ್ರತಿ ಸದಸ್ಯನೂ ತನ್ನ ಕ್ಷೇತ್ರದ ಕಣಿಯರ ಅಭಿವೃದ್ಧಿಗೆ ಶ್ರಮಿಸಬೇಕೆಂದು ಮತ್ತು ಅದರ ವರದಿಯನ್ನು ತಗಡೂರು ರಾಮಚಂದ್ರರಾಯರಿಗೆ ಸಲ್ಲಿಸಬೇಕೆಂದು ಈ ಸಭೆಯಲ್ಲಿ ನಿರ್ಣಯಿಸಲಾಯಿತು. ಈ ಸಭೆಯಲ್ಲೇ ಕಣಿಯರು ಪಡೆದ ಸಾಮಾಜಿಕ ನ್ಯಾಯವನ್ನು ಜನತೆಗೆ ತಲುಪಿಸಲು ಬೆಂಗಳೂರಿನ ಮುಖ್ಯ ಬೀದಿಗಳಲ್ಲಿ ಭಜನೆ ಮಾಡುತ್ತಾ ಮೆರವಣಿಗೆ ಹೋಗಿ ಗವಿಗಂಗಾಧರೇಶ್ವರಸ್ವಾಮಿ, ಶ್ರೀನಿವಾಸ ಮಂದಿರ ಮುಂತಾದ ದೇವಸ್ಥಾನಗಳಲ್ಲಿ ತೀರ್ಥಪ್ರಸಾದ ತೆಗೆದುಕೊಳ್ಳುವ ಕಾರ್ಯಕ್ರಮ ಹಮ್ಮಿಕೊಂಡರು.

ಕಣಿಯರ ದೇವಾಲಯ ಪ್ರವೇಶ ಕಾರ್ಯಕ್ರಮ ಭಾರಿ ಸುದ್ದಿ ಮಾಡಿತ್ತು. ದೊಡ್ಡ ಆಂದೋಲನ ನಡೆಯಿತು. ೧೯೨೫ರಲ್ಲಿ ಕಣಿಯರ ದೇವಾಲಯ ಪ್ರವೇಶಕ್ಕೂ ಮುನ್ನ ಕಣಿಯರಲ್ಲಿ ಜಾಗೃತಿಗಾಗಿ ತಗಡೂರರು ಕಾವೇರಿ ಕಪಿಲಾ ಸಂಗಮದಲ್ಲಿ ಎಂ. ವೆಂಕಟಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ಭಾರಿ ಸಮ್ಮೇಳನ ನಡೆಸಿ ಅಸ್ಪೃಶ್ಯರೆಂದು ಪರಿಗಣಿಸಲಾದ ಕಣಿಯರನ್ನು ಸಂಘಟಿಸಿದರು. ಈ

ಸಮ್ಮೇಳನದ ಸಂಘಟನೆಗೆ ಬೇಕಾದ ಸ್ವಯಂಸೇವಕರನ್ನು ಜೀವಣ್ಣರಾವ್ ಸ್ವತಃ ಸಿದ್ಧಪಡಿಸಿದರು. ಮೈಸೂರು ಸಂಸ್ಥಾನದಲ್ಲಿ ಈ ಸಮ್ಮೇಳನ ಮತ್ತು ಸತ್ಯಾಗ್ರಹ ಭಾರಿ ಲವಲವಿಕೆ ಉಂಟು ಮಾಡಿತು. ಈ ಸಮ್ಮೇಳನಕ್ಕೆ ನೆರವಾದವರಲ್ಲಿ ಸಾಹುಕಾರ್ ಡಿ. ಬನುಮಯ್ಯ, ಗೋವಿಂದಾಚಾರ್ಯಸ್ವಾಮಿ ಸ್ಮರಣೀಯರು.

ತಿ.ನರಸೀಪುರದ ಗುಂಜಾನರಸಿಂಹಸ್ವಾಮಿ ದೇವಾಲಯ ಪ್ರವೇಶಕ್ಕೆ ದಿನ ಗೊತ್ತುಪಡಿಸಿದಾಗ ಸಾವಿರಾರು ಮಂದಿ ಕಣಿಯರು ಬಂದು ಒಂದೆಡೆ ಸೇರಿದರು. ಸಬ್ ಡಿವಿಝನಲ್ ಮ್ಯಾಜಿಸ್ಟ್ರೇಟರು ಪೋಲೀಸ್ ಸಿಬ್ಬಂದಿಯೊಡನೆ ಹಾಜರಿದ್ದರು. ರಕ್ತಪಾತವೇ ನಡೆಯುವುದೆಂಬ ಶಂಕೆಯಲ್ಲಿದ್ದ ಸ್ಥಳದಲ್ಲಿ ಮ್ಯಾಜಿಸ್ಟ್ರೇಟರ್ ರಾಜಿಪ್ರಯತ್ನ ಉತ್ತಮ ಫಲಿತಾಂಶ ನೀಡಿತು. ಕಣಿಯರಿಗೆ ತೀರ್ಥಪ್ರಸಾದ ಸಿಕ್ಕಿತು.

ಹೀಗಿರಲು ಕಣಿಯರನ್ನು 'ಪಂಚಮ'ರೆಂದು ಪರಿಗಣಿಸುವುದರ ವಿರುದ್ಧ ಹೋರಾಟವೇ ನಡೆಯಿತು. ವೈಷ್ಣವ ಮತಾವಲಂಬಿಗಳಾದ ಈ ಕಣಿಯರನ್ನು ಹರಿಜನರೆಂದು ಪರಿಗಣಿಸಿದ್ದರಿಂದ ಎಷ್ಟೋ ಕಲಹಗಳು ನಡೆದಿದ್ದವು. ತಗಡೂರರ ನೇತೃತ್ವದಲ್ಲಿ ಕಣಿಯರಿಗೆ ಸೂಕ್ತ ಸ್ಥಾನಮಾನ ದೊರಕಿಸಲು ನಡೆದ ಹೋರಾಟಕ್ಕೆ ಬೆಂಗಳೂರು ಎಸ್. ಕೆ. ವೆಂಕಟರಂಗ ಅಯ್ಯಂಗಾರ್, ನಿಟ್ಟೂರು ಶ್ರೀನಿವಾಸರಾವ್, ಸೋಮಶೇಖರರಾವ್, ಸೆಟ್ಲೂರು ಮುಂತಾದವರ ಬೆಂಬಲ ದೊರೆಯಿತು. ಇಂಥ ಸಾಮಾಜಿಕ ಚಳುವಳಿಗಳು ಜನರಲ್ಲಿ ದೇಶಪ್ರೇಮ ಮೂಡಿಸುತ್ತಿದ್ದವು.

ಅಸ್ಪೃಶ್ಯತೆಗೆ ಶಾಸ್ತ್ರಾಧಾರ ಉಂಟೆಂದು ಕೆಲವು ಸಂಪ್ರದಾಯವಾದಿಗಳು ವಾದಿಸಿದಾಗ ಸ್ವತಃ ಮದನಮೋಹನಮಾಳವೀಯರು 'ಶಾಸ್ತ್ರಾಧಾರ ಇಲ್ಲ' ಎಂದು ಪ್ರತಿವಾದಿಸಿ ಸಮರ್ಥಕ ಸಂಪ್ರದಾಯಸ್ಥರನ್ನು ಕ್ರಾಂತಿಕಾರಕವಾಗಿ ಪರಿವರ್ತನೆಗೊಳಿಸಿದರು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಈ ಕಾರ್ಯ ಮಹತ್ವದ ಸ್ಥಾನ ಗಳಿಸಿತ್ತು. **ಅಸ್ಪೃಶ್ಯತಾ ನಿವಾರಣಾ ಚಳುವಳಿಯು** ತಗಡೂರರ ನೇತೃತ್ವದಲ್ಲೇ ನಡೆಯಿತು. ಈ ಚಟುವಟಿಕೆಗಳು ೧೯೨೩ರಿಂದಲೇ ಆರಂಭವಾಗಿದ್ದವು. ಏಕೆಂದರೆ ಆಗಿನ ಕಾಲದಲ್ಲಿ ಹರಿಜನರು ಕೆರೆನೀರು ತುಂಬುವಂತಿಲ್ಲ. ಚಪ್ಪಲಿ ಹಾಕಿಕೊಂಡು ಹಳ್ಳಿಯ ರಸ್ತೆಗಳಲ್ಲಿ ಬರುವಂತಿಲ್ಲ. ಶಾಲೆಗಳಿಗೆ ಪ್ರವೇಶವಿರಲಿಲ್ಲ. ಸವರ್ಣಿಯರು ಹರಿಜನರ ಬೀದಿಗೆ ಹೋದರೆ ಹರಿಜನರು ದಂಡ ತೆರಬೇಕಿತ್ತು. ಬಡವರಾದ ಹರಿಜನರಿಗೆ ಹಣ ಸಾಲ



ಕೊಡುವುದು, ಸಾಗುವಳಿಗೆ ಭೂಮಿ ಕೊಡುವುದು ಇರಲಿಲ್ಲ. ಇದರ ಬಗ್ಗೆ ಅವರಲ್ಲಿ ಜಾಗೃತಿಯನ್ನುಂಟು ಮಾಡುವುದಕ್ಕಾಗಿ ಸಂತೆ ಜಾತ್ರೆ ಸಂದರ್ಭದಲ್ಲಿ ಸಭೆ ಸೇರಿಸಿ ತಿಳಿಸಲಾಗುತ್ತಿತ್ತು. ದೊಡ್ಡ ಜಾತ್ರೆಗಳಲ್ಲಿ ಇವರನ್ನು ಮೆರವಣಿಗೆಯಲ್ಲೂ ಕರೆದೊಯ್ಯುವ ಕಾರ್ಯಕ್ರಮವನ್ನು ತಗಡೂರರು ಆಯೋಜಿಸಿದ್ದರು.

ದಲಿತರಿಗೂ ನಂಜನಗೂಡು ಶ್ರೀಕಂಠೇಶ್ವರ ದೇವಾಲಯ ಪ್ರವೇಶಕ್ಕೆ ಅವಕಾಶ ಕೊಡಬೇಕೆಂದು ಚಳುವಳಿ ಹೂಡಿದಾಗ ಚಳುವಳಿಗಾರರ ಮೇಲೆ ಬಹಳ ಹಲ್ಲೆ ನಡೆಯಿತು. ಆಗ ವಕೀಲ ಶೇಷಾದ್ರಿ ಅವರು 'ಹರಿಜನ ಸೇವಕ ಸಂಘ'ದ ಅಧ್ಯಕ್ಷರಾಗಿದ್ದರು. ಚಳುವಳಿ ಬಿರುಸಿನಿಂದ ಸಾಗಿ ಕೊನೆಗೆ ದೇವಸ್ಥಾನದ ಅಧಿಕಾರಿಗಳಿಗೂ ಚಳುವಳಿಗಾರರಿಗೂ ಒಪ್ಪಂದ ಏರ್ಪಟ್ಟು ಚಳುವಳಿ ಯಶಸ್ಸು ಕಂಡಿತು. ಇದರಲ್ಲಿಯೂ ತಗಡೂರರು, ಎಂ. ಎನ್. ಜೋಯಿಸ್ ಹಾಗೂ ಇತರರ ಪಾತ್ರವಿತ್ತು. ಈ ತೆರನಾದ ಹೋರಾಟದಿಂದಾಗಿ ಹರಿಜನರಲ್ಲಷ್ಟೇ ಅಲ್ಲ, ಸವರ್ಣೀಯರಲ್ಲೂ ದೇಶಪ್ರೇಮ ಸಾಮಾಜಿಕ ನ್ಯಾಯದ ಬಗ್ಗೆ ಅರಿವು ಮೂಡಿತು.

ಮೈಸೂರು ಸಂಸ್ಥಾನದಲ್ಲಿ ೧೯೨೩–೩೦ರ ಅವಧಿಯಲ್ಲಿ ನೇರವಾದ ಚಳುವಳಿ ನಡೆಯುತ್ತಿರಲಿಲ್ಲ. ಬ್ರಿಟಿಷ್ ಭಾರತದಲ್ಲಿ ನಡೆಯುತ್ತಿದ್ದ ಚಳುವಳಿಗೆ ಸಹಾನುಭೂತಿ ತೋರಿಸಲಾಗುತ್ತಿತ್ತು. ಇದು ಸಹಜವಾಗಿಯೇ ಭಾಷಣಗಳ, ಮೆರವಣಿಗೆಗಳ, ಹರತಾಳ ಮೂಲಕ ನಡೆಯುತ್ತಿತ್ತು. ಸರ್ಕಾರದಿಂದ ಆಗಾಗ್ಗೆ ಅಡ್ಡಿ ಆತಂಕ ಕಂಡುಬರುತ್ತಿತ್ತು. ಪ್ರತಿಬಂಧಕಾಜ್ಞೆಗಳನ್ನು ಮುರಿಯುತ್ತಿರಲಿಲ್ಲ. ರಾಜಿ ಸಂಧಾನಗಳ ಮೂಲಕ ಕಾರ್ಯ ನಿರ್ವಹಿಸುತ್ತಿದ್ದರು. ರಚನಾತ್ಮಕ ಕಾರ್ಯಗಳಲ್ಲಿ ಜನ ತೊಡಗಿಸಿ ಕೊಂಡಿದ್ದರು. ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಭಾಗವಹಿಸುತ್ತಿದ್ದುದು ಮುಂದೆ ರಾಜಕೀಯ ರಂಗಕ್ಕೂ ವಿಸ್ತರಿಸಿತು. ಖಾದಿ ಸತ್ಯಾಗ್ರಹ, ಸ್ವದೇಶಿ ವಸ್ತುಗಳ ಬಳಕೆಗೆ ಪ್ರಚೋದನೆ ನೀಡಿತು.

ತಗಡೂರಿನ ಜನ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಬೆಳಗಾವಿ ಕಾಂಗ್ರೆಸ್ ಪ್ರತಿನಿಧಿಗಳನ್ನು ಚುನಾಯಿಸುವ ಕೆಲಸದಲ್ಲಿ ರಾಮಚಂದ್ರರಾಯರು ಮತ್ತು ಅಗರಂ ರಂಗಯ್ಯನವರ ಪಾತ್ರ ವಿಶೇಷವಾಗಿತ್ತು. ಕಾಂಗ್ರೆಸ್‌ನ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕಲಾವಿದ ವೆಂಕಟಪ್ಪ, ವೀಣೆ ಶೇಷಣ್ಣ ಮೊದಲಾದ

ಸಂಗೀತಗಾರರು ಭಾಗವಹಿಸುವಂತೆ ಮಾಡಿದ್ದು ಹೆಮ್ಮೆಯ ವಿಷಯ. ಅಲ್ಲೊಂದು ಸ್ವಾರಸ್ಯಕರ ಘಟನೆ ನಡೆದಿತ್ತು. ಗಾಂಧೀಜಿ ವೀಣೆ ನುಡಿಸಲು ಕೇವಲ ಐದು ನಿಮಿಷಗಳು ಮಾತ್ರ ಕಾಲಾವಕಾಶ ಕೊಟ್ಟಿದ್ದರು. ಶೇಷಣ್ಣನವರು ಐದು ನಿಮಿಷದ ನಂತರ ನಿಲ್ಲಿಸಿದರು. ಚರಕದಲ್ಲಿ ನೂಲು ತೆಗೆಯುತ್ತಾ ಕುಳಿತಿದ್ದ ಗಾಂಧೀಜಿ ಏಕೆ ನಿಲ್ಲಿಸಿದಿರಿ? ಎಂದು ಕೇಳಿದರು. ಹತ್ತಿರದಲ್ಲಿದ್ದವರು 'ಐದು ನಿಮಿಷವಾಯ್ತು' ಎಂದು ಹೇಳಿದರು. ಆಗ ಮಹಾತ್ಮರು ಚೆನ್ನಾಗಿದೆ, 'ಇನ್ನೂ ನುಡಿಸಿ' ಎಂದು ಹೇಳಿ ಅರ್ಧ ಗಂಟೆ ಕಾಲ ಕೇಳಿದರು. ಈ ವಿಷಯವನ್ನು ಶೇಷಣ್ಣನವರು ಸ್ನೇಹಿತರಲ್ಲಿ ತಮ್ಮ ಜೀವಮಾನದ ದೊಡ್ಡ ಘಟನೆ ಎಂದು ಹೇಳಿಕೊಳ್ಳುತ್ತಿದ್ದರು. ಈ ರೀತಿ ಕಲಾವಿದರು ಬೆಳಕಿಗೆ ಬರಲು ಅವಕಾಶ ಕಲ್ಪಿಸಿಕೊಡುತ್ತಿದ್ದರು.

ತಗಡೂರಿನಲ್ಲಿ ಖಾದಿ ಕೇಂದ್ರ ಸ್ಥಾಪಿಸಿ, **ಸ್ವದೇಶಿ ಚಳುವಳಿ**ಯನ್ನು ಆರಂಭಿಸಿದರು. ಇದೇ ಮುಂದೆ ಸತ್ಯಾಗ್ರಹ ಆಶ್ರಮವಾಗಿ ಪರಿವರ್ತನೆ ಹೊಂದಿ ಈ ಕೇಂದ್ರ ಗ್ರಾಮೋದ್ಯೋಗ, ಹರಿಜನಸೇವೆ, ಹಿಂದಿ ಕಲಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಸುತ್ತಮುತ್ತಲಿನ ಹಳ್ಳಿಗಳಲ್ಲೂ ಪ್ರಾರಂಭಿಸಿತು. ಹಿಂದೆ ಹಿರಿಯನಾಡೆನಿಸಿದ್ದ ತಗಡೂರು ಹತ್ತಿ, ಮಗ್ಗ, ತೆರಿಗೆ ನೀಡುತ್ತಿದ್ದುದನ್ನು ಅರಿತಿದ್ದೇವೆ. ಹಾಗಾಗಿ ಇಲ್ಲಿಯ ಜನರಲ್ಲಿ ಮತ್ತೆ ಹೊಸ ಚೈತನ್ಯ ಸ್ವದೇಶಿ ಚಳುವಳಿಯ ಮೂಲಕ ಮೂಡಿಸುವ ಕಾರ್ಯಕ್ರಮಗಳು ಭರದಿಂದ ಸಾಗಿತು. ತಗಡೂರಿನ ಖಾದಿ ಆಶ್ರಮದಲ್ಲಿ ಖಾದಿ ಕೈಗಾರಿಕೆ ಅಭಿವೃದ್ಧಿ ಹೊಂದಿದಂತೆಲ್ಲಾ, ಅದಕ್ಕೆ ಕೊಳ್ಳುವ ಸಂಸ್ಥೆಯ ಅಗತ್ಯವಿತ್ತು. ಇದಕ್ಕಾಗಿ ಮೈಸೂರು ನಗರದಲ್ಲಿ **'ಖದ್ದರ್ ಪರಸ್ಪರ ಸಹಾಯಕ ಸಂಘ'** ಸ್ಥಾಪಿಸಲಾಯಿತು.

'ಖದ್ದರ್' ಸಂಘಕ್ಕೆ ಬೇಕಾಗುವ ಮೂಲಧನವನ್ನು ಎಂ. ಲಕ್ಷ್ಮೀನಾರಾಯಣರಾವ್, ಎಸ್. ಶ್ರೀರಂಗಾಚಾರ್, ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ ಮೊದಲಾದ ವಕೀಲರುಗಳು ಹಾಗೂ ಸಿ. ಗೋಪಾಲಕೃಷ್ಣ ಶೆಟ್ಟಿ, ಪಿ. ಎಸ್. ಸಂಗಪ್ಪ, ಸಾಹುಕಾರ್ ಬನುಮಯ್ಯ ಮೊದಲಾದ ವರ್ತಕರು ಸಹಾಯ ಮಾಡಿದರು. ಎಂ. ಲಕ್ಷ್ಮೀನಾರಾಯಣರಾವ್ 'ಖದ್ದರ್' ಸಂಘದ ಅಧ್ಯಕ್ಷರಾಗಿ ಬಹಳ ಕಾಲ ಇದ್ದರು.

ವಿದೇಶಿ ಬಟ್ಟೆಗೆ ಬದಲಾಗಿ ದೇಶೀಯರೇ ತಯಾರಿಸಿದ ಬಟ್ಟೆಯನ್ನು 'ಖದ್ದರ್' ಸಂಘದ ಮೂಲಕ ಮಾರಾಟ ಮಾಡಬೇಕಿತ್ತು. ನಗರದ ಮತ್ತು



ತಾಲ್ಲೂಕುಗಳಲ್ಲಿ ಸಾಮಾನ್ಯವಾಗಿ ಭಾನುವಾರದಂದು ಈ ಚಳುವಳಿ ನಡೆಸುತ್ತಿದ್ದರು. ಮನೆ ಮನೆ ಬಾಗಿಲಿಗೆ ಬಟ್ಟೆ ಮೂಟೆ ಹೊತ್ತು ಮಾರಾಟ ಮಾಡುವ ಚಳುವಳಿಯಲ್ಲಿ ಅಗರಂ ರಂಗಯ್ಯ ಮತ್ತು ಎಂ. ಎನ್. ಜೋಯಿಸರು ವಹಿಸಿದ ಪಾತ್ರ ಸ್ಮರಣೀಯ. ಈ ಚಳುವಳಿ ನಡೆಸಲು ತಾಲ್ಲೂಕುಗಳಿಗೆ ಭೇಟಿಕೊಟ್ಟಾಗ ಅಮೂಲ್ಯ ಸಹಾಯ ಹಸ್ತ ನೀಡಿದವರೆಂದರೆ ಹುಣಸೂರಿನಲ್ಲಿ ಎಂ. ಶ್ರೀನಿವಾಸ ಅಯ್ಯಂಗಾರ್ ಮತ್ತು ಕೃಷ್ಣಮೂರ್ತಿಗಳು, ಕೃಷ್ಣರಾಜನಗರದಲ್ಲಿ ನಂಜುಂಡಪ್ಪ ಮತ್ತು ಸುಬ್ಬರಾವ್, ನಂಜನಗೂಡಿನಲ್ಲಿ ವಿಶ್ವೇಶ್ವರಗೌಡರು ಮತ್ತು ಎಸ್. ಕೆ. ನಾರಾಯಣರಾಯರು. ಮುಂದೆ ವಿಶ್ವೇಶ್ವರಗೌಡರ ಮನೆ ನಂಜನಗೂಡಿನಲ್ಲಿ ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವಾಯಿತು.

ತಗಡೂರಿನ ಖಾದಿ ಕೈಗಾರಿಕೆ ಮತ್ತು ಮಾರುಕಟ್ಟೆಗಾಗಿ ನಡೆಯುತ್ತಿದ್ದ ಚಳುವಳಿ ಮೈಸೂರಿನ ಜನತೆ ಎಚ್ಚೆತ್ತುಕೊಳ್ಳುವಂತೆ ಮಾಡಿತು. ರಾಷ್ಟ್ರೀಯ ಭಾವನೆ ಬಹಳ ಮಟ್ಟಿಗೆ ಮೂಡಿತು.

ಸಂತೆಪೇಟೆ ವರ್ತಕರು ಸಹಕರಿಸುತ್ತಿದ್ದ ಪರಿ ಹೇಗಿತ್ತು? ಸಾಹುಕಾರ್ ಬನುಮಯ್ಯನವರು ಪರದೇಶಿ ಟೋಪಿಯನ್ನು ಬಿಟ್ಟುಕೊಟ್ಟು ಎಲ್ಲಾ ಹುಡುಗರಿಗೆ ಪುಕ್ಕಟೆ ಗಾಂಧಿ ಟೋಪಿ ಕೊಡಲು ತಗಲುವ ವೆಚ್ಚ ಭರಿಸುತ್ತಿದ್ದರು. 'ಹಳೇ ಪರದೇಶೀ ಟೋಪಿಗೆ ಒಂದು ಗಾಂಧಿ ಟೋಪಿ' ಎಂಬ ಘೋಷಣೆ ಬಹಳ ಕಾಲ ಜನಪ್ರಿಯವಾಗಿತ್ತು.

**ಸ್ವದೇಶಿ ಮೇಳ** ಅಥವಾ ವಸ್ತುಪ್ರದರ್ಶನ ಆರಂಭಿಸುವ ತೀರ್ಮಾನ ಮಾಡಿದರು. ಇಲ್ಲಿಯೂ ಎಲ್ಲರ ಸಹಕಾರ ಪಡೆಯುವ ಧೋರಣೆ ಇತ್ತು. ಆಗ ನಿವೃತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಎ. ಸುಬ್ರಹ್ಮಣ್ಯ ಅಯ್ಯರ್ (ಅಂಬಳೆ ಅಣ್ಣಯ್ಯ ಪಂಡಿತರ ಮಗ) ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ಸಮಿತಿ ರಚಿಸಿದ್ದರು. ಎಂ. ಎನ್. ಜೋಯೀಸ್ ಮತ್ತು ಜಿ. ವಿ. ಆಚಾರ್ಯ ಇಬ್ಬರೂ ಸಂಚಾಲಕರಾಗಿದ್ದರು. ಸಾಹುಕಾರ್ ಬನುಮಯ್ಯ ಅವರ ಪ್ರೌಢಶಾಲೆಯಲ್ಲಿ ಮೊದಲ ಪ್ರದರ್ಶನ ನಡೆಯಿತು. ಅರಮನೆಯವರು ಸಹಕಾರ ನೀಡಿದರು. ಅರಮನೆಗೆ ಸೇರಿದ ಕರುಹಟ್ಟಿಯಲ್ಲಿ ಮುಂದಿನ ಪ್ರದರ್ಶನ ನಡೆಯಲು ಅವಕಾಶ ಮಾಡಿಕೊಟ್ಟರು. ಮೈಸೂರು ಮಹಾರಾಜರ ವೈಭವದ ವರ್ಧಂತಿಯ ಅಂಗವಾಗಿ ಸ್ವದೇಶಿ ವಸ್ತುಪ್ರದರ್ಶನವನ್ನೂ ಏರ್ಪಡಿಸುತ್ತಿದ್ದರು.

ವಸ್ತುಪ್ರದರ್ಶನಗಳ ಉದ್ಘಾಟನೆಯನ್ನು ಸೇಲಂ ವಿಜಯರಾಘವಾಚಾರ್ಯ ಹಾಗೂ ಇತರರು ನಡೆಸಿಕೊಡುತ್ತಿದ್ದರು. ಈ ಎಲ್ಲಾ ರಚನಾತ್ಮಕ ಕಾರ್ಯಗಳಿಂದ ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಯಲಾರಂಭಿಸಿತು.

೧೯೨೭–೨೮ರಲ್ಲಿ **ಸೈಮನ್ ಸಮಿತಿ** ಭಾರತಕ್ಕೆ ಬಂದು ಸಂಚರಿಸುತ್ತಿದ್ದಾಗ **ಕಪ್ಪುಬಾವುಟ** ಪ್ರದರ್ಶಿಸಿ ವಿರೋಧ ವ್ಯಕ್ತಪಡಿಸಿದ್ದರು. ಕಾರಣ ಈ ಸಮಿತಿಯಲ್ಲಿದ್ದ ಸದಸ್ಯರಲ್ಲಿ ಒಬ್ಬನಾದರೂ ಭಾರತೀಯ ಪ್ರತಿನಿಧಿ ಇರಲಿಲ್ಲ. ಎಲ್ಲರೂ ವಿದೇಶೀಯರೇ ಆಗಿದ್ದರು.

೧೯೩೦ರಲ್ಲಿ ಗಾಂಧೀಜಿ **ದಂಡಿಯಾತ್ರೆ** ಮೂಲಕ ಸ್ವಾತಂತ್ರ್ಯ ಆಂದೋಲನವನ್ನು ಪ್ರಾರಂಭಿಸಿದಾಗ ಈ ಕಾರ್ಯದಲ್ಲೂ ಮೈಸೂರು ಸಂಸ್ಥಾನದ ಜನತೆ ನಾನಾ ರೀತಿಯಲ್ಲಿ ಭಾಗವಹಿಸಿದರು. ಅಲ್ಲಿ ನೇರ ಕಾರ್ಯಕ್ರಮದಲ್ಲಿ ಭಾಗವಹಿಸದಿದ್ದರೂ ಅನೇಕ ಯುವಕರು **ಸ್ವಯಂ ಸೇವಕರಾಗಿ** ಹೊರಗಿನ ಕರ್ನಾಟಕಕ್ಕೆ ಹೋಗಿ ತಮ್ಮ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಟಿ. ಎಸ್. ಸುಬ್ಬಣ್ಣ, ಎನ್. ಡಿ. ಶ್ರೀರಂಗಾಚಾರ್, ಎಲ್. ವಿ. ರಾಜಗೋಪಾಲ್ ಮೊದಲಾದವರನ್ನು ಸ್ಮರಿಸಬಹುದು. ಇವರು ತಗಡೂರರ ಹೋರಾಟದಿಂದ ಪ್ರಭಾವಿತರಾದವರು. ೧೯೨೭ರಲ್ಲಿ ಬೆಂಗಳೂರಿನ ಗಣಪತಿ ಗಲಭೆಯಲ್ಲೂ ತಗಡೂರರು ಅಪಾದಿತರಾಗಿದ್ದರು. ಅವರು ಹಮ್ಮಿಕೊಳ್ಳುತ್ತಿದ್ದ ಚಳುವಳಿಗಳೇ ಇತರರೂ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಿಸುತ್ತಿತ್ತು.

**ತಗಡೂರಿನ ಸತ್ಯಾಗ್ರಹ ಆಶ್ರಮ,** ಖಾದಿಸಂಸ್ಥೆ ಹಾಗೂ ರಚನಾತ್ಮಕ ಕಾರ್ಯಗಳ ಕೇಂದ್ರವಾಗಿದ್ದು ಖಾದಿ ಪ್ರಚಾರ ಇಲ್ಲಿಂದಲೇ ನಡೆಯುತ್ತಿತ್ತು. ಈ ಆಶ್ರಮದಲ್ಲಿ ನೂಲುವುದು, ನೇಯುವುದು ಕಾಯಕದಲ್ಲಿ ತೊಡಗಿದ್ದರು. ಮಹಿಳೆಯರು ಮನೆಯಲ್ಲಿಯೇ ಹತ್ತಿಯಿಂದ ಅಂಬರ್ ಚರಕದಲ್ಲಿ ನೂಲು ತೆಗೆಯುವ ಕಾಯಕದಲ್ಲಿ ತೊಡಗಿರುತ್ತಿದ್ದರು. ಒಂದು ಲಡಿ ನೂಲಿಗೆ ೪ ಆಣೆ ಕೊಡುತ್ತಿದ್ದರು. ಸುತ್ತಮುತ್ತಲಿನ ಗ್ರಾಮಗಳಲ್ಲಿ ರಾಟೆಗಳು ತಿರುಗಿದವು. ನೂತ ನೂಲನ್ನು ಈ ಖಾದಿ ಸಂಸ್ಥೆಗೆ ತರುತ್ತಿದ್ದು ಖಾದಿ ಬಟ್ಟೆ (ತಯಾರಿಕೆ) ನೇಯಲಾಗುತ್ತಿತ್ತು. ಸ್ಥಳೀಯರಿಗೆ ಆಗಿ ಉಳಿದ ಬಟ್ಟೆಯನ್ನು, ನಗರ ಮತ್ತು ತಾಲ್ಲೂಕುಗಳಿಗೆ ಕಳುಹಿಸುತ್ತಿದ್ದರು. ಒಂದೆಡೆ ಸ್ವದೇಶಿ ಮತ್ತೊಂದೆಡೆ ಸ್ವಾವಲಂಬಿಗಳಾಗಿ ಬದುಕುವ ಪ್ರವೃತ್ತಿ ಮರುಕಳಿಸಲಾರಂಭಿಸಿತು. ನಮ್ಮಲ್ಲಿನ



ಕಚ್ಚಾ ಸಾಮಗ್ರಿಗಳನ್ನು ಕಡಿಮೆ ಬೆಲೆಗೆ ಕ್ರಯಿಸಿ ಅಧಿಕ ಬೆಲೆಗೆ ಸಿದ್ಧ ಮಾಡಿದ ವಿದೇಶಿ ಬಟ್ಟೆಗಳ ಮಾರಾಟದ ಕಪಟತನ ಜನರ ಅರಿವಿಗೆ ಬರಲಾರಂಭಿಸಿತು. ಬಟ್ಟೆ ಮಾತ್ರವಲ್ಲದೆ ದೇಶೀಯ ಕಾಗದ ತಯಾರಿಕೆ, ಎಣ್ಣೆ, ಚಾಪೆ ಹೆಣೆಯುವುದು, ಕೊಟ್ಟಣದ ಅಕ್ಕಿ, ಬೆಂಕಿಪೊಟ್ಟಣ ಇತ್ಯಾದಿ ಗುಡಿ ಕೈಗಾರಿಕೆಗಳು ಸಮೀಪದ ಬದನವಾಳಿನಲ್ಲಿದ್ದವು. ಇಂಥ ಸಮಾಜಮುಖಿ ರಚನಾತ್ಮಕ ಕಾರ್ಯಕ್ರಮ ಕೇಂದ್ರದ ಬಗ್ಗೆ ಅಧಿಕಾರಿಗಳಿಗೆ ಸಂದೇಹ ಉಂಟಾಗಿ, ಅನೇಕ ವಿಧದ ಕಿರುಕುಳ ಕೊಟ್ಟು ಒಮ್ಮೆ ಆಶ್ರಮದ ಸಾಮಾನುಗಳನ್ನು ಜಪ್ತಿ ಮಾಡಿದರು. ಇನ್ನೊಮ್ಮೆ ಪಿತೂರಿ ನಡೆಸಿ **ಆಶ್ರಮಕ್ಕೆ ಬೆಂಕಿ** ಹಾಕಿಸಿದರು. ಈ ಬೂದಿರಾಶಿಯ ಮೇಲೆ ಊರ ಜನರೆಲ್ಲಾ ಸಹಕರಿಸಿ ಕಟ್ಟಿದ ಆಶ್ರಮವೇ ಈಗ ಇರುವುದು.

ಅಂದು ಈ ಆಶ್ರಮದ ಚಟುವಟಿಕೆಗಳ ಪ್ರಚಾರ ಮೈಸೂರಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ನಡೆಯುತ್ತಿತ್ತು. ತಗಡೂರರು ನಂಜನಗೂಡಿನ ಮೂಲಕ ಮೈಸೂರಿಗೆ ಬರುತ್ತಿದ್ದರು. ನಂಜನಗೂಡಿನಲ್ಲಿ ವಿಶ್ವೇಶ್ವರಗೌಡರ ಮನೆಯೇ ಎಲ್ಲಾ ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ತಗಡೂರು ರಾಮಚಂದ್ರರಾಯರಿಗೆ ಹಾಗೂ ಇತರ ಕಾರ್ಯಕರ್ತರಿಗೆ ಗೌಡರ ಮನೆ ಸದಾ ತೆರೆದಿರುತ್ತಿತ್ತು.

ಅಂದು ಸಮಾಜದಲ್ಲಿ ಚಳವಳಿಗಾರರನ್ನು ನೋಡುತ್ತಿದ್ದುದು ಹೇಗೆ? ಚಳುವಳಿಗಾರರ ಕಾರ್ಯಕ್ರಮಗಳು ರಚನಾತ್ಮಕವಾಗಿಯೇ ಇದ್ದರೂ ಸಮಾಜದಲ್ಲಿದ್ದ ಮಡಿವಂತಿಕೆಯಿಂದಾಗಿ, ಚಳವಳಿಗಾರರು ಹೋದ ಹಳ್ಳಿಗಳಲ್ಲಿ ಬಹಿಷ್ಕಾರ ಹಾಕಿಸಿಕೊಳ್ಳಬೇಕಾಗಿತ್ತು. ಅವರಿಗೆ ನೀರು, ಬೆಂಕಿ ಕೊಡುತ್ತಿರಲಿಲ್ಲ. ಅಂಗಡಿ, ಹೋಟೆಲ್‌ಗಳಲ್ಲಿ ಸಾಮಾನು ಕೊಡದಿರುವುದು, ನಿಲ್ಲಲು ಜಾಗ ಕೊಡುತ್ತಿರಲಿಲ್ಲ. ಕಲ್ಲೇಟು ಬೀಳುತ್ತಿತ್ತು. ತೊಪ್ಪೆ/ಸೆಗಣಿ ಎಸೆಯುತ್ತಿದ್ದರು. ಅವಾಚ್ಯ ಬೈಗಳನ್ನು ಸಹಿಸಿಕೊಳ್ಳಬೇಕಾಗಿತ್ತು. ಚಪ್ಪಲಿ ಏಟಿನ ಅನುಭವವನ್ನು ಸಮಕಾಲೀನ ಹೋರಾಟಗಾರರು ತೆರೆದಿಟ್ಟಿದ್ದಾರೆ.

ಸುದ್ದಿ ಮಾಧ್ಯಮಗಳಿಲ್ಲದೆ ಸಾಯ್‌ಕ್ಲೊಸ್ಟಾಯಿಲ್ ಮುಂತಾದವು ಅಷ್ಟಕಷ್ಟೇ ಇದ್ದ ಕಾಲದಲ್ಲಿ ಜನಬಲವೇ ಮುಖ್ಯವಾಗಿತ್ತು. ಸತ್ಯಾಗ್ರಹ ಕೇಂದ್ರಗಳಿಂದ ಊರೂರಿಗೆ, ಕಾರ್ಯಕರ್ತರಿಗೆ, ರೈತರಿಗೆ, ಜನಸಾಮಾನ್ಯರಿಗೆ ಸುದ್ದಿ ಮುಟ್ಟಿಸುವ ಕೆಲಸ ತಪ್ಪದೇ ನಡೆಯುತ್ತಿತ್ತು. ಆಯಾ ಕ್ಷೇತ್ರದಲ್ಲಿ ಕೆಲಸ ಮಾಡುವ ಅನೇಕರು

ತಲೆಮರೆಸಿಕೊಂಡು, ಬೇರೆ ಬೇರೆ ಹೆಸರುಗಳನ್ನಿಟ್ಟಿಕೊಂಡು ವೇಷಧಾರಿಗಳಾಗಿ ತಿರುಗಾಡಬೇಕಿತ್ತು. ಗಾಂಧೀಜಿಗೂ ದೂರು ಮುಟ್ಟಿಸಿದ್ದರು. ಆಗ ಗಾಂಧೀಜಿ ಕೊಟ್ಟ ಉತ್ತರವೇನೆಂದರೆ ಅದು **'ಸರದಾರರ ಸತ್ಯಾಗ್ರಹ'** ಎಂದು ಚೇಷ್ಟೆ ಮಾಡಿದ್ದರು. ಮೈಸೂರು ಸಂಸ್ಥಾನದಲ್ಲಿ ನಿರ್ಬಂಧವಿದ್ದು ಬ್ರಿಟಿಷರ ನೇರ ಆಳ್ವಿಕೆಯ ಪ್ರಾಂತದಲ್ಲಿ ಸಿರಸಿ, ಸಿದ್ದಾಪುರ, ಅಂಕೋಲಾಗಳಲ್ಲಿ ಕರ ನಿರಾಕರಣೆ ಸತ್ಯಾಗ್ರಹ ಕೈಗೊಂಡಾಗ ಹಲವು ಸಾಹಸ ಮತ್ತು ಬುದ್ಧಿವಂತಿಕೆಯ ಕೆಲಸಗಳನ್ನು ಮಾಡಿದವರಿದ್ದಾರೆ. ಅವರಲ್ಲಿ ತಗಡೂರರಿಗೆ ಬೆಂಬಲವಾಗಿ ನಿಂತ ಎಂ. ಎನ್. ಜೋಯಿಸ್, ವಿ. ಎಸ್. ನಾರಾಯಣರಾವ್, ವೆಂಕಟರಾಮಯ್ಯ ಅವರ ಪರಿಶ್ರಮ ಸ್ಮರಣೀಯ.

ತಗಡೂರನ್ನು ಪ್ರತಿನಿಧಿಸುವ ರಾಮಚಂದ್ರರಾಯರು ಮೈಸೂರು ಸಂಸ್ಥಾನದಾದ್ಯಂತ ಸಂಚರಿಸುತ್ತಿದ್ದರು. ಒಮ್ಮೆ ಚಿತ್ರದುರ್ಗಕ್ಕೆ ಭಾಷಣ ಮಾಡಲು ತೆರಳಿದ್ದರು. ಪುರಸಭೆ ಮುಂದೆ **ವಿದೇಶಿ ಬಟ್ಟೆ ದಹನ ಕಾರ್ಯಕ್ರಮ** ಇತ್ತು. ಅಲ್ಲಿ ನೆರೆದಿದ್ದ ಸಾವಿರಾರು ಜನ ತಮ್ಮ ಮೈಮೇಲಿದ್ದ ವಿದೇಶಿ ಬಟ್ಟೆಗಳನ್ನು ಬೆಂಕಿಗೆ ಎಸೆದರು. ೧೯೩೪ರಲ್ಲಿ ಮಾಧ್ಯಮಿಕ ಶಾಲೆಯಲ್ಲಿದ್ದ ಎಚ್. ಸಿ. ನಾರಾಯಣ ಅಯ್ಯಂಗಾರ್ ಎಂಬುವವರು ತಾವು ಧರಿಸಿದ್ದ ಜರತಾರಿ ಟೋಪಿ, ಕೋಟನ್ನು ಬೆಂಕಿಗೆ ಎಸೆದರು. ಮನೆಗೆ ಬಂದಾಗ ಬೈಗುಳ ತಿಂದರು. ತರಗತಿಯಿಂದ ಹೊರಗೆ ಕಳುಹಿಸಲ್ಪಟ್ಟರು. ಖಾದಿ ಅಂಗಡಿಗೆ ಹೋಗಿ ಎರಡಾಣೆ ಕೊಟ್ಟು ಖಾದಿ ಕೊಂಡು ಧರಿಸಿದರು. ಅವರ ವಿನಃ ಯಾರೊಬ್ಬರೂ ಖಾದಿ ಧರಿಸದೆ ಇದ್ದುದರಿಂದ ಎಲ್ಲರೂ ಅವರನ್ನು 'ಗಾಂಧಿ ಟೋಪಿ' ಎಂದು ಕರೆಯುತ್ತಿದ್ದರು. ಅಂದರೆ ತಗಡೂರಿನ ಜನರಿಗೆ ಯುವಕರನ್ನು ಪರಿವರ್ತಿಸುವ ಶಕ್ತಿ ಇತ್ತೆಂದು ಅರ್ಥೈಸಬಹುದು.

ಮತ್ತೊಂದು ಘಟನೆ ನಡೆದ ಬಗ್ಗೆ ತಿಳಿಯೋಣ. ತಗಡೂರರು ನಡೆಸುತ್ತಿದ್ದ ಬಹುರೂಪದ ಚಳುವಳಿಗೆ ಬೇಕಾದ ಭಿತ್ತಿಪತ್ರ, ಫಲಕಗಳನ್ನು ಬರೆಯುತ್ತಿದ್ದವರು ಸೂರ್ಯನಾರಾಯಣರಾಯರು. ಹೀಗಾಗಿ ಅವರ ಬೆಂಬಲಿಗರಲ್ಲಿ ಒಬ್ಬರೆನಿಸಿ ರಾಜಕೀಯಕ್ಕೂ ಪ್ರವೇಶಿಸಿದರು. ಇವರು ನಡೆಸಿದ ಚಳುವಳಿಯ ವೈಖರಿ ಹೇಗಿತ್ತು? ಎಂಬುದನ್ನು ಸ್ವಲ್ಪ ನೋಡೋಣ. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಬೆಳ್ಳಿಹಬ್ಬದ ಆಚರಣೆ ೧೯೨೮ರಲ್ಲಿ ಬೆಂಗಳೂರಿನಲ್ಲಿ ನಡೆದಾಗ ಮಹಾರಾಜರು ಮೆರವಣಿಗೆಯ ಅಂಬಾರಿ ಮೇಲೆ ಮಿರ್ಜಾರನ್ನು ಕೂರಿಸಿಕೊಂಡ ಬಗ್ಗೆ ಅಸಮಾಧಾನವಿತ್ತು. ಮುಂದೆ ದಸರಾ ಮೆರವಣಿಗೆಯಲ್ಲೂ ಮಿರ್ಜಾರನ್ನು



ಕೂರಿಸಿಕೊಳ್ಳುವ ಪರಿಪಾಠ ಆರಂಭವಾಯಿತು. ಜನರಲ್ಲಿ ಅಸಮಾಧಾನ ಹೆಚ್ಚಾಯಿತು. ಇದನ್ನು ಸೂಕ್ತ ರೀತಿಯಲ್ಲಿ ಪ್ರಕಟಿಸಲು ಒಂದು ಕಾರ್ಯಕ್ರಮ ಸಿದ್ಧಪಡಿಸಿದರು. ಅದರಂತೆ ೧೯೩೨ರ ದಸರಾ ಮೆರವಣಿಗೆ ಬನ್ನಿಮಂಟಪದಿಂದ ದೊಡ್ಡಪೇಟೆ ಗಡಿಯಾರದ ಬಳಿ ಬಂದಾಗ ಮೊದಲೇ ಗೊತ್ತುಪಡಿಸಿದ ಕಾರ್ಯಕ್ರಮದಂತೆ ಸೂರ್ಯನಾರಾಯಣರಾಯರು **'ಗಾಂಧೀ ಕೀ ಜೈ'** ಎಂದು ಘೋಷಣೆ ಮಾಡಿದರು. ಕೂಡಲೇ ಜಟಕಾಗಾಡಿ ಕುದುರೆಗಳು ಓಡಿ ಬಂದು ಜನರ ಗುಂಪಿನಲ್ಲಿ ನುಗ್ಗಿದವು. ಮೆರವಣಿಗೆ ಅಸ್ತವ್ಯಸ್ತವಾಯಿತು. ಮೆರವಣಿಗೆಯಲ್ಲಿದ್ದ ಆನೆಗಳು ಚದುರಿದವು. ಮಹಾರಾಜರು ಕೂತ ಆನೆಯ ಗಲಾಟೆ ತಡೆಯಲು ಬೇರೆ ಆನೆಗಳೇ ಬೇಕಾದವು. ದೀಪದ ಕಂಬಗಳನ್ನು ಹಿಡಿದು ಹೋಗುತ್ತಿದ್ದವರು ಚದುರಿ ಕತ್ತಲು ಕವಿಯಿತು. ಹಾಗೂ ಹೀಗೂ ಮಹಾರಾಜರು ಆಂಜನೇಯ ದೇವಸ್ಥಾನದವರೆಗೆ ಹೋಗಿ ಆನೆಯಿಂದ ಇಳಿದು ಅರಮನೆ ಸೇರಿಕೊಂಡರು. ಈ ಘಟನೆಯಿಂದಾಗಿ ಸೂರ್ಯನಾರಾಯಣರಾವ್, ರಾಮಸೇತು ಹಾಗೂ ಇತರರ ಮೇಲೆ ಮೊಕದ್ದಮೆಯಾಗಿ ೬ ವರ್ಷ ಕಠಿಣ ಶಿಕ್ಷೆ ಆಯಿತು. ಆದರೆ ಅಪೀಲಿನಲ್ಲಿ ಶಿಕ್ಷೆ ೬ ತಿಂಗಳಿಗೆ ಇಳಿಯಿತು. ಈ ಶಿಕ್ಷೆ ಅನುಭವಿಸಿ ಬಂದ ಸೂರ್ಯನಾರಾಯಣರಾಯರು ತಗಡೂರರ ಎಲ್ಲಾ ಚಟುವಟಿಕೆಗಳಲ್ಲೂ ಜೊತೆಗೂಡಿ ಜೈಲುವಾಸ ಕಂಡಿದ್ದರು. ಸ್ವಾತಂತ್ರ್ಯ ಬಂದ ನಂತರ ಗ್ರಾಮೋದ್ಯೋಗ ಕಾರ್ಯಗಳಲ್ಲಿ ಸಹಕರಿಸುತ್ತಿದ್ದು ತಮ್ಮ ಕಲೆಗಾರಿಕೆಯಲ್ಲೂ ನಿರತರಾಗಿದ್ದರು.

೧೯೩೭ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಪ್ರಾಂತಗಳಲ್ಲಿ ಅಧಿಕಾರಕ್ಕೆ ಬಂದ ನಂತರ ಸಂಸ್ಥಾನಗಳಲ್ಲಿ ನೇರ ಹೋರಾಟ ಪ್ರಾರಂಭವಾಯಿತು. ಹೀಗೊಂದು ಘಟನೆ ನಡೆದಿತ್ತು. ಅಂದು ೧೯೩೮ನೇ ಜನವರಿ ೨೬ನೇ ತಾರೀಖು. ಹಲವು ವರ್ಷಗಳಿಂದ (ಸತ್ಯಾಗ್ರಹಿಗಳು) ಧ್ವಜಾರೋಹಣ ನಡೆಸುವುದು ಕಾರ್ಯಕ್ರಮವಾಗಿತ್ತು. ಅದುವರೆಗೆ ಮೈಸೂರಿನಲ್ಲಿ ರಾಜಕೀಯ ಚಳುವಳಿಯಲ್ಲಿ ಭಾಗವಹಿಸಿ ಕಾನೂನನ್ನು ಉಲ್ಲಂಘಿಸಿದ ಮಹಿಳೆ ಯಾರೂ ಇರಲಿಲ್ಲ. ಇದಕ್ಕಾಗಿ ಸಾವಿರಾರು ಹೆಂಗಸರು ಸುಬ್ಬರಾಯನ ಕೆರೆಯಲ್ಲಿ ಜಮಾಯಿಸಿದ್ದರು. ಅಂದು ಮಂಜು ಮುಸುಕಿದ ಬಿಸಿಲಿನ ವಾತಾವರಣವಿತ್ತು. ಪತಿ ಎಂ. ಎನ್. ಜೋಯಿಸ್ ಜೈಲಿನಲ್ಲಿದ್ದುದರಿಂದ ತನ್ನ ಕರ್ತವ್ಯ ಎಂದು

ಭಾವಿಸಿದ ಸುಬ್ಬಮ್ಮ ಜೋಯಿಸ್ ಅಲ್ಲಿಗೆ ಬಂದಿದ್ದರು. ಸ್ವಯಂಸೇವಕರಾದ ತಗಡೂರು ರಂಗಯ್ಯ ಎಂಟು ಗಂಟೆಗೆ ಸರಿಯಾಗಿ ಧ್ವಜ ಹಾರಿಸಬೇಕೆಂದು ಹೇಳಿದ್ದೇ ತಡ, ಕಂಕುಳಲ್ಲಿದ್ದ ತನ್ನ ಒಂದೂವರೆ ವರ್ಷದ ಮಗುವನ್ನು ಪಕ್ಕದವರ ಕೈಗೆ ಕೊಟ್ಟು ವೇದಿಕೆಯತ್ತ ನಡೆದು ಧ್ವಜ ಹಾರಿಸಿದ ಕೂಡಲೇ ಸುಬ್ಬಮ್ಮ ಜೋಯಿಸರನ್ನು ಪೋಲೀಸರು ಬಂಧಿಸಿದರು. ಮ್ಯಾಜಿಸ್ಟ್ರೇಟರ ತೀರ್ಪಿನಂತೆ ಮಗುವನ್ನು ತಾಯಿಯೊಡನೆ ಜೈಲಿಗೆ ಕಳುಹಿಸಿದರು. ಆಗಲೇ ಆಕೆಯ ಅತ್ತೆ ನಂಜಮ್ಮ ಸಮಾಜದಲ್ಲಿ ಆಗುತ್ತಿದ್ದ ಬದಲಾವಣೆ ಬಗ್ಗೆ ತನಗೆ ಗೊತ್ತಾಗಲಿಲ್ಲವೆಂದೂ, ೬೦ರ ಮುದುಕಿಯೂ ಧಿಕ್ಕಾರದ ಸಭೆಯಲ್ಲಿ ಭಾಷಣ ಮಾಡುವಂತಾದರು. ಅಷ್ಟೇ ಏಕೆ? ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಪರಿವಾರದವರನ್ನೆಲ್ಲಾ ಮುಡಿಪಾಗಿಡುವುದಾಗಿ ಘೋಷಿಸಿದ್ದರು. ಇಲ್ಲಿ ತಗಡೂರಿನ ಜನರಲ್ಲಿದ್ದ ಶಿಸ್ತಿನಿಂದಾಗಿ **ಧ್ವಜಾರೋಹಣ ಕಾರ್ಯಕ್ರಮ** ಯಶಸ್ಸು ಕಂಡಿತು. ಮೈಸೂರು ಸಂಸ್ಥಾನದಲ್ಲಿ ಮಹಿಳೆಯರು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಡಲು ಉತ್ತೇಜನ ನೀಡಿತ್ತು ಎಂಬುದು ಗಮನಾರ್ಹ ಅಂಶ.

ತಗಡೂರಿನ ಜನ **ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ**ದಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಈ ಸತ್ಯಾಗ್ರಹಕ್ಕೆ ಕಾರಣವೇನು? ಆಗಷ್ಟೆ ಶಿವಪುರ ಧ್ವಜ ಸತ್ಯಾಗ್ರಹ ಮುಗಿದಿತ್ತು. ಕೆಲ ತಿಂಗಳುಗಳ ತರುವಾಯ ಮೈಸೂರಿನಲ್ಲಿ ಸೆಂಟ್ರಲ್ ಪೋಲೀಸ್ ಸ್ಟೇಷನಿಗೆ ಮುಖ್ಯಾಧಿಕಾರಿಯಾಗಿದ್ದ ಹ್ಯಾಮಿಲ್ಟನ್‌ರವರ ಹೆಸರನ್ನು ಇಟ್ಟರು. ಇವರು ಮೈಸೂರು ಸಂಸ್ಥಾನದಲ್ಲಿ ಅಂದು ನಡೆದ ಅನೇಕ ಹತ್ಯಾಕಾಂಡಗಳಿಗೆ ಕಾರಣರು ಎಂಬ ಭಾವನೆ ಇತ್ತು. ಹೀಗಿದ್ದರೂ ಅವರ ಗೌರವಾರ್ಥ ಕಟ್ಟಡಕ್ಕೆ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂದು ಹೆಸರಿಟ್ಟದ್ದು ಜನರಲ್ಲಿ ಅಸಮಾಧಾನವನ್ನುಂಟು ಮಾಡಿತು. ಈ ಹೆಸರಿಡಕೂಡದೆಂದು ಮನವಿ, ಪ್ರತಿಭಟನಾ ಸಭೆ ಮತ್ತು ಮೆರವಣಿಗೆಗಳು ನಡೆದವು. ಸರಕಾರ ಇದು ಯಾವುದನ್ನೂ ಲೆಕ್ಕಿಸಲಿಲ್ಲ. ತಗಡೂರು ರಾಮಚಂದ್ರರಾಯರು ಇದಕ್ಕಾಗಿ ಒಂದು ಚಳುವಳಿಯನ್ನು ಆರಂಭಿಸಲು ಅನುಮತಿ ಬೇಡಿದರು. ವರಿಷ್ಠರು ಒಪ್ಪಲಿಲ್ಲ. ಮೈಸೂರು ಕಾಂಗ್ರೆಸ್ಸಿನ ಸದಸ್ಯರು ಚಳುವಳಿ ನಡೆಸಲು ಅಡ್ಡಿ ಇಲ್ಲ ಎಂದು ತಿಳಿಸಿದರು. ಹಾಗಾಗಿ ತಗಡೂರು ರಾಮಚಂದ್ರರಾಯರು, ಎಂ. ಎನ್. ಜೋಯಿಸ್ ಒಂದು ಚಳುವಳಿ ನಡೆಸಲು ವ್ಯವಸ್ಥೆ ಮಾಡಿದರು.



ಹ್ಯಾಮಿಲ್ಟನ್ ಸತ್ಯಾಗ್ರಹ ನಡೆದದ್ದು ಹೇಗೆ? ಕಾಂಗ್ರೆಸ್ ಕಾರ್ಯಕರ್ತರು ಒಂದು ಬಿದಿರು ಗಳುವನ್ನು ತೆಗೆದುಕೊಂಡು ಅದರ ತುದಿಗೆ ಒಂದು ಈಚಲು ಪೊರಕೆಯನ್ನು ಕಟ್ಟಬೇಕಾಗಿತ್ತು. ಒಂದು ಮಡಕೆ, ಅದರಲ್ಲಿ ಸುಣ್ಣ ಅಥವಾ ಕಪ್ಪುಬಣ್ಣ ಇಟ್ಟುಕೊಳ್ಳಬೇಕಿತ್ತು. ಹ್ಯಾಮಿಲ್ಟನ್ ಬಿಲ್ಡಿಂಗ್ ಬಳಿಗೆ ಹೋಗಿ ಕಟ್ಟಡದ ಮೇಲ್ಭಾಗದಲ್ಲಿದ್ದ ಹೆಸರಿನ ಮೇಲೆ ಮಸಿ ಬಳಿಯತಕ್ಕದ್ದು ಎಂದು ಮಾರ್ಗದರ್ಶನ ನೀಡಲಾಗಿತ್ತು. ಮೊದಲ ಸತ್ಯಾಗ್ರಹಿಯಾಗಿ ಸುಬ್ರಾಯ ಉಪಾಧ್ಯಾಯರು ಹೋಗಿ ಮಸಿ ಬಳಿದರು. ಕೂಡಲೇ ಅವರನ್ನು ಬಂಧಿಸಿದರು. ಇವರಂತೆ ಅನೇಕರು ಮಸಿ ಬಳಿದು ಸತ್ಯಾಗ್ರಹದಲ್ಲಿ ಭಾಗಿಗಳಾದರು. ಹೀಗೆ ನೂರಾರು ಸತ್ಯಾಗ್ರಹಿಗಳು ಬಂಧಿಸಲ್ಪಟ್ಟರು. ಅದೇ ವೇಳೆಗೆ ಮೈಸೂರಿನ ಟೌನ್‌ಹಾಲ್ ಮೈದಾನದಲ್ಲಿ ಸಾರ್ವಜನಿಕ ಸಭೆ ಮಾಡಬಾರದೆಂಬ ನಿಷೇಧಾಜ್ಞೆ ಜಾರಿಗೆ ಬಂದು ಜನ ರೊಚ್ಚಿಗೆದ್ದರು. ಈ ವಿಷಯದಲ್ಲೂ ಮೈಸೂರು ಕಾಂಗ್ರೆಸ್ ತೀರ್ಮಾನ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಇದರ ಮಧ್ಯೆ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ ನಿಲ್ಲಬೇಕೆಂದು ತೀರ್ಮಾನವಾಯಿತು. ತಗಡೂರು ರಾಮಚಂದ್ರರಾಯರು ಮತ್ತು ಎಂ. ಎನ್. ಜೋಯಿಸರು ಬಂಧಿಸಲ್ಪಟ್ಟು ಒಂದು ವರ್ಷಕಾಲ ಜೈಲಿನಲ್ಲಿ ಇರುವಂತಾಯಿತು.

ತಗಡೂರು ರಾಮಚಂದ್ರರಾಯರ ಚಟುವಟಿಕೆಗಳಿಂದ ಪ್ರಭಾವಿತರಾದವರಲ್ಲಿ ಟಿ. ಎಸ್. ಸುಬ್ಬಣ್ಣ ಒಬ್ಬರು. ಹೆಚ್ಚಿನ ವಿದ್ಯಾಭ್ಯಾಸವಿಲ್ಲದಿದ್ದರೂ ಯುವಕರ ವಿದ್ಯಾಭ್ಯಾಸಕ್ಕಾಗಿ ಶ್ರಮಿಸಿದವರು. ಹಳ್ಳಿಯಲ್ಲೇ ಬೆಳೆದವರಾಗಿ ಗ್ರಾಮೀಣರ ಕಷ್ಟಕಾರ್ಪಣ್ಯಗಳನ್ನು ಕಂಡು ಮರುಗಿದವರು. ತಗಡೂರರು ಹಳ್ಳಿಗಳಲ್ಲಿ ಓಡಾಡುತ್ತಿದ್ದಾಗ ಅವರ ಪ್ರಭಾವಕ್ಕೊಳಪಟ್ಟ ಅನೇಕ ತರುಣರಲ್ಲಿ ಸುಬ್ಬಣ್ಣ ಒಬ್ಬರು. ಅವರು ಸಮಾಜಸೇವೆ ದೇಶಸೇವೆಗಾಗಿ ದುಡಿಯುತ್ತಿದ್ದಾಗ ತಗಡೂರು ಆಶ್ರಮದಲ್ಲಿ ಕೆಲಕಾಲ ಶ್ರದ್ಧೆ ಪ್ರಾಮಾಣಿಕತೆಯಿಂದ ಕೆಲಸ ಮಾಡಿದವರು.

ತಗಡೂರಿನ ಸುಬ್ಬಣ್ಣ ಜಾತಿಭಾವನೆಗಳನ್ನು ದೂರ ಮಾಡಿ ಹಳ್ಳಿಗಳಲ್ಲಿ ಶಿಕ್ಷಣ ಪ್ರಸಾರವಾಗಬೇಕೆಂಬ ಉದ್ದೇಶದಿಂದ ಸಾರ್ವಜನಿಕ ವಿದ್ಯಾರ್ಥಿ ಹಾಸ್ಟೆಲ್‌ಗಳನ್ನು ಆರಂಭಿಸಿದವರಲ್ಲಿ ಮೊದಲಿಗರು. ವಿವಿಧ ಸಮುದಾಯದ ವಿದ್ಯಾರ್ಥಿಗಳಿಗೆಲ್ಲಾ ಒಂದೇ ವಸತಿ ನಿಲಯದಲ್ಲಿ ಉಚಿತ ಊಟದ ವ್ಯವಸ್ಥೆ ಮಾಡಿದ್ದರು. ೧೯೩೪ರಲ್ಲಿ ಶಾಲೆಗಳು ಪ್ರಾರಂಭವಾದವು. ಈ ಶಾಲೆಗಳಿಗೆ

ಸುಬ್ಬಣ್ಣನವರೇ ಭಿಕ್ಷೆ ಬೇಡಿ ನಿಧಿ ಸಂಗ್ರಹಿಸುತ್ತಿದ್ದರು. ಹಳ್ಳಿಗಳಲ್ಲೂ ನಾಲ್ಕಾರು ಶಾಲೆಗಳನ್ನು ತೆರೆದಿದ್ದಾರೆ. ಇಂದು ಒಟ್ಟು ೧೧ ಶಾಲೆಗಳಿವೆ. ಅಗರ, ಕಳಲೆ, ತಾಯೂರು, ತಲಕಾಡು, ಪುರಿಗಾಲಿ, ಕ್ಯಾತನಹಳ್ಳಿ, ಕಾಗಲವಾಡಿ, ವಡ್ಡಗೆರೆ, ಮೈಸೂರು, ಚಾಮುಂಡಿಬೆಟ್ಟ, ಇವುಗಳ ಪೈಕಿ ಬಾಲಕಿಯರಿಗೆ ಚಾಮುಂಡಿಬೆಟ್ಟದಲ್ಲಿ ವಸತಿನಿಲಯ ಮತ್ತು ಸಹಶಿಕ್ಷಣ ನೀಡಲಾಗುತ್ತಿದೆ. ತಲಕಾಡಿನಲ್ಲೂ ಬಾಲಕಿಯರಿಗಾಗಿ ಶಾಲೆ ಇಂದಿಗೂ ಇದೆ. ಎಲ್ಲಾ ವಸತಿ ನಿಲಯದಲ್ಲಿ ೧೦೦ ಮಂದಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿದೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಶಿಕ್ಷಣ ಮತ್ತು ವಸತಿ ನಿಲಯಕ್ಕಾಗಿ ಶ್ರಮಿಸಿದ ಮಹಾನ್ ಚೇತನ.

ತಗಡೂರು ಆಶ್ರಮದಲ್ಲಿದ್ದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡವರಲ್ಲಿ ಕೇಶವಮೂರ್ತಿಯೂ ಒಬ್ಬರು. ಎರಡು ವರ್ಷ ಸಬರಮತಿ ಆಶ್ರಮದಲ್ಲಿದ್ದು ದಿನಾ ಕಸ್ತೂರಬಾಗೆ ಮಜ್ಜಿಗೆ ಕೊಡಲು ಹೋಗಿ ಬರುವ ಸಮಯದಲ್ಲಿ ಕಲ್ಲು ತಂದು ಗಾಂಧೀಜಿ ತಿರುಗಾಡಲು ರಸ್ತೆ ಮಾಡಿದರು. ಬಟ್ಟೆ ಚೂರು ಬ್ಲೀಚಿಂಗ್ ಪೌಡರು ಹಾಕಿ ಗುಂಡುಕಲ್ಲಿನಲ್ಲಿ ಅರೆದು ಮಿಶ್ರಣ ತಯಾರಿಸಿ, ತೊಟ್ಟಿ ಅಥವಾ ಬಕೆಟಿನಲ್ಲಿ ಕದಡಿ ಅದನ್ನು ಬಿಳಿ ಬಟ್ಟೆ ಮೇಲೆ ಒಣಹಾಕುತ್ತಿದ್ದು, ಒಣಗಿದ ಮೇಲೆ ತೆಗೆದರೆ ದೇಶಿ ಕಾಗದ ಸಿದ್ಧವಾಗುವುದನ್ನು ಕಲಿತು, ಕೈ ಕಾಗದ ತಯಾರಿಸುತ್ತಿದ್ದರು. ನುಣುಪು ಮಾಡಲು ಮಷಿನಿಗೆ ಕೊಡುತ್ತಿದ್ದರು. ಹಾಗೆಯೇ ಸಕಲೇಶಪುರದಿಂದ ಜೇನಿನ ಪೆಟ್ಟಿಗೆ ತಂದು, ಕೆಳಗೆ ತಟ್ಟೆ ಇಟ್ಟು ಹುಳಗಳನ್ನು ಆಕರ್ಷಿಸುವ ಕೌಶಲದಿಂದಾಗಿ ಜೇನುಸಾಕಣೆಯೂ ತಿಳಿದಿದ್ದರು. ರಾಮಚಂದ್ರರಾಯರೊಂದಿಗೆ ಎಲ್ಲೆಡೆ ಹೋಗಿದ್ದರು. ಒಮ್ಮೆ ಹೈದರಾಬಾದಿನ ನಿಜಾಮ ಪೇಪರ್ ಮಾರಾಟಕ್ಕೆಂದು ಕರೆಸಿಕೊಂಡಾಗ ಬಳ್ಳಾರಿಗೂ ಹೋಗಿದ್ದರು ಎಂದು ತಿಳಿಸಿದವರು ಎರಡನೇ ಕ್ಲಾಸ್ ಓದಿದ ೯೮ ವರ್ಷದ ಅವರ ಪತ್ನಿ ನಾಗರತ್ನಮ್ಮ, ಇವರು ಈಗ ತಗಡೂರಿನಲ್ಲಿದ್ದಾರೆ. ಹಿಂದಿ ಕಲಿತವರು. ಬದನವಾಳಿನ ಗ್ರಾಮೋದ್ಯೋಗದ ಬಗ್ಗೆಯೂ ಬಲ್ಲವರು.

ಅಂದು ತಗಡೂರಿನಲ್ಲಿ ಸರಳತೆ ಎದ್ದು ಕಾಣುತ್ತಿತ್ತು. ಹಿತವಾಗಿ ಮಿತವಾಗಿ ಖರ್ಚು ಮಾಡಬೇಕಿತ್ತು. ಮದುವೆ ಸಮಾರಂಭ ೧೫ ಜನರಿಂದ ನೆರವೇರಿತು. ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದರೂ ಪರೀಕ್ಷೆ ಬರೆಯಲಿಲ್ಲ. ರಾಷ್ಟ್ರ ಭಾಷೆ ಹಿಂದಿ ಪರೀಕ್ಷೆ ಆಗಿದೆ. ಅಂಬರ್ ಚರಕ (ಕೈಚರಕ) ದಿಂದ ನೂಲು ತೆಗೆಯುತ್ತಿದ್ದೆವು.



ಆಶ್ರಮದಲ್ಲಿ ೧ ಲಡಿಗೆ ೧೨ ಆಣೆ ಕೊಡುತ್ತಿದ್ದರು ಎಂದು ಹೇಳಿದವರು ೯೦ ವರ್ಷದ ಯಶೋದಮ್ಮ.

ತಗಡೂರಿನ ಜನ ಹೋದಲ್ಲಿ ಅವರಿಗೆ ಸ್ವಾಗತವಿತ್ತು. ರಾಮಚಂದ್ರರಾಯರು ೧೯೩೪ರಲ್ಲಿ ಮಳವಳ್ಳಿಗೆ ಹೋದಾಗ ಆದಿಕರ್ನಾಟಕದವರ ಮೆರವಣಿಗೆ ಮಾಡಿಸಿ ಕುನ್ನೀರುಕಟ್ಟೆಯಲ್ಲಿ ನೀರು ತೆಗೆಸಿ ಅದನ್ನು ಎಲ್ಲರೂ ಕುಡಿದರು. ಹಿಂದೆ ಅವರಿಗೂ ಸವರ್ಣೀಯ ಹಿಂದುಗಳಿಗೂ ಜಗಳವಾಗಿ ನೀರು ಕುಡಿಯುವುದನ್ನು ಬಿಟ್ಟಿದ್ದರು. ಹೀಗೆ ತಗಡೂರಿನ ಅಂತರಶಕ್ತಿ ಸಮಸ್ಯೆಗೆ ಪರಿಹಾರ ನೀಡುತ್ತಿತ್ತೆಂಬುದು ತಿಳಿಯುವ ವಿಚಾರ. ಅಂದು ಕೋಟೆಯಲ್ಲಿ ಮೆರವಣಿಗೆ ಮಾಡಿಸಿ ಸಂತೆ ಮೈದಾನದಲ್ಲಿ ಭಾಷಣ ಆಲಿಸಿದ್ದಲ್ಲದೆ, ಊಟ ಉಪಚಾರ ನೀಡಿ ಧನಸಹಾಯ ಕೊಟ್ಟು ಹಾರ್ದಿಕವಾಗಿ ಕಳುಹಿಸಿದ್ದನ್ನು ಕೃಷಿಕರಾದ ಸುಬ್ಬಯ್ಯ ಬಿನ್ ದೊಡ್ಡಮುಟ್ಟ ನಂಜಯ್ಯ ನೆನಪಿಸಿಕೊಂಡಿದ್ದಾರೆ.

ಎರಡನೇ ಮಹಾಯುದ್ಧ ನಡೆಯುತ್ತಿದ್ದ ಕಾಲ. ಭಾರತದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲೆಂದು ೧೯೪೨ರಲ್ಲಿ ತಗಡೂರು ರಾಮಚಂದ್ರರಾಯರೊಂದಿಗೆ ಎಂ.ಎನ್. ಜೋಯಿಸರು ಮೈಸೂರಿನಿಂದ ಮುಂಬಯಿಗೆ ತೆರಳಿದ್ದರು. ಅಲ್ಲಿಂದ ಹಿಂತಿರುಗುವ ಮುನ್ನವೇ ಬಂಧನಕ್ಕೊಳಗಾದರು. ಇದರಿಂದ ಯಾವ ಕ್ರಿಯಾತ್ಮಕ ಚಳುವಳಿಯನ್ನು ನಡೆಸಲಾಗಲಿಲ್ಲ ಎಂದು ಎಂ. ಎನ್. ಜೋಯಿಸ್ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಜವಾಬ್ದಾರಿ ಸರ್ಕಾರ ನಿರ್ಮಿಸಲು ಫೈಜಲ್‌ಪುರ ಕಾಂಗ್ರೆಸ್ ಅಧಿವೇಶನಕ್ಕೆ ತೆರಳಿದಾಗಲೂ 'ನೀವೇ ಜವಾಬ್ದಾರಿ ವಹಿಸಿ' ಎಂದು ರಾಷ್ಟ್ರನಾಯಕರು ಹೇಳಿದಾಗ ಅಲ್ಲಿಂದಲೂ ಹೊರಟು ಬಂದದ್ದು ಸ್ಮರಣೀಯವೂ ಹೌದು.

ತಗಡೂರು ಆಶ್ರಮದೊಂದಿಗೆ ಬೆಸೆದುಕೊಂಡಿದ್ದ ಊರಿನ ಹಾಗೂ ಸುತ್ತಮುತ್ತಲಿನ ಕೃಷಿಕರು, ಸ್ವಯಂಸೇವಕರು, ಸತ್ಯಾಗ್ರಹಿಗಳು, ಮಹಿಳೆಯರು, ಗುಡಿಕೈಗಾರಿಕೆಗಳಲ್ಲಿ ನಿರತರಾಗಿದ್ದರು. ಈ ಊರನ್ನು ಮಾದರಿ ಗ್ರಾಮವನ್ನಾಗಿಸುವಲ್ಲಿ ದುಡಿದಿದ್ದಾರೆ. ಅವರೆಲ್ಲರ ಶ್ರಮ, ಸೇವೆಯೂ ಸ್ಮರಣೀಯ.

ತಗಡೂರಿನ ಇತಿಹಾಸ ಬಲ್ಲವರಿಗೆ ಸತ್ಯಾಗ್ರಹದ ಆಶ್ರಮದ ಆವರಣಕ್ಕೆ ಕಾಲಿಡುತ್ತಿದ್ದಂತೆ ರೋಮಾಂಚನದ ಅನುಭವ. ಪಾಳುಬಿದ್ದ ಕಟ್ಟಡದ

ಅವಶೇಷಗಳು, ಹಳೆಯ ನೂಲು ತೆಗೆಯುವ ರಾಟೆ, ತಕಲಿ, ಮಗ್ಗ, ಖಾದಿ ಬಟ್ಟೆ ಮಳಿಗೆ ನಮ್ಮನ್ನು ಹೋರಾಟದ ದಿನಗಳಿಗೆ ಕೊಂಡೊಯ್ಯುತ್ತವೆ. ಇಂದು ಸರ್ವೋದಯ ಸಂಘ ಬೆಂಗಳೂರು ಹೊಸ ಕಟ್ಟಡ ನಿರ್ಮಿಸಿ ಖಾದಿ ಗ್ರಾಮೋದ್ಯೋಗ ಮುಂದುವರೆಸುತ್ತಿದೆ.

ಗಾಂಧೀಜಿ ತಗಡೂರಿಗೆ ಬರುವ ವೇಳೆಗೆ ಇಲ್ಲೆಲ್ಲಾ ಪ್ಲೇಗಿನ ಹಾವಳಿ ಇದ್ದುದರಿಂದ, ಸ್ಥಳೀಯರ ರಚನಾತ್ಮಕ ಕಾರ್ಯಗಳನ್ನು ಊರ ಹೊರಗಿನಿಂದಲೇ ವೀಕ್ಷಿಸಿದ್ದರು. ಬೋಳಿಕಟ್ಟೆಯಲ್ಲಿ ಸಭೆ ಸೇರಿಸಿ ಹತ್ತಿ ನೂಲಿನ ಹಾರ ಹಾಕಿ ಗೌರವಿಸಿದ್ದರು. ಗಾಂಧಿ ಬಂದ ನೆನಪಿಗಾಗಿ ಮತ್ಥಳಿ ಮಾಡಿಸಿಟ್ಟಿದ್ದು ಇಂದಿಗೂ ಸುರಕ್ಷಿತವಾಗಿದೆ. ಈ ಎಲ್ಲಾ ಘಟನೆಗಳನ್ನು ತಲೆ ಎತ್ತಿ ನೋಡುತ್ತಿರುವ ವಿಶಾಲ ಆಲದ ವೃಕ್ಷ ತಗಡೂರ ಸ್ವಾತಂತ್ರ್ಯ ಹೋರಾಟಕ್ಕೆ, ರಚನಾತ್ಮಕ ಕಾರ್ಯಗಳಿಗೆ ಮೂಕ ಸಾಕ್ಷಿಯಾಗಿದೆ.

ಇಲ್ಲಿಯ ಜನರಲ್ಲಿ ಹಿರಿಯರನ್ನು ಗೌರವಿಸುವ ಪ್ರವೃತ್ತಿ ಇದೆ. ಇತ್ತೀಚೆಗೆ ಮಾರುತಿ ಮಂದಿರದ ಸುವರ್ಣ ಮಹೋತ್ಸವ ನಡೆದು ೧೦೮ ಮಂದಿ ವಯೋವೃದ್ಧರಿಗೆ ಕಂಬಳಿ ಹೊದಿಸಿ ಸನ್ಮಾನಿಸಿದ್ದು ಶ್ಲಾಘನೀಯ. ಈ ಸತ್ಕಾರ್ಯದಲ್ಲಿ ಶೋಮಿಕಾ ಎಸ್. ರಾವ್ ತೊಡಗಿಸಿಕೊಂಡಿದ್ದಾರೆ. ಆರು ದಶಕಕ್ಕೂ ಹೆಚ್ಚು ಕಾಲದಿಂದ ಇಲ್ಲೇ ನೆಲೆಸಿರುವ ಸೂರ್ಯನಾರಾಯಣರಾವ್ ವೃತ್ತಿಯಲ್ಲಿ ಆಡಿಟರ್ ಆಗಿದ್ದು ಪ್ರವೃತ್ತಿಯಲ್ಲಿ ಸಾಂಸ್ಕೃತಿಕ ಪರಂಪರೆಯ ಸಂರಕ್ಷಕರೂ ಹೌದು. ನೀರಿನಲ್ಲಿ ದೊರೆತ ಆಂಜನೇಯನ ಮೂರ್ತಿ ತಂದು ಪ್ರತಿಷ್ಠಾಪಿಸಿ ಅದಕ್ಕೊಂದು ಗುಡಿ ಕಟ್ಟಿಸಿದವರು ಹಿರಿಯರು. ಇಂದಿಗೂ ಇಲ್ಲಿ ಹನುಮಜಯಂತಿ ನಡೆಸಿಕೊಂಡು ಬರುತ್ತಿದ್ದಾರೆ.

ವಿದ್ಯಾವಂತರು ತಮ್ಮೂರಿನ ಬಗ್ಗೆ 'ತಗಡೂರು ನಮ್ಮೂರು' ಎಂದು ಅಭಿಮಾನ ವ್ಯಕ್ತಪಡಿಸುತ್ತಾರೆ. ಅದು ಹೀಗಿದೆ:

**ನಮ್ಮೂರೆಂದರೆ ನಮಗೆ ಹೆಮ್ಮೆ ।**
**ಬನ್ನಿ ಸೇರೋಣ ಮತ್ತೊಮ್ಮೆ ॥**

**ಇತಿಹಾಸ ತಿರುಗಿ ನೋಡಿದರೆ ಒಮ್ಮೆ**
**ಹಲವು ನಿದರ್ಶನಗಳು ಕಾಣುವುದಲ್ಲೊಮ್ಮೆ.**



**ತಾಮ್ರದ ಹಾಳೆಯಲ್ಲಿ ಬರೆಯುತ್ತಿದ್ದ ಊರು**
**ಯಂತ್ರದ ತಗಡಿಗೆ, ಹೆಸರಾಯಿತು ನಮ್ಮೂರು.**
**ಕೊಮ್ಮರಾಯ ಪ್ರಭುಗಳು ಆಳಿದ ಊರು**
**ಹಲವು ಪಾಳೆಯಗಾರರು ಮೆರೆದ ಊರು,**
**ಹೆಮ್ಮೆಯ ನಮ್ಮೂರು ತಗಡೂರು**

**ನಮ್ಮೂರೆಂದರೆ ನಮಗೆ ಹೆಮ್ಮೆ ।**
**ಬನ್ನಿ ಸೇರೋಣ ಮತ್ತೊಮ್ಮೆ ॥**

**ನಮ್ಮ ಊರಿನ ದೊಡ್ಡಕೆರೆ ಕೊಮ್ಮಗೆರೆ**
**ಪ್ರಭುಗಳ ಹೆಸರಾಯ್ತು ನಮ್ಮ ಕೆರೆ,**
**ಹತ್ತು ಹಳ್ಳಿಗಳಿಗೆ ಆಯ್ತು ಜೀವ ಜಲಧಾರೆ.**

**ಶಾಸನದಿ ಉಲ್ಲೇಖಿಸಿದೆ, ನಮ್ಮೂರು ಹಿರಿಯ ಊರು**
**ಗಂಗರು, ಹೊಯ್ಸಳರನ್ನು ಆಕರ್ಷಿಸಿದ ಊರು,**
**ಅಂಕನಾಥೇಶ್ವರ, ಮೂಲೇಶ್ವರ ದೇವರು ನೆಲೆಸಿದ ಊರು**
**ಲಕ್ಷ್ಮಿನಾರಾಯಣ ದೇವಾಲಯ ಸ್ಥಾಪಿತ ಊರು**
**ಬಸವದೇವರ ಬಸವನಗುಡಿ ಊರು**
**ಹಟ್ಟಿದೇವಮ್ಮ, ಬೆಂಚಕಲ್ಲೇಶ್ವರ ದೇವ ಪೂಜಿತ ಊರು**
**ಮಕ್ಕಳ ತಾಯಿ ಮಾರಮ್ಮನ ತವರೂರು**

**ನಮ್ಮ ಆರಾಧ್ಯದೈವ ಶ್ರೀ ಮಾರುತಿ ಮಂದಿರಂ ಊರು**
**ನವಗ್ರಹ ಸ್ಥಾಪಿತ ಭಕ್ತಿಪೂಜಿತ ಊರು**
**ಹನುಮ ರಾಮ ನೆನೆಯುವ ಭಜಿಸುವ ಊರು**
**ಎಲ್ಲರೂ ಸೇರಿ, ನವಮಿ, ಜಯಂತಿಯ ವಿಜೃಂಭಿಸುವ ಊರು**

**ನಮ್ಮೂರೆಂದರೆ ನಮಗೆ ಹೆಮ್ಮೆ ।**
**ಬನ್ನಿ ಸೇರೋಣ ಮತ್ತೊಮ್ಮೆ ॥**

ಕರ್ಮಯೋಗಿ ಜನಿಸಿದ ಊರು
ಜಮಾನ್‌ಲಾಲ್ ಪ್ರಶಸ್ತಿ ಪಡೆದ ಊರು
ಖಾದಿ ಗ್ರಾಮೋದ್ಯೋಗ ಬೆಳೆಸಿದ ಊರು,
ಸ್ವಾತಂತ್ರ್ಯ ಸಂಗ್ರಾಮದ ಹೋರಾಟದ ಊರು,
ಮಹಾತ್ಮಗಾಂಧಿ ಬಂದು ಮೆಚ್ಚಿದ ಊರು
ಜಿ. ವಿ. ಅಯ್ಯರ್ ನಿರ್ಮಾಣದ ಚಿತ್ರ 'ತಗಡೂರು ಗಾಂಧಿ'ಯ
ಊರು
ತಗಡೂರು ರಾಮಚಂದ್ರರಾಯರ ತವರೂರು.

ಸಾರ್ವಜನಿಕ ಹಾಸ್ಟೆಲ್, ಸ್ಕೂಲ್ ನಿರ್ಮಾತರ ಊರು
ಟಿ. ಎಸ್. ಸುಬ್ಬಣ್ಣನವರ ತವರೂರು.

ಸಂಗೀತ ವಿದ್ವಾನ್ ಶ್ರೀನಿವಾಸಯ್ಯನವರು ನೆಲೆಸಿದ ಊರು
ಹಲವು ಶಿಷ್ಯರನ್ನು ಬೆಳೆಸಿದ ಊರು.

ಮೃದಂಗ ವಿದ್ವಾನ್ ಪುಟ್ಟಸ್ವಾಮಯ್ಯ ನೆಲೆಸಿದ ಊರು
ಅರಸರ ದರ್ಬಾರ್‌ನಲ್ಲಿ ಮೆರೆಸಿದ ಊರು
ಆಕಾಶವಾಣಿಯಲ್ಲಿ ಹೆಸರಾಗಿಸಿದ ಊರು.

ಮರದ ಸೈಕಲ್ ಮಾಡಿ ಹೆಸರಾದ ಬಸಪ್ಪನ ಊರು
ಶಿಲ್ಪಿ ಸಿದ್ದಲಿಂಗಯ್ಯನವರು ಬೆಳದ ಊರು
ಸಿನಿಮಾ ಖಳನಾಯಕನಾಗಿ ಮೆರೆದ ನಾಗಪ್ಪನವರ ಊರು

ವೇದ ಬ್ರಹ್ಮಶ್ರೀ ಅಶ್ವಥ್ ನಾರಾಯಣನವರು ಜನಿಸಿದ ಊರು
ಶತಾಯುಷಿ ಶ್ರೀ ಬಾಲಚಂದ್ರಯ್ಯನವರು ಬಾಳಿದ ಊರು
ಜನತಾ ಹೈಸ್ಕೂಲ್ ರೂವಾರಿ ನಾಗಚಂದ್ರಶರ್ಮ ನೆಲೆಸಿದ ಊರು
ಖ್ಯಾತ ಜ್ಯೋತಿಷಿ ಕೃಷ್ಣಕುಮಾರ್ ಜನಿಸಿದ ಊರು
ಲಾಯರ್ ಶ್ರೀನಿವಾಸರಾವ್ ಬೆಳೆಸಿದ ಊರು



ಧರ್ಮದರ್ಶಿ, ಟ್ಯಾಕ್ಸ್ ಕನ್ಸಲ್ಟೆಂಟ್ ರಾಮದಾಸ್‌ರವರ ತವರೂರು
ಹೆಚ್ಚು ಪಿಎಚ್.ಡಿ, ಡಾಕ್ಟರೇಟ್ ಪಡೆದ ವ್ಯಕ್ತಿಗಳ ಊರು

ಇನ್ನೂ ಹಲವು ಖ್ಯಾತ ನಾಮರನ್ನು ಬೆಳೆಸಿದ ಊರು
ಧಾರ್ಮಿಕ, ಸಾಂಸ್ಕೃತಿಕ ಆಚರಣೆಯ ತವರೂರು.

ನಮ್ಮೂರೆಂದರೆ ನಮಗೆ ಹೆಮ್ಮೆ ।
ಬನ್ನಿ ಸೇರೋಣ ಮತ್ತೊಮ್ಮೆ ॥

ತಗಡೂರಿನ ನಾಯಕ ಜನಾಂಗಕ್ಕೆ ರೋಚಕ ಇತಿಹಾಸವಿದೆ. ಅದರಂತೆ ತಗಡೂರಿನಲ್ಲಿ ಒಬ್ಬ ಪಾಳೆಯಗಾರನಿದ್ದ. ಆತ ದಕ್ಷ ಹಾಗೂ ಮುತ್ಸದ್ಧಿ ನಾಯಕನೆನಿಸಿದ್ದ. ಮೈಸೂರಿನ ಅರಸರ ಮನೆಗೆ ಹೆಣ್ಣು ಕೇಳಲು ಹೋದಾಗ ಅರಸರಿಗೆ ಇಂಥ ಪಾಳೆಯಗಾರರನ್ನು ಎದುರು ಹಾಕಿಕೊಳ್ಳಲು ಇಷ್ಟವಾಗದೆ, ಸಾಮ್ರಾಜ್ಯ ಉಳಿಸಿಕೊಳ್ಳಲು ಉಪಾಯ ಹೂಡಿದರು. ಇವರು ಹೂಡಿದ ಒಳಸಂಚು ತಿಳಿಯಲಿಲ್ಲ. ಪಾಳೆಗಾರನ ಕಡೆಯವರನ್ನು ಹೂವೀಳೆ ಮಾಡಿಕೊಳ್ಳಲು ಅರಸ ಆಹ್ವಾನಿಸಿದಾಗ, ರಾಜ ತನ್ನ ಮಂತ್ರಿಯ ಸಲಹೆ ಮೇರೆಗೆ ಬಂದ ಅತಿಥಿಗಳನ್ನು ನೆಲಮಾಳಿಗೆಯತ್ತ ಒಳಗೆ ಹೋಗಿ ವಿಶ್ರಾಂತಿ ಪಡೆಯಲು ತಿಳಿಸುತ್ತಾನೆ. ಒಳಹೋದವರು ಒಳಸಂಚಿಗೆ ಬಲಿಯಾಗಿ ಹೊರಬರಲೇ ಇಲ್ಲ. ಇದರಿಂದ ಕೊನೆಯವನಾಗಿದ್ದ ಚಿಕ್ಕ ಬಾಲಕನೊಬ್ಬ ತನ್ನವರನ್ನು ಕಾಣದೆ ಒಳಹೋಗಲು ನಿರಾಕರಿಸಿದಾಗ, ಆತನು ಬದುಕಿ ಉಳಿಯಲಿ ಎಂದು ದಯೆ ತೋರಿಸಿ ಊರಿಗೆ ಹಿಂತಿರುಗಲು ಅನುಮತಿ ನೀಡಲಾಗಿ, ಆತ ತಗಡೂರಿಗೆ ಬಂದು ತಲುಪಿದ. ಆತನೇ ನಾಯಕ ಜನಾಂಗದ ಮಾರನಾಯಕ ಎಂದು ಗುರುತಿಸುತ್ತಾರೆ.

ತಗಡೂರಿನ ಕಲಾವಿದರಿಗೆ ರಾಜ ಮನ್ನಣೆಯು ದೊರೆತಿದೆ. ನಾಲ್ವಡಿ ಕೃಷ್ಣರಾಜ ಮತ್ತು ಜಯಚಾಮರಾಜೇಂದ್ರ ಒಡೆಯರ್ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ಮೇಗಲಕೇರಿಯ ಮೃದಂಗ ವಿದ್ವಾನ್ ಪುಟ್ಟಸ್ವಾಮಯ್ಯ/ ಮೂಗೇಗೌಡ ತಗಡೂರಿನವನು. ಈತನು ವಾದ್ಯ ನುಡಿಸುವಿಕೆಯಲ್ಲಿ 'ರಾಜನ್' ಎಂಬ ಶಬ್ದದ ಅಲೆ ತರಂಗ ತರಂಗವಾಗಿ ಮೂಡಿಬರುತ್ತಿದ್ದುದನ್ನು ಆಲಿಸುತ್ತಿದ್ದ

ರಾಜ ಆತನ ಪ್ರತಿಭೆಯನ್ನು ಗುರುತಿಸಿ ಪ್ರಶಂಸಿಸಿ, ಮೈಸೂರಿನ ಒಂಟಿಕೊಪ್ಪಲ್ ರಸ್ತೆಯಲ್ಲಿ ಭೂಮಿ ಬಳುವಳಿಯಾಗಿ ನೀಡಿದ್ದರು. ಸಹೋದರ ತಬಲ ವಿದ್ವಾನ ಡಿ. ಬಸವಯ್ಯ, ಸಂಗೀತ ವಿದ್ವಾನ್ ಶ್ರೀನಿವಾಸಯ್ಯ ಊರಿನ ಶ್ರೇಷ್ಠ ಕಲಾವಿದರು. ಜನರನ್ನು ಅಭಿನಯದ ಮೂಲಕ ರಂಜಿಸುವ ಪ್ರವೃತ್ತಿಯೂ ಇಲ್ಲಿಯ ಜನರಲ್ಲಿತ್ತು. ಅದಕ್ಕೆ ಉತ್ತಮ ನಿದರ್ಶನ ಟಿ. ಬಿ. ನಾಗಪ್ಪನವರು. ಇವರು ಸುಮಾರು ೫೦ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಖಳನಾಯಕನ ಪಾತ್ರದಲ್ಲಿ ಅಭಿನಯಿಸಿ ಕೆ. ಡಿ. ನಾಗಪ್ಪ ಎಂದೇ ಜನಪ್ರಿಯರಾಗಿದ್ದರು.

ಪ್ರಜಾಸೋಷಲಿಸ್ಟ್ ಪಕ್ಷದಲ್ಲಿದ್ದ ಟಿ. ವಿ. ಶ್ರೀನಿವಾಸರಾವ್ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ನ್ಯಾಯಿಕ ಸಲಹೆಗಾರರಾಗಿದ್ದರು. ತುಳಸಿ ದಾಸಪ್ಪನವರಿಗೆ ಕಾರ್ಯದರ್ಶಿಯಾಗಿಯೂ, ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಚೇರ್ಮನ್‌ರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ.

ವಕೀಲಿ ವೃತ್ತಿಯಲ್ಲಿದ್ದ ಲಾಯರ್ ಸುಬ್ಬಣ್ಣನವರು ಹೈಕೋರ್ಟಿನಲ್ಲಿ ಹಿರಿಯ ವಕೀಲರಾಗಿದ್ದರು. ಇವರು ಕಾವೇರಿ ಹೋರಾಟದಲ್ಲಿ ಭಾಗವಹಿಸಿದ್ದರು.

ತಗಡೂರಿನ ಪಳ್ಳಿ ಮಾದಪ್ಪ ನ್ಯಾಯ ತೀರ್ಮಾನಕ್ಕೆ ಹೆಸರು ವಾಸಿಯಾಗಿದ್ದ. ಅಂದರೆ ಈತ 'ಮೂರು ಕೊಟ್ಟರೆ ಅತ್ತೆ ಕಡೆಗೆ, ಆರು ಕೊಟ್ಟರೆ ಸೊಸೆ ಕಡೆಗೆ' ಎಂಬ ನ್ಯಾಯಕ್ಕೆ ಹೆಸರುವಾಸಿ. ಅದಕ್ಕೆ ಪಳ್ಳಿ ನ್ಯಾಯ ಎಂದೇ ಕರೆಯುತ್ತಿದ್ದರು. ಈತ ಸುಮಾರು ೭ ಅಡಿ ಎತ್ತರದವ. ಒಂದು ಹೊತ್ತಿಗೆ ಸರಿಯಾಗಿ ೧೨ ರಾಗಿ/ ಜೋಳದ ಮುದ್ದೆ, ೨ ಸೇರು ಬೆಣ್ಣೆ ತಿನ್ನುತ್ತಿದ್ದ. ಇವರ ಕುಟಿಲ ನ್ಯಾಯದಿಂದ ರೋಸಿ ಹೋದ ಜನ ಮೂರು ಗುಂಪಿನಲ್ಲಿ ಪಿತೂರಿ ಮಾಡಿ ಕೊಲ್ಲಲು ಯತ್ನಿಸಿದ್ದರು. ಆದರೆ ೧೫ ಜನ ಬಂದರೂ ಅವರನ್ನು ಹೊಡೆದು ಹಾಕುವ ಸಾಮರ್ಥ್ಯ ಆತನಿಗಿತ್ತು. ಆತ ಸುಮಾರು ೮೦ ವರ್ಷ ಕಾಲ ಜೀವಿಸಿದ್ದ. ಈತ ೧೯೭೦ರ ದಶಕದಲ್ಲಿ ಮರಣ ಹೊಂದಿದ.

ಉಂತೂರು ನಿಂಗಪ್ಪ ಎಂಬಾತ ಇಲ್ಲಿಯ ದೇವಾಲಯದ ಆವರಣದಲ್ಲೇ ಕುಳಿತಿರುತ್ತಿದ್ದ. ವಿದ್ಯೆ ಇಲ್ಲದಿದ್ದರೂ ವ್ಯವಹಾರ ಚತುರ. ಆತನನ್ನು ಸಂಪರ್ಕಿಸಿದವರಿಗೆ ತಿಳಿಯ ಹೇಳುತ್ತಿದ್ದುದು ಏನೆಂದರೆ ಅಆಇಈಉಊ ನಲ್ಲೇ ಜೀವನದ ಆಟ ಊಟ ಓಟ ಅಡಗಿದೆ ಎಂಬ ವಾಸ್ತವತೆಯನ್ನು ಎತ್ತಿ ಹಿಡಿದು ಹೇಳುತ್ತಿದ್ದ. ಮಹಿಳೆಯರಿಗೆ ಸಂಬಂಧಪಟ್ಟಂತೆ ತನ್ನ ಅನುಭವವನ್ನು



'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ವಿಚಾರವನ್ನು ಬಹು ರಸವತ್ತಾಗಿ ತನ್ನದೇ ಪದಗಳಲ್ಲಿ ವರ್ಣಿಸುತ್ತಿದ್ದನೆಂದು ಹೇಳುತ್ತಾರೆ.

ಜಾತ್ರೆ ಉತ್ಸವಗಳು ಆಯಾ ಕಾಲದಲ್ಲಿ ನೆರವೇರುತ್ತದೆ. ಅದರಲ್ಲಿ ಫೆಬ್ರವರಿ ತಿಂಗಳಿನ ಬೆಣಚುಕಲ್ಲೇಶ್ವರ ಜಾತ್ರೆಗೆ ವಿಶೇಷ ಮಹತ್ವವಿದೆ. ಮೈಸೂರು ಅರಸರ ನೆಂಟರೇ ಬೆಣಚುಕಲ್ಲೇಶ್ವರ ಅರಸು. ಈತ ಉಪ್ಪಾರ ಕುಲದ ಸ್ತ್ರೀಯನ್ನು ಗುಟ್ಟಾಗಿ ಪ್ರೀತಿಸುತ್ತಿದ್ದ. ಇವರಿಬ್ಬರೂ ಪ್ರತಿನಿತ್ಯ ಒಂದೆಡೆ ಭೇಟಿ ಮಾಡುತ್ತಿದ್ದರು. ಒಮ್ಮೆ ಇವರು ಜನರ ಕಣ್ಣಿಗೆ ಬಿದ್ದರು. ಇನ್ನು ಊರೆಲ್ಲಾ ಸುದ್ದಿಯಾಗಿ ಎರಡು ಮನೆಯವರಿಗೂ ಸಂಕಷ್ಟ ಬಂದೊದಗುತ್ತದೆ. ಇದರಿಂದ ಪಾರಾಗಲು ಇಬ್ಬರೂ ಮರಣಕ್ಕೆ ಶರಣಾದರು. ಇವರಿಗೆ ಉಂಟಾದ 'ಭಗ್ನ ಪ್ರಣಯ' ಹಾಗೂ 'ಅಮರ ಮಧುರಾ ಪ್ರೇಮ'ಕ್ಕೆ ಮೆಚ್ಚಿದ ಜನ ಕಲ್ಲಿನ ರೂಪದಲ್ಲಿಯೇ ದೈವತ್ವವನ್ನು ಕಂಡು ಆರಾಧಿಸುತ್ತಾರೆ. ಇಬ್ಬರೂ ಭೇಟಿಯಾಗುತ್ತಿದ್ದ ಜಾಗಕ್ಕೆ ಮುನ್ನೂರು ಮೀಟರ್ ದೂರದಲ್ಲಿ ಎರಡು ಗುಡಿಗಳು ನಿರ್ಮಾಣಗೊಂಡಿವೆ. ಜನ ನ್ಯಾಯ ತೀರ್ಮಾನಕ್ಕೂ ಈ ದೇವಾಲಯಕ್ಕೆ ಹೋಗುತ್ತಾರೆ. ಅದೇ ಚಿಕ್ಕಮ್ಮತಾಯಿ ಮತ್ತು ಬೆಣಚುಕಲ್ಲೇಶ್ವರ ಗುಡಿಯ ವಿಶೇಷ

ಇಲ್ಲಿಯ ಅಂಕನಾಥೇಶ್ವರ ಉತ್ತರದ ಕಾಶಿಯಿಂದ ತನ್ನ ಏಳುಮಂದಿ ತಂಗಿಯರೊಂದಿಗೆ ತಗಡೂರಿಗೆ ಬಂದ. ಸ್ಥಳೀಯನಾಗಿದ್ದ ಸಿದ್ದೇಶ್ವರನ ಅನುಮತಿ ಕೇಳಿದಾಗ ಆತ ತಾನಿದ್ದ ಜಾಗಬಿಟ್ಟು ಮೇಲಿನ ಬೆಟ್ಟಕ್ಕೆ ಹೋಗಿ ನೆಲೆಸಿದ. ಅಂಕಪ್ಪ, ಅಂಕನಾಥೇಶ್ವರ ತನ್ನ ತಂಗಿ ಹಟ್ಟಿದೇವಮ್ಮನೊಡನೆ ಇಲ್ಲಿಯೇ ನೆಲೆನಿಂತ. ಇಲ್ಲಿರುವ ಶಿವರೂಪದ ಅಂಕನಾಥೇಶ್ವರ ಬ್ರಹ್ಮಚಾರಿ. ತಂಗಿ ಹಟ್ಟಿದೇವಮ್ಮ ಒರಳುಕಲ್ಲಿನಲ್ಲೇ ಆಶ್ರಯ ಪಡೆದು ಒರಳು ಕಲ್ಲು ಮಾರಮ್ಮ ಎಂದೇ ಜನ ಗುರುತಿಸಿ, ಗೌರವಿಸಿ, ಆರಾಧಿಸುತ್ತಾರೆ. ಮಕ್ಕಳ ತಾಯಮ್ಮ ದಡಾರ ತಗುಲಿದ ಮಕ್ಕಳನ್ನು ರಕ್ಷಿಸುವವಳು. ಈಕೆಯ ಗುಡಿ ಅಂಗಡಿ ಬೀದಿಯಲ್ಲಿದೆ. ಅಂಕನಾಥೇಶ್ವರನ ತಂಗಿಯರಾದ ಉರಕಾತಿ–ಉಮ್ಮತ್ತೂರಿನಲ್ಲೂ, ಹೊನ್ನಾದೇವಿ ಸೋಸಲೆಯಲ್ಲೂ, ತಿಬ್ಬಾದೇವಿ – ಮೂಗೂರಿನಲ್ಲೂ, ಮಾಳಿಗೇಶ್ವರಿ ಚಂಡಿಕೇಶ್ವರಿ –ನಗರ್ಲೆಯಲ್ಲೂ, ದಂಡಿನಮಾರಮ್ಮ–ದಾಸನೂರಿನಲ್ಲೂ, ಗೋನಳ್ಳಿ ಮಾರಮ್ಮ ಎಂದು ಸುತ್ತಮುತ್ತಲು ನೆಲೆಸಿರುವುದು, ಎಲ್ಲರೊಡನೆ ಗೊತ್ತಿಲ್ಲದೇ ಬಾಂಧವ್ಯ ಬೆಳೆದಿದೆ. ಶಕ್ತಿದೇವತೆಗಳಾದ ಇವರಿಗೆ ನಮಸ್ಕರಿಸಿ ಹೊರಡುವ ಪದ್ಧತಿ ಗಂಗರ ಕಾಲದಿಂದಲೂ ರೂಢಿಯಲ್ಲಿದೆ.

ಚೋಳರ ಕಾಲದಲ್ಲಿ ನಿರ್ಮಾಣಗೊಂಡ ಲಕ್ಷ್ಮೀನರಸಿಂಹ ದೇವಾಲಯ ಇಂದು ಲಕ್ಷ್ಮೀನಾರಾಯಣ ದೇಗುಲವಾಗಿದೆ. ಕುದೇರು ಗ್ರಾಮದ ಹನುಮನಪುರದಲ್ಲಿದ್ದ ರಾಮಚಂದ್ರರಾಯರು ಆ ಕಾಲಕ್ಕೆ ದೊಡ್ಡ ಗ್ರಾಮವಾಗಿದ್ದ ತಗಡೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು. ೧೯೨೯ರ ವೇಳೆಗೆ ನಂಜನಗೂಡು ತಾಲ್ಲೂಕಿನಲ್ಲೇ ತಗಡೂರು ಹೆಚ್ಚಿನ ಜನಸಂಖ್ಯೆ ಹೊಂದಿತ್ತು. ರಾಮಚಂದ್ರರಾಯರು ಸ್ವಾತಂತ್ರ್ಯ ಚಳುವಳಿಯ ಸಂಘಟನೆ ಮಾಡುತ್ತಿದ್ದುದು ಇದೇ ದೇವಾಲಯದ ಆವರಣದಲ್ಲಿ, ಗಾಣಿಗರ ಬೀದಿ ಪುಟ್ಟಮಾದಶೆಟ್ಟಿ ಚಳುವಳಿಯಲ್ಲಿ ಮೊದಲ ಸಾಲಿನಲ್ಲಿ ಧ್ವಜ ಹಿಡಿದು ಬೆಂಬಲ ಸೂಚಿಸುತ್ತಿದ್ದವ ನಿಜಕ್ಕು ಸ್ಮರಣೀಯ. ೧೯೩೪ರಲ್ಲಿ ಗಾಂಧೀಜಿ ತಗಡೂರಿಗೆ ಭೇಟಿ ನೀಡಿದಾಗ ಬೋಳಿಕಟ್ಟೆಯಲ್ಲಿ (ಲಾಯರ್ ನಾಗಭೂಷಣರಾವ್ ಅವರ ಜಮೀನಿನಲ್ಲಿ) ಚಪ್ಪರ ಹಾಕಿಸಿ ಸುತ್ತಮುತ್ತಲಿನಿಂದ ಬಂದ ಸಾವಿರಾರು ಮಂದಿ ಗಾಂಧೀಜಿ ಭಾಷಣ ಕೇಳಿ ಸ್ಫೂರ್ತಿಗೊಂಡರು. ಜನರನ್ನು ಭಾವನಾತ್ಮಕವಾಗಿ ಒಗ್ಗೂಡಿಸಲು ರಾಮಭಜನೆ ಮಾಡಿಸುತ್ತಿದ್ದರು. ಅದೇ ಮುಂದೆ ರಾಮಮಂದಿರ, ರಾಮೋತ್ಸವ ನಡೆಯಲು ಪ್ರೇರಣೆ ನೀಡಿತು.

ತಗಡೂರಿನ ಜನ ರಾಷ್ಟ್ರದ ಗಡಿ ರಸ್ತೆ ಸಂಘಟನೆ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದಾರೆ. ಬಾರ್ಡರ್ ರೋಡ್ ಆರ್ಗನೈಜೇಷನ್ (ಬಿ.ಆರ್.ಒ) ಘಟಕದಲ್ಲಿ ೯ ವರ್ಷಗಳ ಕಾಲ ಸೇವೆ ಸಲ್ಲಿಸಿದ ಟಿ. ಆರ್. ನಾಗೇಂದ್ರ ಊರಿನ ಹೆಮ್ಮೆಯ ಪುರುಷ. ೧೯೭೧ರಲ್ಲಿ ನಡೆದ ಪಾಕಿಸ್ತಾನ ಯುದ್ಧದಲ್ಲಿ ಕಾರ್ಗಿಲ್‌ನಲ್ಲಿ ಕರ್ತವ್ಯದಲ್ಲಿದ್ದರು. ನೇಫಾದಲ್ಲೂ (ಎನ್.ಇ.ಎಫ್.ಎ) ಕರ್ತವ್ಯನಿರತರಾಗಿದ್ದು ೧೯೮೦ ರಿಂದೀಚೆಗೆ ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಸಿವಿಲ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ ಇದೀಗ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ.

ಶೈಕ್ಷಣಿಕವಾಗಿ ಹಿಂದೆ ಎಲ್ಲೆಡೆ ಇದ್ದಂತೆ ಅರಳಿಕಟ್ಟೆ ಗ್ರಾಮ ಚಾವಡಿಯೇ ಶಿಕ್ಷಣದ ಕೇಂದ್ರವಾಗಿತ್ತು. ಸ್ವಾತಂತ್ರ್ಯಕ್ಕೂ ಮುನ್ನ ೧೯೩೭ರ ವೇಳೆಗೆ ಆಶ್ರಮದ ಸಮೀಪದಲ್ಲೇ ಹಿರಿಯ ಪ್ರಾಥಮಿಕ ಶಾಲೆ ತೆರೆಯಲಾಯಿತು. ಟಿ. ಆರ್. ನಾಗರಾಜರಾವ್ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು, ಚಿನ್ನಂಬಳ್ಳಿಯಲ್ಲಿ ಶಾಲೆ ತೆರೆಯಲು ಶಿಫಾರಸು ಮಾಡಿದ್ದರು. ಇಂದಿಗೂ ಆ ಶಾಲೆಯಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಮಧ್ಯಾಹ್ನದ ಊಟದ ವ್ಯವಸ್ಥೆಯೂ ಇದೆ. ಇಂದು ಈ ಊರಿನಲ್ಲಿ ಬಾಲಕಿಯರಿಗೆ ಮತ್ತು ಬಾಲಕರಿಗೆ ಪ್ರತ್ಯೇಕ



ಹಿರಿಯ ಪ್ರಾಥಮಿಕ ಶಾಲೆಗಳಿವೆ. ೧೯೬೨ರಲ್ಲೇ ಗ್ರಾಮೀಣ ಮಕ್ಕಳಿಗಾಗಿ ಸ್ಥಾಪಿಸಿದ ಜನತಾ ಪ್ರೌಢಶಾಲೆ ಸಂಸ್ಥಾಪಕರಲ್ಲಿ ನಾಗಚಂದ್ರಶರ್ಮ, ರಾಮಚಂದ್ರರಾಯರು, ಟಿ. ವಿ. ಶ್ರೀನಿವಾಸರಾಯರು, ಬಿ. ಗುರುಮಲ್ಲಯ್ಯ, ಟಿ. ಪಿ. ಶಿವಮೂರ್ತಿ ಮುಂತಾದವರು ಪ್ರಮುಖರು. ಪ್ರಸ್ತುತ ಪದವಿಪೂರ್ವ ಕಾಲೇಜು ಕೈಗಾರಿಕಾ ಕ್ಷೇತ್ರಕ್ಕೆ ಮೀಸಲಾಗಿದೆ. ಗ್ರಾಮೀಣ ಯುವಕರ ಅಗತ್ಯಾನುಸಾರ ಫಿಟ್ಟರ್, ಎಲೆಕ್ಟ್ರೀಷಿಯನ್, ಎಲೆಕ್ಟ್ರೋಮೆಕ್ಯಾನಿಸಂನಲ್ಲಿ ತರಬೇತಿ ನೀಡಲಾಗುತ್ತಿದೆ.

ಶತಾಯುಷಿ ಬಾಲಚಂದ್ರಯ್ಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದ್ದರು. ೧೦೨ ವರ್ಷ ಬದುಕಿದ ಹಿರಿಯ ಚೇತನ ಅವರು. ಹೊರಳ್ಳಿ (೨ ಕಿ.ಮೀ) ಸಿದ್ದಶೆಟ್ಟಿ ಮಹಾಭಾರತದ ೧೮ ಪರ್ವಗಳ ಪ್ರಸಂಗಗಳನ್ನು ಜಾನಪದ ಶೈಲಿಯಲ್ಲಿ ಹೇಳುತ್ತಿದ್ದ. ಅದನ್ನು ಪಿ. ಕೆ. ರಾಜಶೇಖರ್ 'ಜಾನಪದ ಭಾರತ' ಶೀರ್ಷಿಕೆಯಡಿಯಲ್ಲಿ ಸಂಪಾದಿಸಿದ್ದಾರೆ.

'ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಯ್ಯ' ಎಂದು ಚಿಂತಿಸಿದ ದಾನಿಗಳಲ್ಲಿ ದೊಡ್ಡಕಟ್ಟೆಹುಂಡಿಯ ಟಿ. ವಿ. ವೀರಭದ್ರಪ್ಪನವರು ಸಾರ್ವಜನಿಕರ ಸಂಚಾರಕ್ಕಾಗಿ ರಸ್ತೆ ನಿರ್ಮಿಸಲು ೩೦೦ ಮೀಟರ್ x ೩೦ ಅಡಿ ಜಾಗ ನೀಡಿರುವುದು ಸ್ಮರಣೀಯ. (ರಸ್ತೆ ನಿರ್ಮಾಣ ಹಂತದಲ್ಲಿದೆಯಷ್ಟೆ)

ಮಹಾನಾಡು, ಹಿರಿಯನಾಡಾಗಿದ್ದ ತಗಡೂರು ಇಂದು ಬಿಳಿಕೆರೆ ಹೋಬಳಿಗೆ ಸೇರಿದ ಗ್ರಾಮವಾಗಿದ್ದರೂ ಖಾದಿ ಗ್ರಾಮವಾಗಿ ಉಳಿದಿದೆ. (ಹಲವು ಮಾರ್ಪಾಟುಗಳಾಗಿವೆ). ಸುಮಾರು ೧೨,೦೦೦ ಜನಸಂಖ್ಯೆಯಲ್ಲಿ ೭,೦೦೦ ಮತದಾರರಿದ್ದಾರೆ.

❑

## ಗ್ರಂಥಋಣ


೧. ಎಪಿಗ್ರಾಫಿಯಾ ಕರ್ನಾಟಿಕ (ಪರಿಷ್ಕೃತ ಆವೃತ್ತಿ) ಸಂಪುಟ ३, ನಂಜನಗೂಡು ತಾಲ್ಲೂಕು ಶಾಸನ ಸಂಖ್ಯೆ ೨೫೮–೨೭३ರವರೆಗೆ.

೨. ಅದೇ, ಸಂಪುಟ ೪, ಚಾಮರಾಜನಗರ ಶಾಸನ ಸಂಖ್ಯೆ ೧೮३, ೨೮೮, ೨೯೫, ३೫೧, ३೮೧, ३೯३, ३೯೪.

३. ಅದೇ, ಸಂಪುಟ ೫, ತಿ. ನರಸೀಪುರ ಶಾಸನ ಸಂಖ್ಯೆ ೧೬, ಮೈಸೂರು ೯೯.

೪. ಅದೇ, ಸಂಪುಟ ೭, ನಾಗಮಂಗಲ ಶಾಸನ ಸಂಖ್ಯೆ ೧೭३.

೫. ಬಿ. ಎಸ್. ಸಣ್ಣಯ್ಯ (ಅನು) ದೇವಚಂದ್ರನ 'ರಾಜಾವಳೀ ಕಥಾಸಾರ' ಕನಕಗಿರಿ ಪ್ರಕಾಶನ, ೨೦೦೦, ಮಲೆಯೂರು.

೬. ಎ. ವಿ. ವೆಂಕಟರತ್ನ, ವಿಜಯನಗರದಲ್ಲಿ ಸ್ಥಳೀಯ ಸರ್ಕಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೪.

೭. ವಾಸುದೇವಾಚಾರ್ಯ 'ನಾ ಕಂಡ ಕಲಾವಿದರು' ೧೯೮೫, ಮೈಸೂರು.

೮. ಮ. ಭಾ. ಭೋಯಿ (ಅನು) ತಿರುಮಲಾಚಾರ್ಯ ವಿರಚಿತ 'ಚಿಕ್ಕದೇವರಾಯ ವಂಶಾವಳಿ' ಕನ್ನಡ ಸಾಹಿತ್ಯ ಪರಿಷತ್ತು, ೧೯೯೯, ಬೆಂಗಳೂರು.

೯. ಡಾ. ಪಿ. ವಿ. ನಂಜರಾಜಅರಸು, ಪ್ರೊ. ಎಸ್. ಎಲ್. ಚಂದ್ರರಾಜ ಅರಸು (ಸಂ), ನಾಲ್ವಡಿ ಕೃಷ್ಣರಾಜ ಒಡೆಯರ್ – ಒಂದು ದರ್ಶನ, ಅಖಿಲ ಕರ್ನಾಟಕ ಅರಸು ಪರಿಷತ್, ೧೯೯೬, ಮೈಸೂರು.

೧೦. ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ (ಸಂ) ಲೋಕಸೇವಾನಿರತ ಅಂಬಳೆ ಅಣ್ಣಯ್ಯ ಪಂಡಿತರ ಚರಿತ್ರೆ (ಪರಿಷ್ಕೃತ ಆವೃತ್ತಿ) ೨೦೨೧.

೧೧. ಡಾ. ಹೆಚ್. ಎಸ್. ಉಷಾರಾಣಿ, 'ತಗಡೂರ ಪ್ರಭುಗಳು' ಇತಿಹಾಸ ದರ್ಶನ, ಸಂಪುಟ ೨೨, ಕರ್ನಾಟಕ ಇತಿಹಾಸ ಅಕಾಡೆಮಿ, ೨೦೦೭, ಬೆಂಗಳೂರು.

೧೨. ಡಾ. ಸೂರ್ಯನಾಥ ಕಾಮತ್, ಒಕ್ಕಲುತನ ಮತ್ತು ಒಕ್ಕಲಿಗರು: ಇತಿಹಾಸ ಅನ್ವೇಷಣೆ, ಅರ್ಚನಾ ಪ್ರಕಾಶನ, ೨೦೦೬, ಬೆಂಗಳೂರು.

೧३. ಡಾ. ಸೂರ್ಯನಾಥ ಕಾಮತ್ (ಸಂ) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೨ ಮತ್ತು ३.

೧೪. ಡಾ. ಸೂರ್ಯನಾಥ ಕಾಮತ್ (ಸಂ) ಮೈಸೂರು ಗೆಜೆಟಿಯರ್, ೧೯೮೫, ಬೆಂಗಳೂರು.

೧೫. ಡಾ. ಬಿ. ಎ. ಸುಧಾಮಣಿ, 'ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು, ೨೦೦೯. ಮೈಸೂರು.

೧೬. ಸಿ. ಹಯವದನರಾವ್ (ಸಂ), ಮೈಸೂರು ಗೆಜೆಟಿಯರ್, ಸಂಪುಟ ೫, ೧೯३೦, ಮೈಸೂರು.



**Dr. H. S. Usharani**
Associate Professor of Histroy and Principal (Retd.,)
# 274, 4th Main,
Bank Employees Housing Colony
Bogadi, Mysuru-570 026

# ಛಾಯಾಚಿತ್ರಗಳು



ಮೂಲಸ್ಥಾನೇಶ್ವರ ದೇವಾಲಯದ ಮುಂದಿರುವ ವೀರಗಲ್ಲು




ಪ್ರಸ್ತುತ ಕಾರ್ಯಾಲಯ, ತಗಡೂರು





ಸತ್ಯಾಗ್ರಹ ಆಶ್ರಮ, ತಗಡೂರು ಸತ್ಯಾಗ್ರಹ ಆಶ್ರಮದ ಆವರಣ, ತಗಡೂರು



ಗಾಂಧಿ ಆಶ್ರಮ, ತಗಡೂರು



ಪ್ರಸ್ತುತ ನೂಲು ತೆಗೆಯುವ ಕಾರ್ಯದಲ್ಲಿ ಮಹಿಳೆಯರು, ತಗಡೂರು





ತಗಡೂರು ಆಶ್ರಮದ ಆವರಣದಲ್ಲಿರುವ ನೂಲುವ ಸಾಮಗ್ರಿಗಳು



ನೂಲುವ ಸಾಮಗ್ರಿಗಳು, ತಗಡೂರು ಆಶ್ರಮ





ತಗಡೂರು ಕೊವರ ಕೇತಗೌಡ ಕಟ್ಟಿಸಿದ ಲಕ್ಷ್ಮೀಕಾಂತ ದೇವಾಲಯ, ಕ್ಯಾತನಹಳ್ಳಿ, ಹೆಗ್ಗಡದೇವನಕೋಟೆ ತಾಲ್ಲೂಕು



ನವರಂಗ ಮಂಟಪ, ಲಕ್ಷ್ಮೀಕಾಂತ ದೇವಾಲಯ, ಕ್ಯಾತನಹಳ್ಳಿ, ಹೆಗ್ಗಡದೇವನಕೋಟೆ ತಾಲ್ಲೂಕು




ಸೂರ್ಯನ ವಿಗ್ರಹ, ಲಕ್ಷ್ಮೀಕಾಂತ ದೇವಾಲಯ, ಕ್ಯಾತನಹಳ್ಳಿ,
ಹೆಗ್ಗಡದೇವನಕೋಟೆ ತಾಲ್ಲೂಕು



ಗಜಲಕ್ಷ್ಮೀ, ಲಕ್ಷ್ಮೀಕಾಂತ ದೇವಾಲಯ, ಕ್ಯಾತನಹಳ್ಳಿ, ಹೆಗ್ಗಡದೇವನಕೋಟೆ ತಾಲ್ಲೂಕು





ದೇ. ನಾಗಚಂದ್ರಶರ್ಮ



ತಗಡೂರು ರಾಮಚಂದ್ರರಾಯರು



ಜನತಾ ಪ್ರೌಢಶಾಲೆ, ತಗಡೂರು



ಹನುಮ ಜಯಂತಿಯಂದು ವಯೋವೃದ್ಧರಿಗೆ ಕಂಬಳಿ ವಿತರಿಸುತ್ತಿರುವುದು



ಅಲದ ಮರ, ಮೂಕಸಾಕ್ಷಿ ತಗಡೂರು ಆಶ್ರಮ





ನೇಯ್ಗೆ ವಿಭಾಗ, ತಗಡೂರು ಗ್ರಾಮ



ನೂಲುವುದು, ತಗಡೂರು ಆಶ್ರಮ





ಮೂಲಸ್ಥಾನೇಶ್ವರ ದೇವಾಲಯ









**ಲಕ್ಷ್ಮಿಕಾಂತ ದೇವಾಲಯ, ತಗಡೂರು**





**ಕೊಮ್ಮಕೆರೆ, ತಗಡೂರು**

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಹೆಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |